ಸಂಪುಟ: 05 ಸಂಚಿಕೆ: 295 ಪುಟಗಳು: 08 ಗುರುವಾರ 08 ಜನವರಿ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಪರೀಕ್ಷೆಯಲ್ಲಿ ಮಾಡಿದರೆ ಕಾಪಿ, ಆಗುತ್ತಿಯ ಜೀವನದಲ್ಲಿ ಕಪಿ, ನಾ ಹೇಳಿದ್ದು ಅರ್ಥವಾಗದಿದ್ದರೆ ಮಾಡು ಮಾಫಿ, ಬಿಸಿ ಇದ್ದಾಗ ಕುಡಿದುಬಿಡು ಕಾಫೀ

## ರೆಕಾರ್ಡ್ ಮಾಡಿ ಸಿದ್ದರಾಮಯ್ಯ ನಾಟೌಟ್: ವಾಟ್ ನೆಕ್ಸ್ಟ್?


• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ದೀರ್ಘಾವಧಿ ಮುಖ್ಯಮಂತ್ರಿ ದಾಖಲೆ ಬರೆದು ಸಿದ್ದರಾಮಯ್ಯ ಅವರು ಇವತ್ತಿಗೆ ರೆಕಾರ್ಡ್ ರಾಮಯ್ಯ ಆಗಿದ್ದಾರೆ. ಇದರ ಜೊತೆಗೆ ಇನ್ನೊಂದು ದಾಖಲೆಗೂ ಸಿದ್ಧವಾಗ್ತಿದ್ದಾರೆ ಸಿದ್ದು. ಈ ನಡುವೆ ಪವರ್ ಶೇರ್ ಕಥೆ ಏನು? ಸಿದ್ದರಾಮಯ್ಯ ನೆಕ್ಸ್ಟ್ ಗೇಮ್ ಏನು? ಎಂಬ ಕುತೂಹಲ ಇದೆ.

**ವಿರೋಧಿಗಳಿಗೆ ನಾಕ್. ನಾಕ್. ನಾಕ್ ಔಟ್.**

ವಿರೋಧಿಗಳಿಗೆ ನಾಕ್. ನಾಕ್. ನಾಕ್ ಔಟ್. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ನಾಟ್ ಔಟ್. ದೇವರಾಜು ಅರಸು ಅವರ ದಾಖಲೆ ಅಳಿಸಿ ಇವತ್ತಿಗೆ ಸಿದ್ದರಾಮಯ್ಯ ತಮ್ಮ ಹೆಸರಲ್ಲಿ ದಾಖಲೆ ಬರೆದಿದ್ದಾರೆ. ಕರ್ನಾಟಕದ ದೀರ್ಘಾವಧಿ ಸಿಎಂ ಆಗಿ ಸಿದ್ದರಾಮಯ್ಯ ರಾಜಕೀಯದಲ್ಲಿ ಮಿಂಚಿದ್ದಾರೆ.

ದೇವರಾಜ ಅರಸು ಅವರ 2,792 ದಿನಗಳ ಅಧಿಕಾರ ಅವಧಿಯನ್ನ ದಾಟಿ 2793 ದಿನದ ದಾಖಲೆ ಬರೆದು ಮುನ್ನುಗ್ಗುತ್ತಿದ್ದಾರೆ. ಇವತ್ತು ಸಿಎಂ ಸಿದ್ದರಾಮಯ್ಯ ನಿವಾಸಕ್ಕೆ ಹಲವು ಸಚಿವರು, ಶಾಸಕರು ಭೇಟಿ ಮಾಡಿ ವಿಶ್ ಮಾಡಿದ್ರು. ಈ ನಡುವೆ ಸಂಕ್ರಾಂತಿ ಬಳಿಕ ಸಿಎಂ ಸಿದ್ದರಾಮಯ್ಯ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಇನ್ನೊಂದೆಡೆ ನಾಟ್ ಔಟ್ ಸಮಾವೇಶಕ್ಕೆ ಭರ್ಜರಿ ಗೇಮ್ ಪ್ಲ್ಯಾನ್ ನಡೆದಿದ್ದು, ಹೈಕಮಾಂಡ್ ತೀರ್ಮಾನದ ಬಳಿಕ ಅನುಮತಿ ಸಾಧ್ಯತೆ ಇದೆ.



ಡೆಲ್ಲಿ ವಿಸಿಟ್ ವೇಳೆ ಬಜೆಟ್ ತಯಾರಿ, ಸಂಪುಟ ಪುನಾರಚನೆಗೆ ಹೈಕಮಾಂಡ್ ಮುಂದೆ ಕ್ಲೈಮ್ ಮಾಡುವ ಗೇಮ್ ಸಿದ್ದರಾಮಯ್ಯ ಅವರದ್ದು ಎಂದು ಆಪ್ತ ಮೂಲಗಳು ಮಾಹಿತಿ ನೀಡಿವೆ. ಆಗ ಹೈಕಮಾಂಡ್ ಏನ್ ಹೇಳುತ್ತೆ ಎಂಬ ಆಧಾರದ ಮೇಲೆ ಸಮಾವೇಶ ನಿಗದಿ ಆಗಲಿದ್ದು, ಮೈಸೂರು, ಕೊಪ್ಪಳ, ಹುಬ್ಬಳ್ಳಿ ಮೂರು ಸ್ಥಳಗಳ ಬಗ್ಗೆ ಚರ್ಚೆ ನಡೆದಿದೆ. ಆ ಸಮಾವೇಶದ ಮೂಲಕವೇ ಎಲ್ಲದಕ್ಕೂ ಉತ್ತರ ಕೊಡಲು ಸಜ್ಜಾಗಿದ್ದು, ನಾಟ್‌ಔಟ್ ಸಮಾವೇಶ ಕುತೂಹಲ ಇದೆ. ಈ ನಡುವೆ ಡಿಕೆಶಿ ಬೆಂಬಲಿಗರು ಸಿಎಂಗೆ ವಿಶ್ ಮಾಡಿದ್ದಾರೆ. ಇನ್ನು ಸಿದ್ದರಾಮಯ್ಯ ಅವರನ್ನ ದೇವರಾಜ ಅರಸು ಅವರಿಗೆ ಹೋಲಿಕೆ ಬಗ್ಗೆ ಬಿಜೆಪಿ, ಜೆಡಿಎಸ್ ಕಿಡಿಕಾರಿವೆ. ಅರಸು ಅವರ ಆಡಳಿತಕ್ಕೆ ಹೋಲಿಕೆ ಮಾಡುವುದು ಬೇಡ, ಸಿದ್ದರಾಮಯ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಯಡಿಯೂರಪ್ಪ ವಾಗ್ದಾಳಿ ನಡೆಸಿದ್ದಾರೆ.

ಕುಮಾರಸ್ವಾಮಿ ಮಾತನಾಡಿ, ಅಧಿಕಾರದಲ್ಲಿದ್ದು ಏನು ಮಾಡಿದರು ಅನ್ನೋ ದಾಖಲೆಬೇಕು, ಎಷ್ಟು ದಿನ ಇದ್ದರೂ ಅದು ದಾಖಲೆ ಅಲ್ಲ ಎಂದು ಟಾಂಗ್ ಕೊಟ್ಟಿದ್ದಾರೆ. ಇನ್ನು ಜೋಕ್ ಆಫ್ ದಿ ಇಯರ್ ಅಂತಾ ಪರಿಷತ್ ಸದಸ್ಯ ವಿಶ್ವನಾಥ್ ವ್ಯಂಗ್ಯವಾಡಿದ್ದಾರೆ.

ಒಟ್ಟಿನಲ್ಲಿ ಸಿದ್ದರಾಮಯ್ಯ ದೀರ್ಘಾವಧಿ ಸಿಎಂ ದಾಖಲೆ ಬರೆದಿದ್ದು, ದೇಶದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ ರೆಕಾರ್ಡ್ ಮಾಡಲು ತುದಿಗಾಲಿನಲ್ಲಿದ್ದು, 17ನೇ ಬಜೆಟ್ ಮಂಡಿಸ್ತಾರಾ? ಮುಂದೇನಾಗುತ್ತೆ ರಾಜಕೀಯ ಪರಿಸ್ಥಿತಿ ಕಾದುನೋಡಬೇಕಿದೆ.

## ಬಳ್ಳಾರಿ ಗಲಭೆ : ಮತ್ತೊಬ್ಬ ಐಪಿಎಸ್ ಅಧಿಕಾರಿ ಎತ್ತಂಗಡಿ

• ಉದಯವಾಹಿನಿ, ಬೆಂಗಳೂರು

ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಭಾರೀ ಜಿದ್ದಾಜಿದ್ದಿನ ವಾಕ್ಸಮರಕ್ಕೆ ಕಾರಣವಾಗಿರುವ ಬಳ್ಳಾರಿ ಗಲಭೆ ಪ್ರಕರಣದಲ್ಲಿ ಮತ್ತೋರ್ವ ಐಪಿಎಸ್ ಅಧಿಕಾರಿ ಎತ್ತಂಗಡಿಯಾಗಿದೆ. ಬಳ್ಳಾರಿಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಪವನ್ ನೆಜ್ಜೂರ್ ಅಮಾನತುಗೊಳಿಸಿದ ಬೆನ್ನಲ್ಲೇ ರಾಜ್ಯಸರ್ಕಾರ ಬಳ್ಳಾರಿ ವಲಯ ಡಿಐಜಿ ವರ್ತಿಕಾ ಕಟಿಯಾರ್ ಅವರನ್ನು ವರ್ಗಾವಣೆಗೊಳಿಸಿ ಆದೇಶ ಹೊರಡಿಸಿದೆ.

ತೆರವಾಗಿರುವ ಈ ಸ್ಥಾನಕ್ಕೆ ಹುದ್ದೆ ನಿರೀಕ್ಷೆಯಲ್ಲಿದ್ದ ಡಾ.ಪಿ.ಎಸ್. ಹರ್ಷ ಅವರನ್ನು ಬಳ್ಳಾರಿ ವಲಯದ ಐಜಿಪಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.ವರ್ಗಾವಣೆಗೊಂಡಿರುವ ವರ್ತಿಕಾ ಕಟಿಯಾರ್ ಅವರನ್ನು ನಾಗರಿಕ ಹಕ್ಕುಗಳ ನಿರ್ದೇಶನಾಲಯದ ಡಿಐಜಿಯಾಗಿ ವರ್ಗಾವಣೆ ಮಾಡಲಾಗಿದೆ.

## ಮಹಿಳೆಯನ್ನು ವಿವಸ್ತ್ರಗೊಳಿಸಿ ಪೊಲೀಸರಿಂದ ಅವಮಾನ : ಕ್ರಮಕ್ಕೆ ಸಿ.ಟಿ.ರವಿ ಆಗ್ರಹ

• ಉದಯವಾಹಿನಿ, ಬೆಂಗಳೂರು

ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿಯಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಅವಮಾನ ಮಾಡಿದ ಹಿನ್ನೆಲೆಯಲ್ಲಿ ತಕ್ಷಣವೇ ಘಟನೆಗೆ ಕಾರಣರಾದ ಪೊಲೀಸರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಒತ್ತಾಯಿಸಿದ್ದಾರೆ. ತಪ್ಪು ಮಾಡಿದ್ದರೆ ಮಹಿಳೆಯ ಮೇಲೆ ಕಾನೂನು ಪ್ರಕಾರ ಶಿಕ್ಷೆಯಾಗಲಿ. ಆದರೆ ಕಾನೂನನ್ನು ರಕ್ಷಣೆ ಮಾಡಬೇಕಾದ ಪೊಲೀಸರೇ ವಿವಸ್ತ್ರಗೊಳಿಸಿ ರಾಕ್ಷಸರಂತೆ ವರ್ತಿಸಿರುವುದು ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಾಗಿದೆ ಎಂದು ವಾಗ್ದಾಳಿ ನಡೆಸಿದರು. ಗೃಹಸಚಿವ ಡಾ.ಜಿ.ಪರಮೇಶ್ವರ್ ತಕ್ಷಣವೇ ಮಧ್ಯಪ್ರವೇಶ ಮಾಡಬೇಕು. ಅವರು ಘಟನೆ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆಯಲಿ. ಯಾರೇ ಭಾಗಿಯಾಗಿದ್ದರೂ ಅವರನ್ನು ಕಾನೂನು ಪ್ರಕಾರ ಶಿಕ್ಷೆಗೊಳಪಡಿಸಬೇಕೆಂದು ಒತ್ತಾಯಿಸಿದರು.

## ದೇವರಾಜ ಅರಸು ಅವರಿಗೆ ಸಿದ್ದರಾಮಯ್ಯ ಸಾಟಿ ಇಲ್ಲ : ಹೆಚ್.ವಿಶ್ವನಾಥ್

• ಉದಯವಾಹಿನಿ, ಬೆಂಗಳೂರು

ಸಿದ್ದರಾಮಯ್ಯ ದೇವರಾಜ ಅರಸು ದಾಖಲೆ ಮುರಿದೆ ಎನ್ನುತ್ತಿದ್ದಾರೆ. ಇಟ್ ಇಸ್ ಜೋಕ್ ಆಫ್ ದ ಇಯರ್ 2026 ಎಂದು ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ವ್ಯಂಗ್ಯವಾಡಿದ್ದಾರೆ. ಸದಾಶಿವನಗರದಲ್ಲಿ ಡಿಸಿಎಂ ಡಿಕೆಶಿ ಭೇಟಿ ಮಾಡಿ ಬಳಿಕ ಮಾತನಾಡಿದ ಅವರು, ನಮ್ಮನ್ನೆಲ್ಲ ದೇವರಾಜ ಅರಸು ಅವರು ಬೆಳೆಸಿದ್ದು. ಬಹುಶಃ ದೇವರಾಜ ಅರಸು ಅವರನ್ನ ಮತ್ತು ಇಂದಿರಾಗಾಂಧಿ ಅವರನ್ನ ಸಿದ್ದರಾಮಯ್ಯನವರಷ್ಟು ಬೈದವರು ಯಾರಿಲ್ಲ. ಆದರೆ ಈಗ ದೇವರಾಜ ಅರಸು ಅವರ ಬಗ್ಗೆ ಮಾತನಾಡುತ್ತಾರೆ ಎಂದು ಟೀಕಿಸಿದರು. ಅರಸು ಅವರು ಹಾವನೂರು ವರದಿ ತಗೊಂಡು ಬಂದರು. ಹಿಂದುಳಿದ ವರ್ಗದ ಅಧಿಕಾರಿ ಇದ್ದಾರೆ ಅಂದರೆ ಅದಕ್ಕೆ ಕಾರಣ ಅರಸು. ರಾಹುಲ್ ಗಾಂಧಿ ಹೇಳಿದ್ರು ಅನ್ನೋ ಕಾರಣಕ್ಕೆ ವರದಿ ಬಿಸಾಕಿದ್ರಿ. ಕಾಂಗ್ರೆಸ್ ಬಗ್ಗೆ ಸಿದ್ದರಾಮಯ್ಯ ಮಾತನಾಡುತ್ತಲೇ ಇಲ್ವಲ್ಲಾ? ಬರೀ ಅಹಿಂದ ಅಹಿಂದ, ಅಹಿಂದವೇ ಕಾಂಗ್ರೆಸ್ ಎಂದು ತಿರುಗೇಟು ಕೊಟ್ಟರು.

## ಗಾಂಧೀಜಿಗೆ ಅಪಮಾನ ಮಾಡಿದ್ದು ಕಾಂಗ್ರೆಸ್ : ಗೋವಿಂದ ಕಾರಜೋಳ

• ಉದಯವಾಹಿನಿ, ಬೆಂಗಳೂರು

ನರೇಗಾದಡಿ ವಿನೂತನ ತಂತ್ರಜ್ಞಾನ, ಪಾರದರ್ಶಕತೆ ಕಾಂಗ್ರೆಸ್ಸಿಗರಿಗೆ ದೊಡ್ಡ ಸವಾಲಾಗಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಮತ್ತು ಸಂಸದ ಗೋವಿಂದ ಕಾರಜೋಳ ಅವರು ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಭ್ರಷ್ಟಾಚಾರ ಮಾಡಿ ಖಜಾನೆಯಿಂದ ಹಣ ಎತ್ತಿಕೊಂಡು ಹೋಗುತ್ತಿದ್ದರು. ಅದು ತಪ್ಪಲಿದೆ ಎಂದರು. ಅದಕ್ಕಾಗಿ ಹೊಟ್ಟೆ ಉರಿಯಿಂದ ಹೇಳಿಕೊಳ್ಳುತ್ತಿದ್ದಾರೆ ಎಂದು ನುಡಿದರು. ಗಾಂಧಿ ಹೆಸರನ್ನು ಅಳಿಸಿದವರು ಯಾರು ಎಂಬುದಕ್ಕೆ ಉದಾಹರಣೆಗಳನ್ನು ನೀಡಿದ ಅವರು, ರಾಜ್ಯದಲ್ಲಿ 25 ಯೋಜನೆಗಳು ರಾಜೀವ್ ಗಾಂಧಿ, ಇಂದಿರಾ ಗಾಂಧಿ ಹೆಸರಿನಲ್ಲಿವೆ. ಶೈಕ್ಷಣಿಕ ಸಂಸ್ಥೆಗಳಲ್ಲಿ 55 ರಾಜೀವ್ ಗಾಂಧಿ, ಇಂದಿರಾ ಗಾಂಧಿ ಹೆಸರಿನಲ್ಲಿ 21 ಮತ್ತು ನೆಹರೂ ಹೆಸರಿನಲ್ಲಿ 22 ಇವೆ ಎಂದು ತಿಳಿಸಿದರು. ಪ್ರತಿಯೊಂದು ಕ್ರೀಡಾಕೂಟದಲ್ಲೂ ರಾಜೀವ್ ಗಾಂಧಿ, ರಾಹುಲ್ ಗಾಂಧಿ ಹೆಸರು, ಇಂದಿರಾ ಗಾಂಧಿ ಹೆಸರು ಇಟ್ಟುಕೊಂಡು ಇವರು ಜನರಿಗೆ ಮೋಸ ಮಾಡಿ ನಿಜವಾದ ಗಾಂಧಿಯನ್ನು ಮರೆತುಬಿಟ್ಟವರು ಎಂದು ಟೀಕಿಸಿದರು. ಇವತ್ತು ನರೇಂದ್ರ ಮೋದಿಜೀ ಅವರು ತಮ ಹೆಸರನ್ನು ಒಂದೇ ಒಂದು ಸಂಸ್ಥೆಗಾಗಲೀ, ಯೋಜನೆಗಾಗಲೀ ಇಟ್ಟುಕೊಂಡಿಲ್ಲ. ಸರಕಾರದ ಹೆಸರೇ ಇದೆ ಎಂದು ವಿವರಿಸಿದರು. 5 ವಿಮಾನನಿಲ್ದಾಣ, ಬಂದರುಗಳಿಗೆ ಇಂದಿರಾಗಾಂಧಿ, ರಾಹುಲ್ ಗಾಂಧಿ, ರಾಜೀವ್ ಗಾಂಧಿ ಹೆಸರು ಇಟ್ಟುಕೊಂಡು ಕುಳಿತಿದ್ದಾರಲ್ಲವೇ? ಇವರಿಗೆ ಮಹಾತ್ಮ ಗಾಂಧಿ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ? ಎಂದು ಪ್ರಶ್ನಿಸಿದರು.

## ಘೋರ ಕೃತ್ಯ ಬಾಲಕಿ ಅಪಹರಿಸಿ ಹತ್ಯೆ



• ಉದಯವಾಹಿನಿ, ಬೆಂಗಳೂರು

ಅಪಹರಣಕ್ಕೊಳಗಾಗಿದ್ದ 6 ವರ್ಷದ ಬಾಲಕಿ ಶವವಾಗಿ ಪತ್ತೆಯಾದ ಘಟನೆ ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ವರದಿಯಾಗಿದೆ. ಪಶ್ಚಿಮ ಬಂಗಾಳ ಮೂಲದ ಷಹನಾಜ್ ಖಾತುಂ ಹತ್ಯೆಯಾದ ಬಾಲಕಿ. ಪ್ಲಾಸ್ಟಿಕ್ ರೋಪ್ ಬಳಸಿ ಉಸಿರುಗಟ್ಟಿಸಿ ಹತ್ಯೆಯಾದ ಸ್ಥಿತಿಯಲ್ಲಿ ನಲ್ಲೂರುಹಳ್ಳಿ ಬಳಿ ಬಾಲಕಿಯ ಮೃತದೇಹ ಪತ್ತೆಯಾಗಿದೆ.

**ಬೆಂಗಳೂರು ಕ್ರೈಮ್**

**ತಾಯಿ ಮೇಲಿನ ಸಿಟ್ಟಿಗೆ ಹತ್ಯೆ**

**ಬ್ಯಾಗ್‌ನಲ್ಲಿ ಶವವಿಟ್ಟು ಚರಂಡಿಗೆ ಎಸೆದ ಆರೋಪಿ**

ಬಾಲಕಿಯ ಪೋಷಕರು ವಾಸವಿದ್ದ ಪ್ರದೇಶದಲ್ಲಿಯೇ ನೆಲೆಸಿದ್ದ ಕುಟುಂಬದ ವ್ಯಕ್ತಿಯೊಬ್ಬರ ವಿರುದ್ಧ ಶಂಕೆ ವ್ಯಕ್ತವಾಗಿದ್ದು, ಆರೋಪಿಗಾಗಿ ಹುಡುಕಾಟ ಮುಂದುವರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ಮೂಲದ ಬಾಲಕಿ ಪೋಷಕರು ನಲ್ಲೂರುಹಳ್ಳಿ ಬಳಿ ಕೂಲಿ ಕೆಲಸ ಮಾಡಿಕೊಂಡು ವಾಸವಿದ್ದರು. ಅವರೊಂದಿಗೆ ವಾಸವಿದ್ದ ಪಶ್ಚಿಮ ಬಂಗಾಳ ಮೂಲದ ಮತ್ತೊಂದು ಕುಟುಂಬ ಹಾಗೂ ಬಾಲಕಿಯ ತಾಯಿಯ ನಡುವೆ ಇತ್ತೀಚಿಗೆ ಜಗಳವಾಗಿತ್ತು. ಈ ನಡುವೆ ಜನವರಿ 5ರಂದು ಬೆಳಗ್ಗೆ ಮನೆ ಬಳಿ ಆಟವಾಡುತ್ತಿದ್ದ ಬಾಲಕಿ ನಾಪತ್ತೆಯಾಗಿದ್ದಳು.

ಅಕ್ಕಪಕ್ಕದಲ್ಲಿ ಹುಡುಕಾಟ ನಡೆಸಿದ್ದ ಪೋಷಕರು, ಜನವರಿ 6ರಂದು ಮಧ್ಯಾಹ್ನ ವೈಟ್‌ಫೀಲ್ಡ್ ಠಾಣೆಗೆ ದೂರು ನೀಡಿದ್ದರು. ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸರು ತೀವ್ರ ಹುಡುಕಾಟ ಆರಂಭಿಸಿದ್ದರು. ತಡರಾತ್ರಿ ನಲ್ಲೂರುಹಳ್ಳಿಯ ದೇವಸ್ಥಾನದ ರಸ್ತೆಯಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಬಾಲಕಿಯ ಶವ ಪತ್ತೆಯಾಗಿದೆ. ಮೃತದೇಹವದ ಮರಣೋತ್ತರ ಪರೀಕ್ಷೆಗಾಗಿ ವೈದೇಹಿ ಆಸ್ಪತ್ರೆಗೆ ರವಾನಿಸಲಾಗಿದೆ.

ಮೃತದೇಹದಲ್ಲಿ ಬೇರೆ ಯಾವುದೇ ಗಾಯಗಳು ಕಂಡು ಬಂದಿಲ್ಲ. ಪ್ಲ್ಯಾಸ್ಟಿಕ್ ರೋಪ್ ಬಳಸಿ ಉಸಿರುಗಟ್ಟಿಸಿ ಹತ್ಯೆಗೈದಿರುವುದು ಪ್ರಾಥಮಿಕ ತನಿಖೆಯಲ್ಲಿ ಕಂಡು ಬಂದಿದೆ. ಆರೋಪಿಯ ಪತ್ತೆಗಾಗಿ ವಿಶೇಷ ತಂಡಗಳನ್ನ ರಚಿಸಲಾಗಿದ್ದು, ತನಿಖೆ ಮುಂದುವರಿಸಲಾಗಿದೆ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಸೈದುಲು ಅಡಾವತ್ ತಿಳಿಸಿದ್ದಾರೆ.

| | |
|---|---|
| 1 | ಬಾಲಕಿ ಕತ್ತು ಹಿಸುಕಿ ಕೊಲೆ ಆರೋಪ |
| 2 | ಆರು ವರ್ಷದ ಬಾಲಕಿ ಅಪಹರಿಸಿ ಕೊಲೆ; ವಲಸೆ ಕಾರ್ಮಿಕನ ಮೇಲೆ ಶಂಕೆ! |
| 3 | ಬೆಂಗಳೂರಲ್ಲಿ ಅಮಾನವೀಯ ಘಟನೆ |

### ಮೋರಿಯಲ್ಲಿ ಮೃತದೇಹ ಪತ್ತೆ

ತಡರಾತ್ರಿ ಶೋಧ ಕಾರ್ಯದ ವೇಳೆ ನಲ್ಲೂರ್ಹಳ್ಳಿಯ ದೇವಸ್ಥಾನ ರಸ್ತೆಯ ಬಳಿಯ ಮೋರಿಯಲ್ಲಿ ಬಾಲಕಿಯ ಮೃತದೇಹ ಪತ್ತೆಯಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ವರದಿಗಾಗಿ ಪೊಲೀಸರು ಕಾಯುತ್ತಿದ್ದಾರೆ. ಪ್ರಕರಣದ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ಡಿಸಿಪಿ, ಮಗುವಿನ ಮೇಲೆ ಯಾವುದೇ ಲೈಂಗಿಕ ದೌರ್ಜನ್ಯ ಅಥವಾ ದೈಹಿಕ ಹಲ್ಲೆಯ ಗುರುತುಗಳಿಲ್ಲ. ಪ್ಲಾಸ್ಟಿಕ್ ವೈರ್‌ನಿಂದ ಕುತ್ತಿಗೆ ಬಿಗಿದು ಮಗುವನ್ನು ಉಸಿರುಗಟ್ಟಿಸಿ ಕೊಲೆ ಮಾಡಲಾಗಿದೆ. ಆರೋಪಿ ಕುಟುಂಬ ಮತ್ತು ಬಾಲಕಿಯ ಕುಟುಂಬದ ನಡುವೆ ಹಳೆಯ ವೈಷಮ್ಯವಿತ್ತು. ಇದೇ ದ್ವೇಷದ ಹಿನ್ನೆಲೆಯಲ್ಲಿ ಮಗುವನ್ನು ಕೊಲೆ ಮಾಡಲಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಸಂಶಯಾಸ್ಪದ ವ್ಯಕ್ತಿಯ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಿದ್ದು, ಆತನನ್ನು ಬಂಧಿಸಲು ವಿಶೇಷ ತಂಡವನ್ನು ರಚಿಸಲಾಗಿದೆ. ಪರಿಚಿತನೇ ಮಗುವನ್ನು ಕರೆದೊಯ್ದು ಈ ರೀತಿ ಬರ್ಬರವಾಗಿ ಕೊಲೆ ಮಾಡಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದ್ದು, ಆರೋಪಿಯ ಬಂಧನಕ್ಕಾಗಿ ಪೊಲೀಸರು ಜಾಲ ಬೀಸಿದ್ದಾರೆ.

**2ನೇ ಪತ್ನಿಯನ್ನ ತೊರೆಯುವಂತೆ ರೌಡಿಶೀಟರ್ ಮೇಲೆ ಮೊದಲ ಪತ್ನಿಯಿಂದ ಹಲ್ಲೆ:** ಎರಡನೇ ಪತ್ನಿಯನ್ನ ತೊರೆಯುವಂತೆ ಮೊದಲ ಪತ್ನಿ ತನ್ನ ಪತಿಯಾದ ರೌಡಿಶೀಟರ್ ಓರ್ವನಿಗೆ ಹಲ್ಲೆ ನಡೆಸಿರುವ ಘಟನೆ ಮಂಗಳವಾರ ಬೆಂಗಳೂರಿನಲ್ಲಿ ನಡೆದಿತ್ತು. ಇದೀಗ ಹಲ್ಲೆಗೊಳಗಾದ ರೌಡಿಶೀಟರ್ ತನ್ನ ಪತ್ನಿ ವಿರುದ್ಧ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾನೆ.ಜೆ. ಜೆ ನಗರದ ನಿವಾಸಿ ಸೈಯದ್ ಅಸ್ಗರ್ ಎಂಬಾತ ತನ್ನ ಪತ್ನಿಯ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾನೆ. ಕಳ್ಳತನ, ಮಾದಕ ಪದಾರ್ಥಗಳ ಮಾರಾಟ ಪ್ರಕರಣಗಳಲ್ಲಿ ಜೈಲು ಪಾಲಾಗಿದ್ದ ಆರೋಪಿ, ಇತ್ತೀಚಿಗೆ ಜೈಲಿನಿಂದ ಹೊರಬಂದಿದ್ದ. ಆದರೆ, ಎರಡನೇ ಪತ್ನಿಯನ್ನ ತೊರೆಯುವಂತೆ ಒತ್ತಾಯಿಸಿದ್ದ ತನ್ನ ಮೊದಲನೇ ಪತ್ನಿ ಮಾರಣಾಂತಿಕವಾಗಿ ಹಲ್ಲೆಗೈದು, ಕೈ ಮುರಿದಿದ್ದಾಳೆ ಎಂದು ಸೈಯದ್ ಅಸ್ಗರ್ ದೂರು ನೀಡಿದ್ದಾರೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಸದ್ಯ ಹಲ್ಲೆಗೊಳಗಾದ ಸೈಯದ್ ಅಸ್ಗರ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ವೈದ್ಯರ ಅವರ ಗಾಯಗೊಂಡ ಕಣ್ಣಿನ ಪಕ್ಕದಲ್ಲಿ ಹೊಲಿಗೆ ಹಾಕಿದ್ದಾರೆ. ಇದೀಗ ಅಸ್ಗರ್ ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆ.





ಇತ್ತ ಮಗು ಕಾಣೆಯಾದ ಬಗ್ಗೆ ಪೋಷಕರು ಗಾಬರಿಗೊಂಡು ಹುಡುಕಾಡಿದಾಗ ಮಗುವಿನ ಶವ ಚರಂಡಿಯಲ್ಲಿ ಪತ್ತೆಯಾಗಿದೆ. ಕೂಡಲೇ ವೈಟ್‌ಫೀಲ್ಡ್ ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗಿದ್ದು, ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಕೊಲೆ ಪ್ರಕರಣ ದಾಖಲಾಗಿದ್ದು, ಮಗುವಿನ ತಾಯಿಯ ಜೊತೆ ಜಗಳವಾಡಿದ್ದ ವ್ಯಕ್ತಿಯೇ ಈ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

**ಪೊಲೀಸ್ ತನಿಖೆ**

ತನ್ನ ತಾಯಿ ಯಾರ ಜೊತೆ ಜಗಳವಾಡಿದ್ದಾಳೆ ಎಂಬ ಅರಿವಿಲ್ಲದ ಹಸುಳೆಯನ್ನು ಇಷ್ಟು ಕ್ರೂರವಾಗಿ ಕೊಂದ ಆರೋಪಿಗಾಗಿ ವೈಟ್ ಫೀಲ್ಡ್ ಪೊಲೀಸರು ಬಲೆ ಬೀಸಿದ್ದಾರೆ. ಸೇಡಿಗಾಗಿ ಹಸುಳೆಯ ಕೊಲೆ ಮಾಡಿರುವುದು ಇಡೀ ಬಡಾವಣೆಯನ್ನು ಬೆಚ್ಚಿಬೀಳಿಸಿದೆ. ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯ ನಲ್ಲೂರಳ್ಳಿಯಲ್ಲಿ ನಾಪತ್ತೆಯಾಗಿದ್ದ 6 ವರ್ಷದ ಬಾಲಕಿ ಶವವಾಗಿ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ, ವೈಟ್‌ಫೀಲ್ಡ್ ಡಿಸಿಪಿ ಅವರು ತನಿಖೆಯ ಮಹತ್ವದ ವಿವರಗಳನ್ನು ಬಿಡುಗಡೆ ಮಾಡಿದ್ದಾರೆ. ಹಳೇ ವೈಷಮ್ಯದ ಹಿನ್ನೆಲೆ ಬಾಲಕಿಯನ್ನು ಪ್ಲಾಸ್ಟಿಕ್ ವೈರ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

**ಮರಣೋತ್ತರ ಪರೀಕ್ಷೆ**

ತಡರಾತ್ರಿ ಶೋಧ ಕಾರ್ಯದ ವೇಳೆ ನಲ್ಲೂರ್ಹಳ್ಳಿಯ ದೇವಸ್ಥಾನ ರಸ್ತೆಯ ಬಳಿಯ ಮೋರಿಯಲ್ಲಿ ಬಾಲಕಿಯ ಮೃತದೇಹ ಪತ್ತೆಯಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ವರದಿಗಾಗಿ ಪೊಲೀಸರು ಕಾಯುತ್ತಿದ್ದಾರೆ.

**ಸೇಡಿನ ಕಿಚ್ಚಿಗೆ ಬಲಿಯಾದ ಮಗು:** ಪಶ್ಚಿಮ ಬಂಗಾಳದ ಕೊಲ್ಕತ್ತಾ ಮೂಲದ ಕುಟುಂಬವೊಂದು ನಲ್ಲೂರಳ್ಳಿಯಲ್ಲಿ ವಾಸವಾಗಿತ್ತು. ಈ ಕುಟುಂಬಕ್ಕೂ ಹಾಗೂ ಅಕ್ಕಪಕ್ಕದ ಮನೆಯವರಿಗೂ ಸಣ್ಣಪುಟ್ಟ ವಿಚಾರಕ್ಕೆ ಆಗಾಗ ಗಲಾಟೆ ನಡೆಯುತ್ತಿತ್ತು ಎನ್ನಲಾಗಿದೆ. ಇತ್ತೀಚೆಗೆ ನಡೆದ ಕಿತ್ತಾಟದ ನಂತರ, ಮಗುವಿನ ತಾಯಿಗೆ ಬುದ್ಧಿ ಕಲಿಸಬೇಕು ಎಂದು ಪಣತೊಟ್ಟ ಆರೋಪಿ, ಈ ಅಮಾಯಕ ಮಗುವನ್ನೇ ತನ್ನ ಸೇಡಿಗೆ ದಾಳವನ್ನಾಗಿ ಬಳಸಿಕೊಂಡಿದ್ದಾನೆ. ಕೃತ್ಯ ಎಸಗಲು ಯೋಜಿಸಿದ ಆರೋಪಿ, ಬಾಲಕಿ ಶಹಜಾನ್ ಕತೂನ್ ಒಬ್ಬಳೇ ಇದ್ದ ಸಮಯ ನೋಡಿ ಹೊಂಚು ಹಾಕಿದ್ದನು. ಆಕೆಯನ್ನು ಅಪಹರಿಸಿ ಕುತ್ತಿಗೆ ಹಿಸುಕಿ ಬರ್ಬರವಾಗಿ ಕೊಲೆ ಮಾಡಿದ್ದಾನೆ. ಅಷ್ಟಕ್ಕೇ ನಿಲ್ಲದ ಈತನ ಕ್ರೌರ್ಯ, ಮಗುವಿನ ಶವವನ್ನು ಬ್ಯಾಗ್ ಒಂದರಲ್ಲಿ ಹತ್ತಿಕ್ಕಿ ತುಂಬಿ, ಯಾರಿಗೂ ಅನುಮಾನ ಬರದಂತೆ ಸಮೀಪದ ಚರಂಡಿಗೆ ಎಸೆದು ಪರಾರಿಯಾಗಿದ್ದಾನೆ.

## ರಾಜಶೇಖರ್ ಸಾವು ಆಕಸ್ಮಿಕ ಅಲ್ಲ, ಉದ್ದೇಶಪೂರ್ವಕ ಕೊಲೆ: ಜನಾರ್ದನ ರೆಡ್ಡಿ

• ಉದಯವಾಹಿನಿ, ಬಳ್ಳಾರಿ



ಜಿಲ್ಲೆಯಲ್ಲಿ ನಡೆದ ಬ್ಯಾನರ್ ಗಲಭೆಯಲ್ಲಿ ರಾಜಶೇಖರ್ ಸಾವು ಆಕಸ್ಮಿಕ ಅಲ್ಲ. ಅದೊಂದು ಉದ್ದೇಶಪೂರ್ವಕ ಕೊಲೆ. ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಗುರಿಯಾಗಿಸಿ ಗುಂಡು ಹಾರಿಸಲಾಗಿದೆ ಎಂದು ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ಆರೋಪಿಸಿದ್ದಾರೆ.

ಬಳ್ಳಾರಿಯಲ್ಲಿ ಮಾತನಾಡಿದ ಅವರು, ರಾಜಶೇಖರ್ ಮೇಲೆ ಗುಂಡು ಹಾರಿಸಿದ ವಿಡಿಯೋ ಈಗಾಗಲೇ ಲಭ್ಯವಾಗಿದೆ. ಅದರಲ್ಲಿ ಗಲಾಟೆ ನಡೆಯುವ ವೇಳೆ ಸತೀಶ್ ರೆಡ್ಡಿ ಗನ್‌ಮ್ಯಾನ್ ರಾಜಶೇಖರ್‌ನನ್ನು ಗುರಿಯಾಗಿಸಿ, ಗುಂಡು ಹಾರಿಸಲಾಗಿದೆ. ಇದೇ ರಾಜಶೇಖರ್ ನಮ್ಮ ಮನೆ ಮೇಲೆ ಕಲ್ಲು ತೂರಿದ್ದ, ಬಾಟಲಿ ಎಸೆದಿದ್ದ. ಆಮೇಲೆ ಪಾಪ ವಾಪಾಸ್ ಹೋಗ್ತಿದ್ದಾಗ, ಫೈರ್ ಮಾಡಿ ಕೊಲೆ ಮಾಡಲಾಗಿದೆ. ಗಲಭೆ ನಡೆದ ದಿನ 7 ರಿಂದ 7:30ರ ಸುಮಾರಿಗೆ ಸತೀಶ್ ರೆಡ್ಡಿ ಬಂದು ಗಲಾಟೆ ಮಾಡ್ತಾನೆ. ಆಮೇಲೆ 9 ಗಂಟೆ ಸುಮಾರಿಗೆ ಭರತ್ ರೆಡ್ಡಿ ಹಾಗೂ ನೂರಾರು ಬೆಂಬಲಿಗರ ಜೊತೆ ಬರ್ತಾನೆ. ಆಗ ಗಲಾಟೆ ನಡೆದು, ರಾಜಶೇಖರ್ ಕೊಲೆಯಾಗಿದೆ ಎಂದು ಕಿಡಿಕಾರಿದ್ದಾರೆ. ಚಾನಾಳ ಶೇಖರ್ ಹಾಗೂ ರಾಜಶೇಖರ್ ಕೊಲೆ ಮಾಡೋದಕ್ಕೆ ಪ್ಲಾನ್ ನಡೆದಿತ್ತು. ಆದ್ರೆ ಚಾನಾಳ ಶೇಖರ್ ಪಾರಾದ, ರಾಜಶೇಖರ್ ಕೊಲೆಯಾದ. ಈ ಕೊಲೆಗೆ ಭರತ್ ರೆಡ್ಡಿ ನೇರ ಕಾರಣ. ಹೀಗಾಗಿ ಕೂಡಲೇ ನಾರಾ ಭರತ್ ರೆಡ್ಡಿ ಬಂಧಿಸಬೇಕು.

ಭರತ್ ರೆಡ್ಡಿ ಗಲಾಟೆ ನಡೆದ ದಿನ ಕುಡಿದ ಅಥವಾ ಗಾಂಜಾ ಅಮಲಿನಲ್ಲಿ ಮಾತನಾಡಿದ ಅನ್ನುತ್ತೆ. ಕೂಡಲೇ ಪ್ರಕರಣವನ್ನ ಹೈಕೋರ್ಟ್ ನ್ಯಾಯಮೂರ್ತಿ ಅಥವಾ ಸಿಬಿಐ ತನಿಖೆಗೆ ಕೊಡಬೇಕು. ಜ.17ನೇ ತಾರೀಖು ಈ ಕುರಿತು ಪ್ರತಿಭಟನಾ ರ್‍ಯಾಲಿ ನಡೆಸುತ್ತೇವೆ ಎಂದ ಅವರು ಭದ್ರತೆ ಕೇಳಿದ್ರೆ ಡಿಕೆ ಶಿವಕುಮಾರ್ ದುರಹಂಕಾರದ ಮಾತಾಡಿದ್ದಾರೆ. ಮತ್ತೇ ಮಂಗಳವಾರವೂ (ಜ.6) ಜನಾರ್ದನ ರೆಡ್ಡಿ ಅವರಿಗೆ ಅಲ್ಲಿ ಬಿತ್ತಾ, ಇಲ್ಲಿ ಬಿತ್ತಾ ಎಂದು ದುರಹಂಕಾರದ ಮಾತಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ರಾಜ್ಯದಲ್ಲಿರೋದು ಹೆಬ್ಬೆಟ್ಟು ಗೃಹ ಸಚಿವರಾ..?: ಹೆಚ್.ಡಿ. ಕುಮಾರಸ್ವಾಮಿ

### ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸುವುದಕ್ಕೆ ಡಿಸಿಎಂ ಯಾರು? ಅವರಿಗೆ ಆ ಅಧಿಕಾರ ಯಾರು ಕೊಟ್ಟರು?

• ಉದಯವಾಹಿನಿ, ನವದೆಹಲಿ

ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸುವುದಕ್ಕೆ ಡಿಸಿಎಂ ಯಾರು? ಅವರಿಗೆ ಆ ಅಧಿಕಾರ ಯಾರು ಕೊಟ್ಟರು? ರಾಜ್ಯದಲ್ಲಿ ಇರೋದು ರಬ್ಬರ್ ಸ್ಟ್ಯಾಂಪ್ ಗೃಹ ಸಚಿವರಾ? ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ನವದೆಹಲಿಯ ತಮ್ಮ ಗೃಹ ಕಚೇರಿಯಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತಾಡಿದ ಕೇಂದ್ರ ಸಚಿವರು; ಡಿಸಿಎಂ ಅವರು ಮಂಗಳವಾರ ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಅದಕ್ಕೆ ಗೃಹ ಸಚಿವರು ಇಲ್ಲವೇ? ರಾಜ್ಯದಲ್ಲಿ ಇರುವ ಗೃಹ ಸಚಿವರು ಹೆಬ್ಬೆಟ್ಟು ಸಚಿವರಾ? ಇಂದು ಕೇಂದ್ರ ಸಚಿವರು ಖಾರವಾಗಿ ಪ್ರಶ್ನಿಸಿದರು.

**ಬೆನ್ನಿಗೆ ಚೂರಿ ಹಾಕಿ ವಿಶ್ವಾಸ ದ್ರೋಹ**

ನನಗೆ ಹಲವು ಮಾಹಿತಿಗಳು, ನೈಜ ಘಟನೆಗಳ ಬಗ್ಗೆ ಮಾಹಿತಿಕೊಡುವವರು ಇದ್ದಾರೆ. ಅದರ ಸತ್ಯಾಸತ್ಯತೆ ಪರಿಶೀಲಿಸಿ ಆ ಬಳಿಕ ನಾನು ಮಾಧ್ಯಮಗಳಿಗೆ ವಿವರಿಸಿದ್ದೇನೆ. ಜನತೆಗೆ ಸತ್ಯ ತಿಳಿಯಬೇಕಲ್ಲವೇ? ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಡಿಸಿಎಂ ಅವರು ಯಾವ ಅಧಿಕಾರದ ಮೇಲೆ ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಗೃಹ ಇಲಾಖೆಯಲ್ಲಿ ಇವರ ಹಸ್ತಕ್ಷೇಪ ಯಾಕೆ? ಡಿಸಿಎಂ ಎಂದರೆ ಅವರು ಮಂತ್ರಿ ಅಷ್ಟೇ. ಕಾಂಗ್ರೆಸ್ ಸತ್ಯ ಶೋಧನಾ ಸಮಿತಿಗೆ ಅಧಿಕಾರಿಗಳು ಯಾವ ಮಾಹಿತಿ ಕೊಡುತ್ತಾರೆ? ಕಾರ್ಯಕರ್ತರು, ಕಾಂಗ್ರೆಸ್ ನಾಯಕರು ಘಟನೆಗೆ ಕಾರಣರಾದ ಶಾಸಕರ ವಿರುದ್ದವೇ ಸತ್ಯಶೋಧನೆ ಸಮಿತಿಯ ಮುಂದೆ ದೂರು ನೀಡಿದ್ದಾರೆ. ಹಾಗಾದರೆ ನಿಮ್ಮ ತನಿಖೆಯ ಹಣೆಬರಹ ಏನು ಎಂದು ಅವರು ತೀಕ್ಷ್ಣವಾಗಿ ಪ್ರಶ್ನಿಸಿದರು.

**ಪ್ರಕರಣ ಮುಚ್ಚಿಹಾಕಲು ಪ್ರಯತ್ನ:** ಬಳ್ಳಾರಿ ನಗರದಲ್ಲಿ ನಡೆದ ಇಡೀ ಪ್ರಕರಣವನ್ನು ಮುಚ್ಚಿಹಾಕಲು ಸರ್ಕಾರ ತರಾತುರಿಯಲ್ಲಿ ಕೆಲಸ ಮಾಡುತ್ತಿದೆ. ಕೇವಲ ಬ್ಯಾನರ್ ಕಟ್ಟುವ ವಿಚಾರಕ್ಕೆ ಬೀದಿಯಲ್ಲಿ ಗುಂಡು ಹಾರಿಸ್ತಾರಾ, ಮರಣೋತ್ತರ ಪರೀಕ್ಷೆ ನಡೆದ ನಂತರ ಕೊಲೆಯಾದ ಕಾರ್ಯಕರ್ತನ ಮೃತದೇಹವನ್ನು ತರಾತುರಿಯಲ್ಲಿ ಸುಟ್ಟು ಹಾಕಿದ್ದು ಯಾಕೆ? ಕುಟುಂಬದವರಿಗೆ ಅಂತಿಮ ವಿಧಿ ವಿಧಾನ ನಡೆಸುವುದಕ್ಕೆ ಅವಕಾಶವನ್ನೂ ನೀಡದೆ ಮೃತದೇಹವನ್ನು ತರಾತುರಿಯಲ್ಲಿ ಸುಟ್ಟಿದ್ದು ಯಾಕೆ? ಇದಕ್ಕೆಲ್ಲಾ ಸರ್ಕಾರ ಉತ್ತರ ಕೊಡಬೇಕಲ್ಲವೇ? ಕುಮಾರಸ್ವಾಮಿ ಅವರು ಒತ್ತಾಯಿಸಿದರು.

ನನ್ನ ಮತ್ತು ಜನಾರ್ದನ ರೆಡ್ಡಿ ನಡುವೆ ನಡೆದ ಗಲಾಟೆ ಹಳೇ ಕಥೆ. ಅದನ್ನು ಈಗ ಮುಂದೆ ತಂದು ಅವರು ಏನು ಮಾಡಲು ಸಾಧ್ಯ? ನಾನು ಯಾವುದೋ ರಾಗದ್ವೇಷ ಇಲ್ಲದೇ ಮಾಧ್ಯಮಗಳ ಮುಂದೆ ಸತ್ಯ ಹೇಳಿದ್ದೇನೆ. ಕಾಂಗ್ರೆಸ್ ಜತೆ ಕೂಡ ಸರ್ಕಾರ ಮಾಡಿದ್ದೇನೆ.. ಆಗ ಬಂಡೆ ತರ ನಿಂತಿದ್ದು ಇವರೇ ತಾನೇ. ಎಲ್ಲರೂ ಜೋಡೆತ್ತು ಎಂದರು. ಆಮೇಲೆ ಆಗಿದ್ದು ಏನು? ಬೆನ್ನಿಗೆ ಚೂರಿ ಹಾಕಿ ವಿಶ್ವಾಸ ದ್ರೋಹ ಎಸಗಿದರು ಕೇಂದ್ರ ಸಚಿವರು ಆಕ್ರೋಶ ವ್ಯಕ್ತಪಡಿಸಿದರು.



**ಸತ್ಯ ಶೋಧನ ಸಮಿತಿ ಸತ್ಯ ಹೇಳಲಿ**

ಬಳ್ಳಾರಿಯಲ್ಲಿ ನಡೆದದ್ದು ಅಹಿತರ ಘಟನೆ, ಸಾವು ಪ್ರಕರಣ ಎಲ್ಲರಿಗೂ ನೋವು ತರುತ್ತದೆ. ಕಳೆದ ಒಂದು ವಾರದಿಂದ ಹಲವು ನಾಯಕರು ಬಳ್ಳಾರಿಗೆ ಭೇಟಿ ನೀಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ನಾಯಕರು ಸತ್ಯಶೋಧನೆ ಮಾಡುತ್ತೇವೆ ಎಂದು ಹೋಗಿದ್ದರು ಅಲ್ಲಿ ಅವರೇನು ಸತ್ಯ ಶೋಧನೆ ಮಾಡಿದರು ಎಂಬುದನ್ನು ಜನರ ಮುಂದೆ ಹೇಳಲಿ. ಯಾಕೆಂದರೆ ಕಾಂಗ್ರೆಸ್ಸಿಗರು ಸತ್ಯ ಬಿಟ್ಟು ಬೇರೇನು ಹೇಳುವುದಿಲ್ಲ. ಹಾಗಿದ್ದ ಮೇಲೆ ಈ ಸಮಿತಿ ಸತ್ಯವನ್ನೇ ಹೇಳಲಿ ಎಂದು ಸಚಿವ ಕುಮಾರಸ್ವಾಮಿ ಅವರು ವ್ಯಂಗ್ಯವಾಡಿದರು.

ಈಗ ನಡೆಯುತ್ತಿರುವುದು ಡಿಜಿಟಲ್ ಯುಗ. ಕುತಿರುವ ಕಡೆ ಮಾಹಿತಿ ಪಡೆಯಬಹುದು. ಈ ಪ್ರಕರಣದ ಸರಿಯಾದ ತನಿಖೆ ನಡೆದರೆ ಯಾರ ಯಾರ ತಲೆ ಉರುಳುತ್ತೋ ಗೊತ್ತಿಲ್ಲ ಎಂದು ಪೊಲೀಸ್ ಅಧಿಕಾರಿಗಳೇ ಮಾತಾಡುತ್ತಿದ್ದಾರೆ. ನಾನು ಗೊತ್ತಿದ್ದೇ ಮಾತನಾಡಿದ್ದೇನೆ. ನಾನು ನಾಲಿಗೆ ತೀಟೆ ತೀರಿಸಿಕೊಳ್ಳಲು ನಾನು ಮಾತಾಡಲ್ಲ. ಕರ್ನಾಟಕವನ್ನು ಜಂಗಲ್ ರಾಜ್ಯ ಮಾಡಲಾಗುತ್ತಿದೆ. ಇದು ಅತ್ಯಂತ ಗಂಭೀರ ಪ್ರಕರಣ. ಮುಖ್ಯಮಂತ್ರಿ ಈ ಬಗ್ಗೆ ಬಾಯಿ ಬಿಡುತ್ತಿಲ್ಲ ಯಾಕೆ? ನಿಮ್ಮ ಶಾಸಕರೇ ಕೊಲೆ ಮಾಡಿಸಿದರೂ ಯಾರು ಕೇಳುವಂತಿಲ್ಲ ಎನ್ನುವಂತೆ ಆಗಿದೆ. ನನ್ನ ಬಗ್ಗೆ ನೀವು ಲಘುವಾಗಿ ಮಾತಾಡುವುದು ಬೇಡ ಅಂಥ ನಿಮ್ಮ ಗೃಹ ಸಚಿವರಿಗೆ, ಇನ್ನೊಬ್ಬರಿಗೆ ಹೇಳಿ ಎಂದು ಕೇಂದ್ರ ಸಚಿವರು ಕಿಡಿಕಾರಿದರು.

| ಈ ದಿನದ ದರ | ಪೆಟ್ರೋಲ್: 102.92 ₹/L | ಡೀಸೆಲ್ : 90.99 ₹/L | ಬಂಗಾರ: ₹13,827/Gram(24ct) ₹12,675/Gram(22ct) | ಬೆಳ್ಳಿ: ₹257.00/Gram |
|---|---|---|---|---|

## ಜಯನಗರ ಶಾಸಕರ ಹೆಸರಿನಲ್ಲಿ ನಕಲಿ ಖಾತೆ ತೆರೆದು ಸಂದೇಶ

• ಉದಯವಾಹಿನಿ, ಬೆಂಗಳೂರು

ಜಯನಗರ ಕ್ಷೇತ್ರದ ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಅವರ ಹೆಸರಿನಲ್ಲಿ ಕಿಡಿಗೇಡಿಗಳು ನಕಲಿ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಖಾತೆ ತೆರೆದು ಯುವತಿಗೆ ಅಶ್ಲೀಲ ಸಂದೇಶ ಕಳುಹಿಸಿದ್ದು. ಈ ಸಂಬಂಧ ಬೆಂಗಳೂರು ದಕ್ಷಿಣ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಅಪರಾಧ ಠಾಣೆಯ ಪೊಲೀಸರು ತಿಳಿಸಿದರು.

'ನಕಲಿ ಖಾತೆ ತೆರೆದು ಹಣಕ್ಕೂ ಬೇಡಿಕೆ ಇಟ್ಟಿದ್ದಾರೆ. ಹಲವರಿಗೆ ಸಂದೇಶ ಕಳುಹಿಸಿದ್ದಾರೆ. ನನ್ನ ಮೊಬೈಲ್ ಹ್ಯಾಕ್ ಮಾಡಿರುವ ಸಂಶಯ ಇದೆ' ಎಂದು ರಾಮಮೂರ್ತಿ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಶಾಸಕರ ಹೆಸರಿನಲ್ಲಿದ್ದ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಖಾತೆಯ ಮೂಲಕ ಯುವತಿಗೆ ಹಾಯ್, ಹಲೊ ಗುಡ್ ಮಾರ್ನಿಂಗ್, ರೀಲ್ಸ್ ಸೂಪರ್... ಅಂತಾ ಸಂದೇಶ ರವಾನಿಸಲಾಗಿದೆ. ಈ ಸಂದೇಶಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.

'ಕ್ಷೇತ್ರದ ಯಾವ ಸ್ಥಳಕ್ಕೆ ಭೇಟಿ ನೀಡುತ್ತೇನೆ. ಎಲ್ಲೆಲ್ಲಿ ಸಾರ್ವಜನಿಕರ ಸಮಸ್ಯೆ ಆಲಿಸಲಾಯಿತು ಎಂಬುದನ್ನು ಸಾರ್ವಜನಿಕರಿಗೆ ತಿಳಿಸುವ ಉದ್ದೇಶದಿಂದ ಇನ್‌ಸ್ಟಾಗ್ರಾಂ ಹಾಗೂ ಫೇಸ್‌ಬುಕ್ ಖಾತೆ ತೆರೆದಿದ್ದೇನೆ. ಚುನಾವಣೆಯಲ್ಲಿ ಗೆದ್ದ ನಂತರ ನನ್ನ ಹೆಸರಿನಲ್ಲಿದ್ದ ಫೇಸ್‌ಬುಕ್ ಹ್ಯಾಕ್ ಆಗಿತ್ತು. ಆಗಲೂ ದೂರು ನೀಡಿದ್ದೆ. ಮತ್ತೆ ಅದೇ ರೀತಿ ಆಗಿದೆ. ನನ್ನ ತೇಜೋವಧೆಗೆ ಕ್ಷೇತ್ರದ ವಿರೋಧ ಪಕ್ಷದ ಕಾರ್ಯಕರ್ತರು ಈ ಕೃತ್ಯ ಮಾಡಿರುವ ಸಾಧ್ಯತೆಯಿದೆ' ಎಂದು ಸಿ.ಕೆ. ರಾಮಮೂರ್ತಿ ಅವರು ಆರೋಪಿಸಿದ್ದಾರೆ.

## ಪ್ರವಾಸಕ್ಕೆ ಹೋಗಿದ್ದ ಉದ್ಯಮಿ ಮನೆಯಲ್ಲಿ ಕಳ್ಳತನ ಮಾಡಿದ್ದ ದಂಪತಿ ಸೆರೆ

• ಉದಯವಾಹಿನಿ, ಬೆಂಗಳೂರು

ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ಚೆನ್ನೈ ಪ್ರವಾಸಕ್ಕೆ ತೆರಳಿದ್ದ ಉದ್ಯಮಿ ಮನೆಯಲ್ಲಿ ರೂ1.37 ಕೋಟಿ ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿದ್ದ ದಂಪತಿಯನ್ನು ಸದಾಶಿವನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.ಪಶ್ಚಿಮ ಬಂಗಾಳದ ಹಾಜಿರಾ ಬೇಗಂ ಹಾಗೂ ಪತಿ ಶಾಹಿರ್ ಬಂಧಿತರು. ಬಂಧಿತರಿಂದ 787 ಗ್ರಾಂ ಚಿನ್ನಾಭರಣ, 291 ಗ್ರಾಂ ಬೆಳ್ಳಿಯ ವಸ್ತುಗಳು, ಏಳು ವಿದೇಶಿ ವಾಚ್‌ಗಳು ಸಹಿತ ಒಟ್ಟು ರೂ 1.37 ಕೋಟಿ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು. ಸದಾಶಿವನಗರದ ನಿವಾಸಿ ಅಭಿಷೇಕ್ ಅವರ ಮನೆಯಲ್ಲಿ ಕಳ್ಳತನ ನಡೆದಿತ್ತು. ಅವರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ಹಲವು ವರ್ಷಗಳಿಂದ ಅಭಿಷೇಕ್ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಹಾಜಿರಾ ಬೇಗಂ ಮದುವೆಯ ಕಾರಣ ನೀಡಿ ಕಳೆದ ಮೂರು ವರ್ಷಗಳ ಹಿಂದೆ ಕೆಲಸ ಬಿಟ್ಟಿದ್ದರು. ಆದರೆ, ಈ ಬಾರಿ ಹೊಸ ವರ್ಷ ಸಮೀಪಿಸುತ್ತಿದ್ದ ಸಂದರ್ಭದಲ್ಲಿ ವಾಪಸ್ ಬಂದಿದ್ದ ಹಾಜಿರಾ, ಕೆಲಸಕ್ಕೆ ಸೇರಲು ಇಂಗಿತ ವ್ಯಕ್ತಪಡಿಸಿದ್ದರು.

## 251.26 ಕೋಟಿ ರೂ. ದಂಡ ಸಂಗ್ರಹ

• ಉದಯವಾಹಿನಿ, ಬೆಂಗಳೂರು

ನಗರ ಸಂಚಾರ ವಿಭಾಗದ ಪೊಲೀಸರು, 2025ರಲ್ಲಿ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ರೂ 251.26 ಕೋಟಿ ದಂಡ ಸಂಗ್ರಹಿಸಿದ್ದಾರೆ. ಇದು ಕಳೆದ ಒಂದು ದಶಕದಲ್ಲಿ ಅತ್ಯಧಿಕವಾಗಿದೆ. 2024ರಲ್ಲಿ ಸಂಗ್ರಹಿಸಿದ್ದ ರೂ62.82 ಕೋಟಿಗಿಂತ ಶೇಕಡ 300ರಷ್ಟು ಹೆಚ್ಚಾಗಿದೆ.ಕಳೆದ 10 ವರ್ಷಗಳಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ ಪ್ರಕರಣಗಳಲ್ಲಿ ದಂಡ ಸಂಗ್ರಹವು ಏರಿಕೆ ಕಂಡಿದೆ. 2014ರಿಂದ 2016ರ ನಡುವೆ ರೂ.65 ಕೋಟಿಯಿಂದ ರೂ.70 ಕೋಟಿ ದಂಡ ಸಂಗ್ರಹಿಸಲಾಗಿತ್ತು. 2017ರಲ್ಲಿ ನಗರದ ಸಿಗ್ನಲ್‌ಗಳಲ್ಲಿ ಸ್ವಯಂಚಾಲಿತ ಕ್ಯಾಮೆರಾಗಳ ಅಳವಡಿಕೆಯಿಂದ ರೂ 112.41 ಕೋಟಿ ದಂಡ ಸಂಗ್ರಹವಾಗಿತ್ತು. ಕೋವಿಡ್ ಕಾಲದಲ್ಲೂ ದಂಡ ಸಂಗ್ರಹ ಹೆಚ್ಚಳವಾಗಿತ್ತು. 2023ರಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ ಬಾಕಿ ಇರುವ ಪ್ರಕರಣಗಳಿಗೆ ಶೇ 50 ರಿಯಾಯಿತಿ ನೀಡಿದ ಕಾರಣ ರೂ185.13 ಕೋಟಿ ಸಂಗ್ರಹವಾಗಿತ್ತು. 2024ರಲ್ಲಿ ಸಂಪರ್ಕರಹಿತ ಸಂಚಾರ ಉಲ್ಲಂಘನೆ ಪ್ರಕರಣಗಳ ಕಡೆಗೆ ಹೆಚ್ಚು ಗಮನ ಹರಿಸಿದ ಕಾರಣ ಹಳೆಯ ಪ್ರಕರಣಗಳ ಬಾಕಿ ವಸೂಲಿ ಕಡಿಮೆಯಾಗಿತ್ತು. ಇದರಿಂದ 62.82 ಕೋಟಿ ದಂಡ ಮಾತ್ರ ಸಂಗ್ರಹಿಸಲಾಗಿತ್ತು.

ಇತ್ತೀಚಿನ ವರ್ಷಗಳಲ್ಲಿ ಇದು ಅತ್ಯಂತ ಕಡಿಮೆಯಾಗಿದೆ. 2025ರಲ್ಲಿ ಸಂಚಾರ ದಟ್ಟಣೆ, ಜಾಗೃತಿ ಹಾಗೂ ಪರಿಣಾಮಕಾರಿ ನೀತಿಗಳನ್ನು ಜಾರಿಗೊಳಿಸಿದ ಪರಿಣಾಮ ರೂ 251.26 ಕೋಟಿ ದಂಡ ಸಂಗ್ರಹಿಸಲಾಗಿದೆ' ಎಂದು ಬೆಂಗಳೂರು ಸಂಚಾರ ವಿಭಾಗದ ಪೊಲೀಸರ ಅಂಕಿ ಅಂಶಗಳಿಂದ ತಿಳಿದು ಬಂದಿದೆ.

2025ರ ಆ. 23ರಿಂದ ಸೆ.14ರವರೆಗೆ ಸಂಚಾರ ನಿಯಮ ಉಲ್ಲಂಘಿಸಿದ ಬಾಕಿ ಇರುವ ಪ್ರಕರಣಗಳಿಗೆ ಶೇ 50 ರಿಯಾಯಿತಿ ನೀಡಿದ ಕಾರಣ ಒಟ್ಟು 3.86 ಲಕ್ಷ ಪ್ರಕರಣಗಳಲ್ಲಿ ರೂ106 ಕೋಟಿ ದಂಡ ಸಂಗ್ರಹಿಸಲಾಗಿತ್ತು. ನವೆಂಬರ್‌ನಲ್ಲಿ ಮತ್ತೆ ನಡೆದ ಅಭಿಯಾನದಲ್ಲಿ 2.47 ಲಕ್ಷಕ್ಕೂ ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡಿ, ರೂ 7.02 ಕೋಟಿ ದಂಡ ಸಂಗ್ರಹ ಮಾಡಲಾಗಿದೆ. 2025ರ ಅಕ್ಟೋಬರ್ ವರೆಗೆ ಬೆಂಗಳೂರು ನಗರದಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ 51.8 ಲಕ್ಷ ಪ್ರಕರಣಗಳಲ್ಲಿ ರೂ207.35 ಕೋಟಿ ದಂಡ ಸಂಗ್ರಹಿಸಲಾಗಿದೆ. ಎಂದು ಜಂಟಿ ಪೊಲೀಸ್ ಕಮಿಷನರ್ (ಸಂಚಾರ ವಿಭಾಗ) ಕಾರ್ತಿಕ್ ರೆಡ್ಡಿ ತಿಳಿಸಿದರು.

## ಕೆಐಎಎಲ್ ವಿಮಾನ ನಿಲ್ದಾಣದಲ್ಲಿ ಕ್ಯಾಬ್‌ಗಳ ಕೊರತೆ: ಪ್ರಯಾಣಿಕರ ಬೇಸರ

• ಉದಯವಾಹಿನಿ, ಬೆಂಗಳೂರು

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಎರಡೂ ಟರ್ಮಿನಲ್‌ಗಳಲ್ಲಿ ಹೊಸ ಪಿಕ್‌ಅಪ್ ನಿಯಮ ಜಾರಿಗಳಿಸಲಾಗಿದ್ದರೂ ಕ್ಯಾಬ್‌ಗಳ ಕೊರತೆಯಿಂದ ಪ್ರಯಾಣಿಕರು ಬೇಸರ ಗೊಂಡಿದ್ದಾರೆ.

ಜನವರಿ 5ರಂದು ಹೆಚ್ಚಿನ ಜನರು ಬೆಂಗಳೂರಿಗೆ ವಾಪಸಾಗುತ್ತಿದ್ದ ಕಾರಣ, ವಿಮಾನ ನಿಲ್ದಾಣದಲ್ಲಿ ಕ್ಯಾಬ್‌ಗಳ ತೀವ್ರ ಕೊರತೆ ಕಂಡು ಬಂತು. ಕೆಐಎ ಎಲ್ ವೇಗವಾಗಿ ಬೆಳೆಯುತ್ತಿರುವ ದೇಶದ ಮೂರನೇ ಅತಿದೊಡ್ಡ ವಿಮಾನ ನಿಲ್ದಾಣವಾಗಿದ್ದು, ನಿತ್ಯ ಅಂದಾಜು 1.30 ಲಕ್ಷ ಪ್ರಯಾಣಿಕರಿಗೆ ಸೇವೆ ಒದಗಿಸುತ್ತಿದೆ. ವಿಮಾನ ನಿಲ್ದಾಣ ರಸ್ತೆ ಮಾರ್ಗದಲ್ಲಿ ಸುಮಾರು ಒಂದು ಲಕ್ಷ ವಾಹನಗಳು ನಿತ್ಯ ಸಂಚರಿಸುತ್ತವೆ ದೆಹಲಿಯಿಂದ ವಾಪಸಾದ ಶಶಿಕಾಂತ್ ಅವರು ಕ್ಯಾಬ್‌ಗಾಗಿ 40 ರಿಂದ 50 ನಿಮಿಷ ಕಾಯಬೇಕಾಯಿತು. ವಿಮಾನ ನಿಲ್ದಾಣದ ಮೂಲಗಳ ಪ್ರಕಾರ, ಸೋಮವಾರ ಕ್ಯಾಬ್‌ಗಳಿಗೆ ಸರಾಸರಿ ಕಾಯುವ ಸಮಯ 20 ನಿಮಿಷಗಳಷ್ಟಿತ್ತು. ಹಾಗಾಗಿ ಹೊಸ ನಿಯಮಗಳ ಬಗ್ಗೆ ಪ್ರಯಾಣಿಕರು ಅಸಮಾಧಾನಗೊಂಡಿದ್ದಾರೆ. ಪ್ರಯಾಣಿಕರು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿಯೂ ಓಲಾ ಹಾಗೂ ಉಬರ್ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

## ಮಹಿಳೆಯನ್ನು ಅರೆಸ್ಟ್ ಮಾಡಿದ ಮೇಲೆ ಆಕೆಯೇ ಬಟ್ಟೆ ಬಿಚ್ಚಿಕೊಂಡಿದ್ದಾಳೆ: ನಾಗಲಕ್ಷ್ಮಿ ಚೌಧರಿ

• ಉದಯವಾಹಿನಿ, ಬೆಂಗಳೂರು

ಹುಬ್ಬಳ್ಳಿಯಲ್ಲಿ ಮಹಿಳೆಯನ್ನ ವಿವಸ್ತ್ರಗೊಳಿಸಿ ಹಲ್ಲೆ ನಡೆಸಿದ ಆರೋಪವನ್ನ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅಲ್ಲಗೆಳೆದಿದ್ದಾರೆ. ಈ ಕುರಿತು ಬೆಂಗಳೂರಲ್ಲಿ ಪ್ರತಿಕ್ರಿಯಿಸಿದ ಅವರು, ನಾನು ಎಸ್ಪಿ ಜೊತೆ ಮಾತನಾಡಿದ್ದೇನೆ. ಪೊಲೀಸರು 307 ಕೇಸಿನಲ್ಲಿ ಆ ಮಹಿಳೆಯನ್ನು ಅರೆಸ್ಟ್ ಮಾಡಿದ್ದಾರೆ. ಆ ಸಂದರ್ಭದಲ್ಲಿ ಮಹಿಳೆಯ ತಾಯಿ ತಮ್ಮ ಜೊತೆಗಿದ್ದರು. ಮಹಿಳೆಯನ್ನು ಅರೆಸ್ಟ್ ಮಾಡಿದ ಮೇಲೆ ಆಕೆಯೇ ಬಟ್ಟೆ ಬಿಚ್ಚಿಕೊಂಡಿದ್ದಾಳೆ ಎಂದರು. ಬಟ್ಟೆ ಬಿಚ್ಚಿದ್ದನ್ನ ತಮ್ಮನೇ ವೀಡಿಯೋ ಮಾಡಿ ವೈರಲ್ ಮಾಡಿದ್ದಾನೆ. ಅಷ್ಟೇ ಅಲ್ಲ ಜಡ್ಜ್ ಮುಂದೆ ಪೊಲೀಸರು ದೌರ್ಜನ್ಯ ಮಾಡಿರೋ ಬಗ್ಗೆ ಮಹಿಳೆ ಏನು ಹೇಳಿರಲಿಲ್ಲ. ಕಾನೂನಿನ ಪ್ರಕಾರ ಏನು ಕ್ರಮ ಆಗಬೇಕೋ ಆಗುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

# ಮಹಿಳೆಯರು ಸಾಧನೆ ಮಾಡಲು ಕಷ್ಟ, ಅಸಾಧ್ಯವಂತೂ ಅಲ್ಲ

### ವಿಜಯ ಕರ್ನಾಟಕ ಡಿಜಿಟಲ್ ವತಿಯಿಂದ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಶಕ್ತಿ ಸಂವಾದ – 2026

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಮಹಿಳೆಯರಿಗೆ ಸಾಧನೆ ಮಾಡಲು ಕಷ್ಟ ಆಗಬಹುದು. ಆದರೆ ಅಸಾಧ್ಯವಾದ ಕೆಲಸವಂತೂ ಅಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ವಿಜಯ ಕರ್ನಾಟಕ ಡಿಜಿಟಲ್ ವತಿಯಿಂದ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಶಕ್ತಿ ಸಂವಾದ – 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು, ನಾನು ಗ್ರಾಮೀಣ ಭಾಗದಿಂದ ಬಂದ ಹೆಣ್ಣು ಮಗಳು, ನಾನು ಸವೆಸಿದ ಹಾದಿ ಅಷ್ಟು ಸುಲಭವಾಗಿರಲಿಲ್ಲ. ಕೇವಲ ನನ್ನದಷ್ಟೇ ಕಥೆಯಲ್ಲ, ಇಲ್ಲಿರುವ ಪ್ರತಿಯೊಬ್ಬ ಮಹಿಳೆಯರದ್ದು ಅವರದ್ದೇ ಆದ ಕಥೆಯಿದೆ ಎಂದರು. ಇದು ನನ್ನ ಹೃದಯಕ್ಕೆ ಹತ್ತಿರವಾಗಿರುವ ಸಂವಾದ. ಹಿಂದಿನ ಕಾಲದಲ್ಲಿ ಮಹಿಳೆಯರನ್ನು ಕೇವಲ ಅಡಿಗೆ ಮಾಡಲು, ಮಕ್ಕಳನ್ನು ಹೇರುವುದಕ್ಕಷ್ಟೇ ಸೀಮಿತ ಮಾಡಲಾಗಿತ್ತು. ಈಗ ಕಾಲ ಬದಲಾಗಿದೆ. ಹಿಂದಿನ ಕಾಲವನ್ನು ಮೆಟ್ಟಿನಿಂತು ಬದಲಾಗಿದ್ದೀವಿ. ಈ ಸಮಾಜದ ಸೃಷ್ಟಿಕರ್ತರು ನಾವು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

**ಶೈಕ್ಷಣಿಕವಾಗಿ ಮಹಿಳೆಯರು ಮುಂಚೂಣಿ**

**ಸರ್ಕಾರದಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ:** ಇವತ್ತು ನಮ್ಮ ಸರ್ಕಾರ ಕೂಡ ಮಹಿಳೆಯರಿಗೆ ಸಾಕಷ್ಟು ಅವಕಾಶಗಳನ್ನು ಕೊಡುತ್ತಿದೆ.

ಮಹಿಳೆಯರಿಗಾಗಿ ಜಾರಿಗೆ ತರಲಾಗಿರುವ ಶಕ್ತಿ ಯೋಜನೆ, ಐಟಿ-ಬಿಟಿಯಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಂದ ಹಿಡಿದು ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಸಾಕಷ್ಟು ಅನುಕೂಲ ಆಗಿದೆ. ಇಲ್ಲಿವರೆಗೂ ನಮ್ಮ ಸರ್ಕಾರ 1.26 ಕೋಟಿ ಮಹಿಳೆಯರಿಗೆ ತಲಾ 48 ಸಾವಿರ ರೂಪಾಯಿಯಂತೆ ಗೃಹಲಕ್ಷ್ಮೀ ಯೋಜನೆ ಮೂಲಕ ಹಣ ಸಂದಾಯ ಮಾಡಿದೆ.

ಗೃಹಲಕ್ಷ್ಮೀ ಯೋಜನೆಯಿಂದ ಜೀವನ ಬದಲಾಗುತ್ತೆ ಎಂದು ಹೇಳುವುದಿಲ್ಲ, ಆದರೆ ತಕ್ಕ ಮಟ್ಟಿಗೆ ಮಹಿಳೆಯರಿಗೆ ಅನುಕೂಲವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಚಲನಚಿತ್ರ ನಿರ್ಮಾಪಕರಾದ ಗೀತಾ ಶಿವರಾಜ್ ಕುಮಾರ್, ಬಿಎಂಟಿಎಫ್ ಎಡಿಜಿಪಿ ಡಿ.ರೂಪಾ ಮೌದ್ಗಿಲ್, ಚಲನಚಿತ್ರ ನಟಿ ಶ್ವೇತಾ ಶ್ರೀವತ್ಸ, ಮೌಂಟ್ ಕಾರ್ಮೆಲ್ ಕಾಲೇಜಿನ ನಿರ್ದೇಶಕರು ಹಾಗೂ ಕಾರ್ಯದರ್ಶಿ ಸಿಸ್ಟರ್ ಎಂ.ಅಲ್ಡಿನಾ, ಪ್ರಾಂಶುಪಾಲರಾದ ಪ್ರೊ.ಜಾರ್ಜ್ ಲೇಖಾ ಹಾಗೂ ವಿಜಯ ಕರ್ನಾಟಕ ಡಿಜಿಟಲ್ ಸಂಪಾದಕರಾದ ಪ್ರಸಾದ್ ನಾಯಿಕ ಸೇರಿದಂತೆ ಮೌಂಟ್ ಕಾರ್ಮೆಲ್ ಕಾಲೇಜಿನ ಸಿಬ್ಬಂದಿ ವರ್ಗ ಹಾಗೂ ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಮಹಿಳಾ ಸಬಲೀಕರಣ**

**ಈಗ ಮಹಿಳೆಯರು ಅವಕಾಶವನ್ನು ಕೇಳಿಕೊಂಡು ಹೋಗುವ ಪರಿಸ್ಥಿತಿ ಇಲ್ಲ. ಮಹಿಳೆಯರಿಗೆ ಅವಕಾಶಗಳು ಹುಡುಕಿಕೊಂಡು ಬರುತ್ತಿರುವ ಸನ್ನಿವೇಶವನ್ನು ಸೃಷ್ಟಿ ಮಾಡಿದ್ದೇವೆ. ಶೈಕ್ಷಣಿಕವಾಗಿ ನಮ್ಮ ಮಹಿಳೆಯರು ಸಾಕಷ್ಟು ಮುಂದಿದ್ದಾರೆ ಎಂದರು. ಈ ಹಿಂದೆ ಗಂಡ ಸತ್ತರೆ ಮಹಿಳೆಯರಿಗೆ ಬದುಕುವ ಹಕ್ಕಿಲ್ಲ ಎನ್ನುವಂಥ ಪರಿಸ್ಥಿತಿ ಇತ್ತು. ಇವತ್ತು ಸಾಕಷ್ಟು ಬದಲಾಗಿದೆ. ಮಹಿಳೆಯರು ಮನಸ್ಸು ಮಾಡಿದರೆ ಮತದಾನದ ಮೂಲಕ ಸರ್ಕಾರವನ್ನೇ ತರಬಹುದು. ಮಹಿಳೆಯರಲ್ಲಿ ಒಗ್ಗಟ್ಟು ಜಾಸ್ತಿಯಿದ್ದು, ವಿಚಾರ ಮಾಡುವ ಮನಸ್ಥಿತಿ ಹೊಂದಿದ್ದಾರೆ. ಹೆಣ್ಣು ಕೇವಲ ಭವಿಷ್ಯ ಅಲ್ಲ, ವರ್ತಮಾನ ಕೂಡ ಎಂದು ಸಚಿವರು ಹೇಳಿದರು.**

## ದಕ್ಷಿಣ ಬೆಂಗಳೂರಿನ 11 ಪ್ರಮುಖ ರಸ್ತೆಗಳಿಗೆ ವೈಟ್ ಟಾಪಿಂಗ್ ಕಾರ್ಯ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ದಕ್ಷಿಣ ಬೆಂಗಳೂರಿಗರು ಇನ್ನು ಕೆಲವು ಸಮಯ ರಸ್ತೆ ಮುಚ್ಚುವಿಕೆ, ರಸ್ತೆ ಅಗೆಯುವಿಕೆ, ಸಂಚಾರ ಬದಲಾವಣೆಗಳಿಗೆ ಸಿದ್ಧರಾಗಬೇಕಾಗುತ್ತದೆ.

11 ಪ್ರಮುಖ ರಸ್ತೆಗಳಲ್ಲಿ ಶೀಘ್ರದಲ್ಲೇ ವೈಟ್ ಟಾಪಿಂಗ್ ಕಾರ್ಯ ನಡೆಯಲಿದೆ. ಬಿಟಿಎಂ ಲೇಔಟ್, ಜಯನಗರ ಮತ್ತು ಪದ್ಮನಾಭನಗರ ವಿಧಾನಸಭಾ ಕ್ಷೇತ್ರಗಳ ಪ್ರಮುಖ ರಸ್ತೆಗಳನ್ನು ವೈಟ್ ಟಾಪಿಂಗ್ ಮಾಡಲಾಗುತ್ತದೆ. ವೈಟ್ ಟಾಪಿಂಗ್ ಜೊತೆಗೆ, ಒಟ್ಟು 94.62 ಕೋಟಿ ರೂಪಾಯಿ ವೆಚ್ಚದಲ್ಲಿ ಫುಟ್ ಪಾತ್ ಅಭಿವೃದ್ಧಿ ಕೂಡ ಮಾಡಲಾಗುತ್ತದೆ. 11 ತಿಂಗಳಲ್ಲಿ ಕಾಮಗಾರಿಗಳು ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಜಿಬಿಎ ಸ್ಪೆಷಲ್ ಪರ್ಪಸ್ ವೆಹಿಕಲ್ ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಈ ಕ್ಷೇತ್ರಗಳ ವೈಟ್-ಟಾಪಿಂಗ್ ಮತ್ತು ಫುಟ್‌ಪಾತ್ ಅಭಿವೃದ್ಧಿಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ, ಕಳೆದ ವರ್ಷ ಡಿಸೆಂಬರ್ 24 ರಂದು ಬಿಡ್ ತೆರೆಯಲಾಯಿತು. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಜನವರಿ 2 ಆಗಿತ್ತು. ತಾಂತ್ರಿಕ ಬಿಡ್‌ಗಳನ್ನು ಜನವರಿ 3 ರಂದು ತೆರೆಯಲಾಯಿತು. ತಾಂತ್ರಿಕ ಬಿಡ್‌ಗಳಲ್ಲಿ ಅರ್ಹತೆ ಪಡೆದವರಿಗೆ ಹಣಕಾಸಿನ ಬಿಡ್‌ನಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು. ವೈಟ್ ಟಾಪಿಂಗ್ ಯಾವ ರಸ್ತೆಗಳಲ್ಲಿ ಮಾಡಲಾಗುತ್ತದೆ ಎಂದು ತಿಳಿಸಿಲ್ಲ. ವೈಟ್-ಟಾಪಿಂಗ್ ಮುಖ್ಯ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಮಾಡಲು ಸಂಚಾರ ಇಲಾಖೆಯಿಂದ ಪೂರ್ವಾನುಮತಿ ಪಡೆಯುವುದು. ಪ್ರಮುಖ ರಸ್ತೆಗಳನ್ನು ದುರಸ್ತಿಗೆ ಕೈಗೆತ್ತಿಕೊಂಡಾಗ, ಸಂಚಾರ ಅನುಮತಿ ಪಡೆಯುವುದು ಕಷ್ಟದ ಕೆಲಸ ಎಂದರು.

ಸಂಚಾರ ಇಲಾಖೆಯು ರಸ್ತೆಯ ದಟ್ಟಣೆಯನ್ನು ಗಣನೆಗೆ ತೆಗೆದುಕೊಂಡು ಹತ್ತಿರದ ಇತರ ರಸ್ತೆಗಳಲ್ಲಿ ವಾಹನ ಸಂಚಾರ ಮಾಡಲು ಪರ್ಯಾಯ ರಸ್ತೆಗಳನ್ನು ಯೋಜಿಸಬೇಕಾಗುತ್ತದೆ.

ಅನುಮೋದನೆ ಪಡೆದ ನಂತರ, ಇತರ ಸವಾಲುಗಳೆಂದರೆ ಉಪಯುಕ್ತತೆಗಳನ್ನು ಬದಲಾಯಿಸುವುದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ನೀರು ಮತ್ತು ನೈರ್ಮಲ್ಯ ಮಾರ್ಗಗಳು, ಬೆಸ್ಕಾಂ ಮತ್ತು ಇತರವುಗಳಾಗಿವೆ ಎಂದರು.

ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ದೀರ್ಘಾವಧಿಯ, ಗುಂಡಿ-ಮುಕ್ತ ರಸ್ತೆಗಳನ್ನು ಒದಗಿಸುವುದಾಗಿ ಹೇಳಿದ್ದು, ನಗರದಲ್ಲಿ 500 ಕಿ.ಮೀ.ಗೂ ಹೆಚ್ಚು ರಸ್ತೆಗಳನ್ನು ಮೂರು ವರ್ಷಗಳ ಅವಧಿಯಲ್ಲಿ 1,700 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ವೈಟ್-ಟಾಪಿಂಗ್ ಮಾಡಲಾಗುತ್ತದೆ.

## ನಂದಿಬೆಟ್ಟದ ಬಳಿ ಅಮಾನವೀಯವಾಗಿ 14 ನಾಯಿಮರಿಗಳ ಎಸೆದು ಹೋದ ಕಾಲೇಜು ಸಿಬ್ಬಂದಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಇಡೀ ಮನುಕುಲವೇ ತಲೆ ತಗ್ಗಿಸುವಂತಹ ಕೆಲವೊಂದು ಅಮಾನವೀಯ ಘಟನೆಗಳು ಈ ಸಮಾಜದಲ್ಲಿ ನಡೆಯುತ್ತಲೇ ಇವೆ. ಇದೀಗ ಅಂತಹದ್ದೇ ಘಟನೆಯೊಂದು ಬೆಂಗಳೂರಿನಲ್ಲಿ ನಡೆದಿದೆ.

ಎಸ್‌ಜೆಸಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ಸಿಬ್ಬಂದಿ 14 ನಾಯಿಗಳನ್ನು ನಂದಿಬೆಟ್ಟದ ಬಳಿ ಎಸೆದು ಹೋಗಿದ್ದಾರೆ. ಈ ಪೈಕಿ 13 ಮರಿಗಳನ್ನು ಫ್ರೆಂಡ್ ಫಾರ್ ಅನಿಮಲ್ ಟ್ರಸ್ಟ್ ಸದಸ್ಯರು ರಕ್ಷಣೆ ಮಾಡಿದ್ದಾರೆ.ಫ್ರೆಂಡ್ ಫಾರ್ ಅನಿಮಲ್ ಟ್ರಸ್ಟ್ ಸಂಸ್ಥಾಪಕ ವಿಕಾಶ್ ಎ. ಬಾಫ್ನಾ ಅವರು ಮಾತನಾಡಿ, ನಾಯಿಮರಿಗಳು 20 ದಿನಗಳ ಹಿಂದೆ ಜನಿಸಿದ್ದು, ಬಿಜಿಎಸ್ ಪಾಲಿಟೆಕ್ನಿಕ್ ಕಾಲೇಜಿನ ಹೆಸರನ್ನು ಹೊಂದಿರುವ ವಾಹನದ ಭದ್ರತಾ ಸಿಬ್ಬಂದಿ ಸೇರಿ ಮೂವರು ಈ ನಾಯಿ ಮರಿಗಳನ್ನು ಎಸೆದು ಹೋಗುತ್ತಿರುವುದನ್ನು ಪ್ರಯಾಣಿಕನೊಬ್ಬ ನೋಡಿದ್ದಾನೆಂದು ಹೇಳಿದ್ದಾರೆ. ಈ ಬಗ್ಗೆ ಮಾಹಿತಿ ತಿಳಿದ ಕೂಡಲೇ ರಕ್ಷಣೆಗೆ ಧಾವಿಸಲಾಗಿತ್ತು. ನಾಯಿಮರಿಗಳನ್ನು ಬೆಂಗಳೂರು-ಹೈದರಾಬಾದ್ ಹೆದ್ದಾರಿ ಬಳಿ ಎಸೆಯಲಾಗಿತ್ತು. ಪೊದೆಗಳ ಮಧ್ಯೆ ನಾಯಿಗಳನ್ನು ಎಸೆದಿದ್ದರು. ರಕ್ಷಣೆ ಬಹಳ ಕಷ್ಟಕರವಾಗಿತ್ತು.

14 ಮರಿಗಳ ಪೈಕಿ 13 ಮರಿಗಳನ್ನು ರಕ್ಷಣೆ ಮಾಡಲಾಗಿದೆ. ಒಂದು ಮರಿ ಪತ್ತೆಯಾಗಿಲ್ಲ. 13 ಮರಿಗಳ ಪೈಕಿ ಒಂದು ನಾಯಿಮರಿ ವಾಹನದ ಹೊಡೆತಕ್ಕೆ ಸಿಲುಕಿ ತೀವ್ರವಾಗಿ ಗಾಯಗೊಂಡಿದೆ. ಗಾಯಗೊಂಡ ನಾಯಿಮರಿಗೆ ಫ್ರೆಂಡ್ ಫಾರ್ ಅನಿಮಲ್ ಟ್ರಸ್ಟ್ ಸೌಲಭ್ಯದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಉಳಿದ 12 ನಾಯಿಗಳನ್ನು ಕಾಲೇಜು ಕಾಂಪೌಂಡ್‌ನಲ್ಲಿರುವ ತಾಯಿಯೊಂದಿಗೆ ಬಿಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

## ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಯೋಗ ಅನ್ವೇಷಿಸುವ ಕುರಿತು ಚರ್ಚೆ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಮಲೇಷ್ಯಾದ ಪೆನಾಂಗ್‌ನ ಉಪ ಮುಖ್ಯಮಂತ್ರಿ ಜಗದೀಪ್ ಸಿಂಗ್ ಡಿಯೋ ನೇತೃತ್ವದ ನಿಯೋಗವು ಕರ್ನಾಟಕದ ಐಟಿ -ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಭೇಟಿ ಮಾಡಿ, ಸೆಮಿಕಂಡಕ್ಟರ್‌ಗಳು, ಡೀಪ್ ಟೆಕ್ನಾಲಜಿ, ಸ್ಪೇಸ್ ಅಪ್ಲಿಕೇಶನ್‌ಗಳು, ಸ್ಮಾರ್ಟ್ ಸಿಟಿಗಳು ಮತ್ತು ಕೌಶಲ್ಯ ಸೇರಿದಂತೆ ಪ್ರಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಯೋಗವನ್ನು ಅನ್ವೇಷಿಸುವ ಕುರಿತು ಚರ್ಚಿಸಿದರು.

ಚರ್ಚೆಗಳು ಪೂರಕ ಸಾಮರ್ಥ್ಯಗಳನ್ನು ಗುರುತಿಸುವತ್ತ ಗಮನಹರಿಸಿದವು. ಕರ್ನಾಟಕವು ಸಾಫ್ಟ್‌ವೇರ್ ಅಭಿವೃದ್ಧಿ, ಸಂಶೋಧನೆ ಮತ್ತು ಅಭಿವೃದ್ಧಿ, ಚಿಪ್ ವಿನ್ಯಾಸ, ಸ್ಟಾರ್ಟ್‌ಅಪ್‌ಗಳು, ಡೀಪ್ ಟೆಕ್ ಪ್ರತಿಭೆ ಅಭಿವೃದ್ಧಿಯಲ್ಲಿ ತನ್ನ ಸಾಮರ್ಥ್ಯಗಳನ್ನು ತೋರಿಸಿದೆ. ಪೆನಾಂಗ್ ಎಲೆಕ್ಟ್ರಾನಿಕ್ಸ್ ಉತ್ಪಾದನೆ, ಸೆಮಿಕಂಡಕ್ಟರ್‌ಗಳು, ಸುಧಾರಿತ ವಸ್ತುಗಳು ಮತ್ತು ಕೈಗಾರಿಕಾ ಸ್ಕೇಲ್-ಅಪ್‌ನಲ್ಲಿ ತನ್ನ ಪರಿಣತಿಯನ್ನು ಎತ್ತಿ ತೋರಿಸಿತು. ಪೆನಾಂಗ್ ನಿಯೋಗವು ಒಪ್ಪಂದ ಮಾಡಿಕೊಳ್ಳಲು ಮುಂದೆ ಬಂದಿದ್ದಾರೆ. ಸೆಮಿಕಂಡಕ್ಟರ್ ಮತ್ತು ಚಿಪ್ ವಿನ್ಯಾಸ, ಕೌಶಲ್ಯ ಮತ್ತು ಪ್ರತಿಭೆ ವಿನಿಮಯ, ಡೀಪ್ ಟೆಕ್ನಾಲಜಿ, ಸ್ಪೇಸ್ ಅಪ್ಲಿಕೇಶನ್‌ಗಳು ಮತ್ತು ಸ್ಮಾರ್ಟ್ ಸಿಟಿಗಳಂತಹ ಆದ್ಯತೆಯ ಕ್ಷೇತ್ರಗಳನ್ನು ಗುರುತಿಸಲು ಮತ್ತು ನಿರಂತರ ತೊಡಗಿಸಿಕೊಳ್ಳುವಿಕೆಯ ಮೂಲಕ ಪರಸ್ಪರ ಒಪ್ಪಿಕೊಂಡರು. ಕೌಶಲ್ಯ ಪ್ರತಿಭೆ ಅಭಿವೃದ್ಧಿಯು ಪ್ರಮುಖ ಗಮನ ಕ್ಷೇತ್ರವಾಗಿ ಹೊರಹೊಮ್ಮಿದೆ. ಪೆನಾಂಗ್‌ನಲ್ಲಿ ಮುಂದುವರಿದ ಸೆಮಿಕಂಡಕ್ಟರ್ ಮತ್ತು ಇಂಟಿಗ್ರೇಟೆಡ್ ಸರ್ಕ್ಯೂಟ್ ವಿನ್ಯಾಸ ಇಂಜಿನಿಯರ್‌ಗಳಿಗೆ ಬೇಡಿಕೆ ಹೆಚ್ಚುತ್ತಿದೆ.

## ಕಿಟ್ ಕೊರತೆ: ಶಾಲಾ ವಿದ್ಯಾರ್ಥಿಗಳ ಆಧಾರ್ ಬಯೋಮೆಟ್ರಿಕ್ ನವೀಕರಣ ವಿಳಂಬ

• ಉದಯವಾಹಿನಿ, ಬೆಂಗಳೂರು

ಮುಂದಿನ ಮಾರ್ಚ್ 1 ರೊಳಗೆ ವಿದ್ಯಾರ್ಥಿಗಳ ಆಧಾರ್ ಕಡ್ಡಾಯ ಬಯೋಮೆಟ್ರಿಕ್ ದಾಖಲಾತಿಯನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ನಿರ್ದೇಶನ ನೀಡಿದ್ದರೂ, ಇಲಾಖೆಯು ಏಳು ಜಿಲ್ಲೆಗಳಲ್ಲಿ ಮಾತ್ರ ಅದನ್ನು ಪೂರ್ಣಗೊಳಿಸಲು ಸಾಧ್ಯವಾಗಿದೆ. ಡಿಸೆಂಬರ್ 31, ಹೊತ್ತಿಗೆ, ನಾವು ಕೇವಲ 9,907 ದಾಖಲಾತಿಗಳನ್ನು ಪೂರ್ಣಗೊಳಿಸಿದ್ದೇವೆ. ಇನ್ನೂ 12 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ಆಧಾರ್ ಬಯೋಮೆಟ್ರಿಕ್ಸ್ ಬಾಕಿ ಇದೆ. ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ನಾವು ಪ್ರಾರಂಭಿಸಿದ್ದೇವೆ.

ಬೆಳಗಾವಿ, ಬೆಳಗಾವಿ-ಚಿಕ್ಕೋಡಿ, ಬೆಂಗಳೂರು ನಗರ ಉತ್ತರ, ಬೆಂಗಳೂರು ನಗರ ದಕ್ಷಿಣ, ಕಲಬುರಗಿ, ಮೈಸೂರು ಮತ್ತು ವಿಜಯಪುರದಿಂದ ಪ್ರಾರಂಭಿಸಿದ್ದೇವೆ. ಬೆಂಗಳೂರು ನಗರ ದಕ್ಷಿಣದಲ್ಲಿ 3,87,858 ಮತ್ತು ಬೆಂಗಳೂರು ನಗರ ಉತ್ತರದಲ್ಲಿ 2,35,023 ನವೀಕರಣಗಳು ಬಾಕಿ ಉಳಿದಿವೆ. ಇದು ಮೊದಲ ಹಂತವಾಗಿದ್ದು, ಎರಡನೇ ಹಂತವನ್ನು ಶೀಘ್ರದಲ್ಲೇ ಪ್ರಾರಂಭಿಸಲಿದ್ದೇವೆ.

ಬಯೋಮೆಟ್ರಿಕ್ಸ್ ನವೀಕರಿಸಲು, ಐರಿಸ್ ಸ್ಕ್ಯಾನ್ ಮಾಡಲು ಮತ್ತು ಫೋಟೋಗಳನ್ನು ಸೆರೆಹಿಡಿಯಲು ಅಗತ್ಯವಿರುವ ಕಿಟ್‌ಗಳು ಮತ್ತು ತಾಂತ್ರಿಕ ಸಿಬ್ಬಂದಿಗಳ ಕೊರತೆಯಿಂದಾಗಿ ನಾವು ಇದನ್ನು ಹಂತ ಹಂತವಾಗಿ ವಿನ್ಯಾಸಗೊಳಿಸಿದ್ದೇವೆ. ನಿರೀಕ್ಷಿತ ಕಿಟ್‌ಗಳ ಸಂಖ್ಯೆ 170 ರಿಂದ 180 ರಷ್ಟಿದ್ದರೂ, ನಮ್ಮಲ್ಲಿ 70 ಕಿಟ್‌ಗಳು ಲಭ್ಯವಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆಧಾರ್ ನವೀಕರಣ ಶಿಬಿರಗಳ ಬಗ್ಗೆ ಜಾಗೃತಿ ಮೂಡಿಸಲು ಶಾಲಾ ಪ್ರಾಂಶುಪಾಲರು ತೊಡಗಿಸಿಕೊಂಡಿದ್ದಾರೆ.

## ಜಿಬಿಎ ವಾರ್ಡ್‌ಗಳಲ್ಲೇ ಹಸಿ ಕಸದಿಂದ ಗೊಬ್ಬರ: ಎ.ಎನ್. ನಟರಾಜ್

• ಉದಯವಾಹಿನಿ, ಬೆಂಗಳೂರು



ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ 369 ವಾರ್ಡ್‌ಗಳಲ್ಲಿ ಹಸಿ ಕಸದಿಂದ ಗೊಬ್ಬರ ತಯಾರಿಸುವ ಘಟಕಗಳನ್ನು ಸ್ಥಾಪಿಸಲಾಗುತ್ತದೆ ಎಂದು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮದ (ಕೆಸಿಡಿಸಿ) ಅಧ್ಯಕ್ಷ ಎ.ಎನ್. ನಟರಾಜ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಬೆಂಗಳೂರು ನಗರದ ನಾಗರಿಕರು ಹಸಿ ಕಸ, ಒಣಕಸ ವಿಂಗಡಣೆ ಮಾಡುವುದರಿಂದ ನಗರ ಸ್ವಚ್ಛತೆ ಜೊತೆಗೆ ಗೊಬ್ಬರ ತಯಾರಿಕೆಗೆ ಸಹಕಾರಿಯಾಗಲಿದೆ. ಘಟಕಗಳ ಜೊತೆಗೆ ಎಲ್ಲಾ ವಾರ್ಡ್‌ಗಳಲ್ಲೂ ಹಸಿ ತ್ಯಾಜ್ಯದಿಂದ ಹಸಿ ಕಸ ತಯಾರಿಕೆಗೆ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಇದಕ್ಕೆ ಹೆಚ್ಚಿನ ಸ್ಥಳದ ಅಗತ್ಯವಿಲ್ಲ. ಲಭ್ಯವಿರುವ ಜಾಗದಲ್ಲೇ ಘಟಕ ಸ್ಥಾಪಿಸಲಾಗುತ್ತದೆ ಎಂದರು.

ಪ್ರಮುಖ ವಾಣಿಜ್ಯ ಸಂಕೀರ್ಣಗಳು ಹಾಗೂ ವಸತಿ ಸಮುಚ್ಚಯಗಳಲ್ಲಿ (ಅಪಾರ್ಟ್‌ಮೆಂಟ್) ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಅಳವಡಿಸುವ ಮೂಲಕ ತ್ಯಾಜ್ಯ ಸಾಗಾಣಿಕೆ ಹೊರೆಯನ್ನು ತಗ್ಗಿಸಲು ಯೋಜನೆ ರೂಪಿಸಲಾಗುತ್ತಿದೆ.

ಮಳೆ ನೀರು ಕೊಯ್ಲು ಕಡ್ಡಾಯಗೊಳಿಸಿದಂತೆ ಹಸಿ ತ್ಯಾಜ್ಯವನ್ನು ಗೊಬ್ಬರವಾಗಿಸುವ ಘಟಕ ಸ್ಥಾಪಿಸುವುದನ್ನೂ ಕಡ್ಡಾಯಗೊಳಿಸಲು ಚಿಂತಿಸಲಾಗಿದೆ.

ಅಲ್ಲಿ ಉತ್ಪಾದನೆಯಾಗುವ ಕಸವನ್ನು ಕೆಸಿಡಿಸಿ ಖರೀದಿ ಮಾಡುತ್ತದೆ ಎಂದು ನಟರಾಜ್ ಹೇಳಿದರು.

**ಉದ್ಯಾನಗಳಲ್ಲಿ ಹಸಿರು ಗೊಬ್ಬರ:** ನಗರದ ದೊಡ್ಡ ಉದ್ಯಾನಗಳಲ್ಲಿ ಕಾಂಪೋಸ್ಟ್ ಘಟಕಗಳನ್ನು ಸ್ಥಾಪಿಸಿ, ಅಲ್ಲಿ ಎಲೆಗಳು ಮತ್ತು ಹಸಿ ತ್ಯಾಜ್ಯವನ್ನು ಗೊಬ್ಬರವನ್ನಾಗಿ ಪರಿವರ್ತಿಸಲಾಗುತ್ತದೆ. ಉದ್ಯಾನಕ್ಕೆ ಅಗತ್ಯವಾದಷ್ಟು ಬಳಸಿಕೊಂಡು, ಉಳಿದಿದ್ದನ್ನು ಮಾರಾಟ ಮಾಡಲಾಗುತ್ತದೆ ಎಂದರು.

**5 ಸಾವಿರ ಟನ್ ಗೊಬ್ಬರ ಮಾರಾಟ:** ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಆರು ಘಟಕಗಳಲ್ಲಿ ದಾಸ್ತಾನಿದ್ದ ಐದು ಸಾವಿರ ಟನ್ ಗೊಬ್ಬರವನ್ನು ವಿವಿಧ ಜಿಲ್ಲೆಯ ರೈತರಿಗೆ ಸಬ್ಸಿಡಿ ದರದಲ್ಲಿ ಎರಡು ತಿಂಗಳಲ್ಲಿ ಮಾರಾಟ ಮಾಡಲಾಗಿದೆ ಎಂದು ನಿಗಮದ ಅಧ್ಯಕ್ಷ ಎ.ಎನ್. ನಟರಾಜ್ ತಿಳಿಸಿದರು. ಹಸಿ ಕಸದಿಂದ ತಯಾರಿಸಿದ ಗೊಬ್ಬರಕ್ಕೆ ಟನ್‌ವೊಂದಕ್ಕೆ ರೂ.3600 ನಿಗದಿ ಮಾಡಲಾಗಿತ್ತು. ಸರ್ಕಾರದಿಂದ ಅನುಮತಿ ಪಡೆದು ರೈತರಿಗೆ ಪ್ರತಿ ಟನ್‌ಗೆ ರೂ.2000ಕ್ಕೆ ಮಾರಾಟ ಮಾಡಲಾಗಿದೆ' ಎಂದರು.

**ಶೂನ್ಯ ತ್ಯಾಜ್ಯ ನಗರ**

**ಬೆಂಗಳೂರನ್ನು ಶೂನ್ಯ ತ್ಯಾಜ್ಯ ನಗರವನ್ನಾಗಿಸಲು ಹೊಸ ಯೋಜನೆ ರೂಪಿಸಿ ನಗರಾಭಿವೃದ್ಧಿ ಇಲಾಖೆ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸಲ್ಲಿಸಲಾಗಿದೆ. ಅಲ್ಲಿಂದ ಸಮ್ಮತಿ ದೊರೆತ ಕೂಡಲೇ ನಗರದಲ್ಲಿ ಪ್ರತಿನಿತ್ಯ ಉತ್ಪಾದನೆಯಾಗುವ ಸುಮಾರು 1500 ಟನ್ ಹಸಿ ಕಸವನ್ನು ಕೆಸಿಡಿಸಿಯಿಂದಲೇ ಗೊಬ್ಬರವನ್ನಾಗಿಸಲಾಗುವುದು ಎಂದು ಕೆಸಿಡಿಸಿ ಅಧ್ಯಕ್ಷ ನಟರಾಜ್ ತಿಳಿಸಿದರು.**

# ಟ್ರಾಫಿಕ್ ಸಮಸ್ಯೆಗೆ ಶಾಲೆಯೊಂದರ ಮಾಸ್ಟರ್ ಪ್ಲ್ಯಾನ್

### ರಾಜಾಜಿನಗರ ಮತ್ತು ಯಶವಂತಪುರ ಮಾರ್ಗಗಳಲ್ಲಿ ಎರಡು ಗಂಟೆಗಳ ಪ್ರಯಾಣಿಸುವ ಹಿನ್ನೆಲೆ ಈ ನಿರ್ಧಾರ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಸಿಲಿಕಾನ್ ಸಿಟಿಯಲ್ಲಿರುವ ಟ್ರಾಫಿಕ್ ಸಮಸ್ಯೆ ಇರುವುದು ಸಾಮಾನ್ಯವಾಗಿ ಹೋಗಿದೆ. ಕೆಲ ತಿಂಗಳ ಹಿಂದೆ ಶಾಲಾ ಮಕ್ಕಳು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಟ್ರಾಫಿಕ್‌ನಲ್ಲೇ ದಿನವೆಲ್ಲ ಹೋಗುತ್ತದೆ ಓದೋಕು, ಆಟವಾಡೋಕು ಸಮಯ ಸಿಗುತ್ತಿಲ್ಲ. ಈ ಬಗ್ಗೆ ಗಮನಿಸಿ ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ವಿಡಿಯೋ ಹಂಚಿಕೊಂಡು ಮನವಿ ಮಾಡಿದ್ದರು. ಈ ಎಲ್ಲಾ ಜಂಜಾಟದ ಮಧ್ಯೆ, ಇಲ್ಲೊಂದು ಶಾಲೆ ತನ್ನ ಬಸ್‌ಗಳಲ್ಲಿ ಅತ್ಯಾಧುನಿಕ ಬಯೋ-ಟಾಯ್ಲೆಟ್‌ಗಳನ್ನು ಅಳವಡಿಸುವ ಮೂಲಕ ಹೊಸ ಮಾದರಿಯನ್ನು ಜಾರಿ ಮಾಡಿಕೊಂಡಿದೆ. ಎರಡು ಗಂಟೆ ರಸ್ತೆಯಲ್ಲೇ ಇರಬೇಕಾಗಿತ್ತು

**ಬಸ್ ಸೌಲಭ್ಯ ವಿಸ್ತರಿಸಲು ಚಿಂತನೆ**

ಸರ್ಜಾಪುರ ರಸ್ತೆಯ ಇಂಡಸ್ ಇಂಟರ್ನ್ಯಾಷನಲ್ ಶಾಲೆ ತನ್ನ ಬಸ್‌ಗಳಿಗೆ ಬಯೋ ಟಾಯ್ಲೆಟ್ ಅಳವಡಿಸಿರುವುದು ಮಕ್ಕಳಿಗೆ ಭಾರಿ ಅನುಕೂಲಕರವಾಗಿದೆ. ಸರ್ಜಾಪುರ ಮಾರತ್ ಹಳ್ಳಿ ಸುತ್ತಮುತ್ತ ಹೆಚ್ಚು ಟ್ರಾಫಿಕ್ ಇರುತ್ತದೆ. ಶಾಲೆಯ ಬಸ್‌ಗಳು ರಾಜಾಜಿನಗರ ಮತ್ತು ಯಶವಂತಪುರದಂತಹ ದೂರದ ಮಾರ್ಗಗಳಲ್ಲಿ ಸಂಚರಿಸುವಾಗ ಕನಿಷ್ಠ ಎರಡು ಗಂಟೆಗಳ ಕಾಲ ರಸ್ತೆಯಲ್ಲಿಯೇ ಇರಬೇಕಾಗುತ್ತದೆ. ಹೀಗಾಗಿ, ಬಯೋ-ಟಾಯ್ಲೆಟ್ ಅಳವಡಿಸಿಕೊಂಡಿದೆ. ಯಶವಂತಪುರ ಮತ್ತು ರಾಜಾಜಿನಗರದಂತಹ ದೂರದ ಮಾರ್ಗದಲ್ಲಿ ಸಂಚರಿಸುವಾಗ ಕನಿಷ್ಠ ಎರಡು ಗಂಟೆಗಳ ಕಾಲ ರಸ್ತೆಯಲ್ಲಿಯೇ ಇರಬೇಕಾಗುತ್ತದೆ. ಹೆಚ್ಚೊತ್ತು ಬಸ್‌ನಲ್ಲೇ ಕುಳಿತುಕೊಳ್ಳ ಬೇಕಾಗುತ್ತದೆ. ರಸ್ತೆಯಲ್ಲಿ ಶೌಚಾಲಯದ ಸೌಲಭ್ಯವಿಲ್ಲದಿರುವುದು ಮಕ್ಕಳಲ್ಲಿ ಅಸ್ವಸ್ಥತೆ, ಆತಂಕ ಮತ್ತು ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡಬಹುದು. ಈ ಕಾರಣದಿಂದ ಶಾಲೆಯು ಪ್ರಾಯೋಗಿಕವಾಗಿ ಎರಡು ಬಸ್‌ಗಳನ್ನು ಮರುವಿನ್ಯಾಸಗೊಳಿಸಿದೆ. ಈ ಹೊಸ ಬಯೋ-ಟಾಯ್ಲೆಟ್ ಸೌಲಭ್ಯಕ್ಕಾಗಿ ಪ್ರತಿ ಬಸ್‌ಗೆ ಅಂದಾಜು 5 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಶಾಲಾ ಬಸ್‌ಗಳಲ್ಲಿ ಇಂತಹ ಸೌಲಭ್ಯ ಬಹುಶಃ ಇದೇ ಮೊದಲು.

ಚೆನ್ನೈ ಮೂಲದ ಏಜೆನ್ಸಿಯ ನೆರವಿನಿಂದ ಹೈ-ಗ್ರೇಡ್ ಬ್ಯಾಕ್ಟೀರಿಯಾ ಬಳಸಿ ತ್ಯಾಜ್ಯವನ್ನು ವಿಘಟಿಸುವ ವ್ಯವಸ್ಥೆಯನ್ನು ನಾವು ಅಳವಡಿಸಿದ್ದೇವೆ ಎಂದು ಪಡಿಕ್ಕಲ್ ಟ್ರಾವೆಲ್ಸ್‌ನ ಸಿಇಒ ಮನೋಜ್ ಪಡಿಕ್ಕಲ್ ಹೇಳಿದರು.

**ಶಾಲೆಯ ಬಸ್‌ಗಳು ರಾಜಾಜಿನಗರ ಮತ್ತು ಯಶವಂತಪುರದಂತಹ ದೂರದ ಮಾರ್ಗಗಳಲ್ಲಿ ಸಂಚರಿಸುವಾಗ ಕನಿಷ್ಠ ಎರಡು ಗಂಟೆಗಳ ಕಾಲ ರಸ್ತೆಯಲ್ಲಿಯೇ ಇರಬೇಕಾಗುತ್ತದೆ. ದೀರ್ಘಕಾಲ ಬಸ್‌ನಲ್ಲಿ ಕುಳಿತುಕೊಳ್ಳುವುದು ಮತ್ತು ಶೌಚಾಲಯದ ಸೌಲಭ್ಯವಿಲ್ಲದಿರುವುದು ಮಕ್ಕಳಲ್ಲಿ ಅಸ್ವಸ್ಥತೆ, ಆತಂಕ ಮತ್ತು ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡಬಹುದು, ವಿಶೇಷವಾಗಿ ಸಣ್ಣ ವಯಸ್ಸಿನ ಮಕ್ಕಳಿಗೆ ಇದು ಹೆಚ್ಚು ಕಷ್ಟಕರ. ಬಯೋ-ಟಾಯ್ಲೆಟ್‌ಗಳನ್ನು ಅಳವಡಿಸುವ ಮೂಲಕ ನಾವು ಮಕ್ಕಳಿಗೆ ಸುರಕ್ಷಿತ, ನೈರ್ಮಲ್ಯಯುತ ಗೌರವಯುತ ಪರಿಹಾರವನ್ನು ನೀಡುತ್ತಿದ್ದೇವೆ ಎಂದು ಇಂಡಸ್ ಇಂಟರ್ನ್ಯಾಷನಲ್ ಶಾಲೆಯ ಆಡಳಿತ ನಿರ್ದೇಶಕ ವಿನೋತ್ ಕುಮಾರ್ ಹೇಳಿದ್ದಾರೆ ಎನ್ನುವುದಾಗಿ ವರದಿ ಮಾಡಿದೆ.** – ವಿನೋತ್ ಕುಮಾರ್

**ಸದ್ಯಕ್ಕೆ ಶಾಲೆಯ ಬಳಿ ಒಟ್ಟು 37 ಬಸ್‌ಗಳಿದ್ದು, ಈಗ ಅಳವಡಿಸಲಾದ ಎರಡು ಬಸ್‌ಗಳ ಪ್ರಯೋಗಕ್ಕೆ ಪೋಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಒಂದು ವೇಳೆ ಇದು ಯಶಸ್ವಿಯಾದರೆ, ಮುಂದಿನ ದಿನಗಳಲ್ಲಿ ಇತರ ದೀರ್ಘ ಮಾರ್ಗದ ಬಸ್‌ಗಳಿಗೂ ಈ ಸೌಲಭ್ಯವನ್ನು ವಿಸ್ತರಿಸಲಾಗುತ್ತದೆ ಎಂದು ಹೇಳಿದ್ದಾರೆ.**

# ಸಿದ್ದರಾಮಯ್ಯ ಇಲ್ಲದೆ ರಾಜ್ಯದಲ್ಲಿ ಕಾಂಗ್ರೆಸ್ ಉಳಿವು ಕಷ್ಟ

## 2028ರಲ್ಲೂ ಸಿದ್ದರಾಮಯ್ಯ ಮುಖ್ಯಮಂತ್ರಿಯಾದರೆ ಬೆಂಬಲ ನೀಡುವುದಾಗಿ ಘೋಷಿಸಿದ ಎಚ್‌ಸಿ ಮಹದೇವಪ್ಪ

• ಉದಯವಾಹಿನಿ, ಮೈಸೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲದೆ ರಾಜ್ಯ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷವನ್ನು ಊಹಿಸುವುದೂ ಕಷ್ಟ ಎಂದು ಜಿಲ್ಲಾ ಮೈಸೂರು ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ. ಡಾ.ಕೆ.ಶಿವಕುಮಾರ್ ಅಭಿನಂದನಾ ಸಮಿತಿ ಹಾಗೂ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ನಡೆದ ವಿಧಾನ ಪರಿಷತ್‌ನ ನೂತನ ಸದಸ್ಯ ಡಾ.ಕೆ.ಶಿವಕುಮಾರ್ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರಿಗೆ ಸಾಮಾಜಿಕ ಹೊಣೆಗಾರಿಕೆಯೊಂದಿಗೆ ಜವಾಬ್ದಾರಿಯೂ ಇದೆ ಎಂದು ಹೇಳಿದರು.

ಯಾರು ಯೋಗ್ಯರೋ, ಸಮರ್ಥರೋ ಅವರ ಕೈಯಲ್ಲಿಅಧಿಕಾರ ಇರಬೇಕು. ಸಿದ್ದರಾಮಯ್ಯ ಅವರು ಇಲ್ಲದಿದ್ದರೆ ರಾಜ್ಯದಲ್ಲಿ ಸರ್ಕಾರ ನಡೆಸುವುದು ಕಷ್ಟವಾಗಲಿದೆ. ಹೀಗಾಗಿ ಸಿದ್ದರಾಮಯ್ಯ ಪೂರ್ಣಾವಧಿಯವರೆಗೆ ಸಿಎಂ ಆಗಿರಬೇಕು ಎಂದು ಡಾ.ಎಚ್.ಸಿ. ಮಹದೇವಪ್ಪ ಹೇಳಿದರು. ನಾವೆಲ್ಲರೂ ಸಿದ್ದರಾಮಯ್ಯ ನಾಯಕತ್ವ ಗಟ್ಟಿಗೊಳಿಸಲು ಮುಂದಾಗಬೇಕು. ಎಂದು ಹೇಳಿದರು. ನೂತನ ವಿಧಾನ ಪರಿಷತ್ ಸದಸ್ಯರಾದ ಡಾ.ಕೆ. ಶಿವಕುಮಾರ್ ಅವರ


ಉದಯವಾಹಿನಿ ಚಿತ್ರ

ಅಭಿನಂದನಾ ಕಾರ್ಯಕ್ರಮವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊಗಳಿಕೆಗೆ ವೇದಿಕೆಯಾಯಿತು. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಸಿಎಂ ಅವಧಿ ದಾಖಲೆ ಮುರಿದ ಬೆನ್ನಲ್ಲೇ, ಸಿದ್ದರಾಮಯ್ಯ ಪರವಾಗಿ ಕೈ ನಾಯಕರು ತಮ್ಮ ಧ್ವನಿಯನ್ನು ಮತ್ತಷ್ಟು ಗಟ್ಟಿಗೊಳಿಸಿದ್ದಾರೆ. ಮೈಸೂರು ಸೇರಿದಂತೆ ರಾಜ್ಯದ ನಾನಾ ಕಡೆ ವಿಜಯೋತ್ಸವ ಆಚರಣೆ ನಡೆಯುತ್ತಿರುವ ಬೆನ್ನಲ್ಲೇ, ವೇದಿಕೆಯಲ್ಲಿದ್ದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ.ಮಹದೇವಪ್ಪ ಸೇರಿದಂತೆ ಶಾಸಕರು, ದಲಿತ ಮುಖಂಡರು ಸಿದ್ದರಾಮಯ್ಯ ಅವರ ಗುಣಗಾನ ಮಾಡಿದ್ದಾರೆ.

**2028ರಲ್ಲೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಬೇಕು ಎಂಬ ಸಭಿಕರ ಆಗ್ರಹಕ್ಕೆ ದನಿಗೂಡಿಸಿದ ಸಚಿವ ಮಹದೇವಪ್ಪ ಸಿದ್ದರಾಮಯ್ಯ ಅವರು ಮೂರನೇ ಬಾರಿಗೆ ಮುಖ್ಯಮಂತ್ರಿಯಾದರೂ ನಮ್ಮದೇನೂ ತಕರಾರು ಇಲ್ಲ. ಸಿದ್ದರಾಮಯ್ಯ ಅವರ ಮೇಲೆ ದೊಡ್ಡ ಹೊಣೆಗಾರಿಕೆ ಇದೆ. ಅವರ ಮೇಲೆ ಜನರಿಗೆ ಬಲವಾದ ನಂಬಿಕೆ ಇದೆ. ಸಿದ್ದರಾಮಯ್ಯ ಇಲ್ಲದಿದ್ದರೆ ಕರ್ನಾಟಕ ದಲ್ಲಿಅಹಿಂದ ಸಮಾಜ ಮುಳುಗುತ್ತದೆ. ಬಲಹೀನವಾಗುತ್ತದೆ. ಹಾಗಾಗಿ ಅಹಿಂದ ಸಮಾಜಗಳು ಎಚ್ಚರಿಕೆಯಿಂದ ಇರಬೇಕು ಎಂದು ಹೇಳಿದರು.**

ಅಹಿಂದ ಸಮುದಾಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ ಕೊಡುಗೆಯನ್ನು ಸ್ಮರಿಸುವ ಮೂಲಕ, ತಮ್ಮ ರಾಜಕೀಯ ಜೀವನಕ್ಕೂ ಅವರು ಹೇಗೆ ನೆರವಾದರು ಎಂಬ ಸಂಗತಿಯನ್ನು ಮಹದೇವಪ್ಪ ವೇದಿಕೆಯಲ್ಲಿ ಹಂಚಿಕೊಂಡರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಕರ್ನಾಟಕದ ಸುದೀರ್ಘ ಅವಧಿಯ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗುವ ಮೂಲಕ ಹೊಸ ಇತಿಹಾಸ ಬರೆದಿದ್ದಾರೆ.

**ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಬದಲಿಸುವುದಾದರೆ ದಲಿತರಿಗೆ ಅವಕಾಶ ಕೊಡಬೇಕು ಎಂದು ಪರೋಕ್ಷವಾಗಿ ಕೇಳುತ್ತಿದ್ದಾರೆ. ನನಗೆ, ಪರಮೇಶ್ವರ್ ಸೇರಿದಂತೆ ಕೆಲ ದಲಿತ ನಾಯಕರಿಗೆ ಸಿಎಂ ಸ್ಥಾನ ಕೊಡಿ ಎಂದು ಎನ್ನುತ್ತಿದ್ದಾರೆ. ಆದರೆ, ಅಹಿಂದ ಸಮುದಾಯದ ಹಿತ ದೃಷ್ಟಿಯಿಂದ ಬೇರೆಯವರು ಸಿಎಂ ಆಗುವುದಕ್ಕಿಂತ, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿರಬೇಕು. ಸಿದ್ದರಾಮಯ್ಯ ಅವರ ನಾಯಕತ್ವ ಮತ್ತು ಮುಂದಾಳತ್ವ ಅಹಿಂದ ಸಮುದಾಯಗಳಿಗೆ ಅಗತ್ಯವಾಗಿದೆ ಎಂದು ಸಚಿವರು ಅಭಿಪ್ರಾಯಪಟ್ಟರು.**

## ಸಿಎಂ ದಾಖಲೆ: ಪಟ್ಟಣದಲ್ಲಿ ಸಂಭ್ರಮಾಚರಣೆ ಪಟಾಕಿ ಸಿಡಿಸಿ ಸಡಗರ

• ಉದಯವಾಹಿನಿ, ಗುಂಡ್ಲುಪೇಟೆ

ರಾಜ್ಯದ ದೀರ್ಘಾವಧಿ ಮುಖ್ಯಮಂತ್ರಿ ಎಂಬ ಖ್ಯಾತಿಗೆ ಸಿದ್ದರಾಮಯ್ಯ ಭಾಜನರಾದ ಹಿನ್ನೆಲೆ ಅಹಿಂದಾ ಸಂಘಟನೆ, ಯುವಕರು,ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪಟ್ಟಣದಲ್ಲಿ ಸಂಭ್ರಮಿಸಿ ಸಿಹಿ ಹಂಚಿ ಬಿರಿಯಾನಿ ವಿತರಣೆ ಮಾಡಿದರು.

ಪಟ್ಟಣದ ಸುರಭಿ ವೃತ್ತದಿಂದ ಊಟಿ ವೃತ್ತ ಸೇರಿದಂತೆ ವಿವಿದೆಡೆ ಫೋಟೋ ಕಟೌಟ್‌ಗಳು ರಾರಾಜಿಸಿದವು, ಯುವಕ ಮಿತ್ರರು ಅಭಿಮಾನಿಗಳು ನೆಚ್ಚಿನ ನಾಯಕನಿಗೆ ಶುಭಕೋರಿ ಕಟೌಟ್ ಗಳನ್ನ ಅಳವಡಿಸಿದ್ದರು. ರಾಜಕಾರಣದ ಜಟ್ಟಿ ಕಾಳಗದ ನೈಪುಣ್ಯತೆ ಪ್ರವೀಣರಾದ ಸಿದ್ದರಾಮಯ್ಯ ಅವರಿಗೆ ಪ್ರಿಯವಾದ ನಾಟಿಕೋಳಿ ಬಿರಿಯಾನಿ ವ್ಯವಸ್ಥೆ ಮಾಡುವ ಜೊತೆಗೆ ಅಭಿಮಾನ ತೋರಿದರು.

ಈ ವೇಳೆ ಮಾತನಾಡಿದ ತಾಲ್ಲೂಕು ಕುರುಬ ಸಂಘದ ಅಧ್ಯಕ್ಷ ಜಿ.ಎಲ್.ರಾಜು ಬಡಕುಟುಂಬದಿಂದ ಬಂದಂತ ಸಿದ್ದರಾಮಯ್ಯ ಅವರು ದೇವರಾಜು ಅರಸು ಅವರ ದಾಖಲೆ ಮುರಿದಿದ್ದಾರೆ, ಬಡವರ ಪಾಲಿನ ಭಾಗ್ಯಗಳ ಸರದಾರನಾಗಿ ಅನ್ನರಾಮಯ್ಯನಾಗಿ


ಉದಯವಾಹಿನಿ ಚಿತ್ರ

ತುತ್ತು ನೀಡಿದ ಮೇರು ವ್ಯಕ್ತಿತ್ವ ನಾಯಕರಾಗಿದ್ದಾರೆ, ಮುಂದಿನ ದಿನಗಳಲ್ಲಿಯೂ ಸಹ ಸಿದ್ದರಾಮಯ್ಯ ಪೂರ್ಣಾವಧಿ ಸಿಎಂ ಆಗಿ ಮುಂದುವರಿಯಬೇಕು ಎಂದರು.

ಈ ಸಂದರ್ಭದಲ್ಲಿ ಯುವ ಮುಖಂಡರಾದ ರಘು, ವಿಶ್ವನಾಥ್ ಜಿ.ಕೆ. ಸಂದೀಪ್ ಕುಮಾರ್, ಪ್ರಮೋದ್ , ಸಾಗರ್, ವಿಶ್ವಾಸ್ ಪರಂ, ಮಂಜುನಾಥ್, ಹೊಸೂರು ಶಿವಣ್ಣ, ಚಂದ್ರಶೇಖರ್, ಶಶಿ, ಬಸವರಾಜು, ಎಚ್.ಎನ್. ಲಿಂಗರಾಜು, ಮನು, ಅಣ್ಣಯ್ಯ ಸೇರಿದಂತೆ ಅಭಿಮಾನಿಗಳು ,ಹಿರಿಯ ಮುಖಂಡರು ಹಾಜರಿದ್ದರು.

### 2 ಸಾವಿರ ಮಂದಿಗೆ ಬಿರಿಯಾನಿ

**ಮುಂಜಾನೆಯಿಂದಲೇ ಸಂಭ್ರಮಾಚರಣೆಗೆ ಸಿದ್ಧತೆ ನಡೆಸುವ ಜೊತೆಯಲ್ಲೇ 2 ಸಾವಿರ ಮಂದಿಗೆ ಬಿರಿಯಾನಿ ವ್ಯವಸ್ಥೆ ಮಾಡಲಾಗಿತ್ತು. ಪಟ್ಟಣದ ಕನಕವೃತ್ತದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು, ಸಿದ್ದರಾಮಯ್ಯ ಅವರ ಪರ ಜಯಘೋಷ ಮೊಳಗಿಸುವ ಮೂಲಕ ಅಭಿಮಾನಿಗಳು ಕುಣಿದು ಕುಪ್ಪಳಿಸಿದರು.**

## ಹುಲಿ ದಾಳಿಗೆ ಹಸು ಸಾವು: ತೆರಕಣಾಂಬಿಯಲ್ಲಿ ಘಟನೆ

• ಉದಯವಾಹಿನಿ, ಗುಂಡ್ಲುಪೇಟೆ

ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ತಾಲ್ಲೂಕಿನ ತೆರಕಣಾಂಬಿ ಗ್ರಾಮದ ರೈತರ ಜಮೀನಿನಲ್ಲಿ ನಡೆದಿದೆ, ಬೆಳಗಿನ ಜಾವ ದಾಳಿ ಮಾಡಿರುವ ಕುರಿತು ಅನುಮಾನ ವ್ಯಕ್ತವಾಗಿದ್ದು ವ್ಯಾಘ್ರನ ಸೆರೆಗೆ ರೈತರು ಒತ್ತಾಯಿಸಿದ್ದಾರೆ.

ತೆರಕಣಾಂಬಿ ಗ್ರಾಮದ ರಾಮು ಎಂಬವರ ಜಮೀನಿನಲ್ಲಿದ್ದ ಹಸುವಿನ ಮೇಲೆ ದಾಳಿ ನಡೆಸಿದ ಹುಲಿ ಅರ್ಧ ದೇಹವನ್ನ ತಿಂದು ಹಾಕಿದೆ ಹಾಗೂ ಘಟನಾ ಸಂಬಂದ ಸ್ಥಳಕ್ಕೆ ದೌಡಾಯಿಸಿದ ಗುಂಡ್ಲುಪೇಟೆ ಬಫರ್ ಜೋನ್ ವಲಯದ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿ ಪರಿಹಾರ ನೀಡುವ ಭರವಸೆ ನೀಡಿದ್ದಾರೆ.

**ಹುಲಿ ಸೆರೆಗೆ ಆಗ್ರಹ :** ದೇಪಾಪುರ ಗ್ರಾಮದಲ್ಲಿ ಹುಲಿ ಸೆರೆಯಾದ ಬಳಿಕ ನಿಟ್ಟುಸಿರು ಬಿಟ್ಟಿದ್ದ ರೈತಾಪಿ ವರ್ಗ ಮತ್ತೇ ಆತಂಕಕ್ಕೆ ಒಳಗಾಗಿದ್ದು ಕೂಂಬಿಂಗ್ ಕಾರ್ಯಚರಣೆ ನಡೆಸುವಂತೆ ಸ್ಥಳೀಯರು ಆಗ್ರಹಿಸಿದ್ದು ಅರಣ್ಯ ಇಲಾಖೆ ಕ್ರಮ ಕೈಗೊಳ್ಳುವ ಭರವಸೆ ನೀಡಿದೆ.


ಉದಯವಾಹಿನಿ ಚಿತ್ರ

**ರೈತರ ಜಮೀನುಗಳಲ್ಲೇ ಕಾಣಿಸಿಕೊಳ್ಳುತ್ತಿರುವ ವನ್ಯಮೃಗಗಳು ಸಾಕು ಪ್ರಾಣಿಗಳ ಮೇಲೆ ದಾಳಿ ನಡೆಸಿ ಆಹುತಿ ಪಡೆಯುತ್ತಿವೆ, ತೆರಕಣಾಂಬಿ ಸುತ್ತಲಿನ ವ್ಯಾಪ್ತಿಯಲ್ಲಿ ಚಿರತೆ ಹುಲಿ ಉಪಟಳ ಹೆಚ್ಚಾಗಿದ್ದು ಪಂಜರವಿರಿಸಿ ಕೂಂಬಿಂಗ್ ಕಾರ್ಯಾಚರಣೆಗೆ ಅರಣ್ಯ ಇಲಾಖೆ ಮುಂದಾಗಬೇಕು.**

-ಈಶ್ವರ್ ತೆರಕಣಾಂಬಿ

## ಸಿದ್ಧರಾಮೇಶ್ವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ತೀರ್ಮಾನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಮತ್ತು ಭೋವಿ ಸಮುದಾಯವು ಸಂಯುಕ್ತವಾಗಿ ಜನವರಿ 14 ರಂದು ಸಿದ್ದರಾಮೇಶ್ವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ತಹಶೀಲ್ದಾರ್ ಸುದರ್ಶನಯಾದವ್ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಎಲ್ಲಾ ಇಲಾಖೆಗಳ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸುವ ಮೂಲಕ ಸಹಕಾರ ನೀಡಬೇಕು.

ನಗರದ ಪ್ರವಾಸಿ ಮಂದಿರದಿಂದ ಸ್ಥಬ್ಧಚಿತ್ರಗಳ ಮೆರವಣಿಗೆ ಆರಂಭವಾಗುತ್ತದೆ. ನಗರದ ಪ್ರಮುಖ ರಸ್ತೆಗಳ ಮೂಲಕ ಮೆರವಣಿಗೆ ಸಾಗಿ ವೇದಿಕೆಯ ಸ್ಥಳವಾದ ತಾಲ್ಲೂಕು ಪಂಚಾಯಿತಿಗೆ ಸೇರಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿ ತಹಶೀಲ್ದಾರ್ ತಿಳಿಸಿದರು.

## ನಲ್ಲಗುಟ್ಲಪಲ್ಲಿ ಆಶ್ರಮ ಶಾಲೆಯಲ್ಲಿ ನಾನಾ ಅಧ್ವಾನ

• ಉದಯವಾಹಿನಿ, ಚೇಳೂರು

ಬಡ ಹಾಗೂ ಅನಾಥ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರ ಕೋಟ್ಯಂತರ ರೂಪಾಯಿ ವ್ಯಯಿಸುತ್ತಿದೆ.

ಆದರೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ಶಾಲೆಗಳಲ್ಲಿ ನಾನಾ ಅಧ್ವಾನಗಳು ಇವೆ. ಇದಕ್ಕೆ ನಿದರ್ಶನ ತಾಲ್ಲೂಕಿನ ನಲ್ಲಗುಟ್ಲಪಲ್ಲಿಯ ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆ. ಇಲ್ಲಿನ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. 50ಕ್ಕೂ ಹೆಚ್ಚು ಅನಾಥ ಹಾಗೂ ಏಕಪೋಷಕ ಮಕ್ಕಳು ಇಲ್ಲಿ ಇದ್ದಾರೆ.

**ಸೌಲಭ್ಯಗಳಿದ್ದರೂ ಬಳಕೆಗೆ ಭಾಗ್ಯವಿಲ್ಲ:** ವಸತಿ ಶಾಲೆಯಲ್ಲಿ ಮಕ್ಕಳಿಗೆ ಬಿಸಿನೀರು ನೀಡಲು ಗೀಸರ್‌ಗಳನ್ನು ತರಲಾಗಿದೆ. ಆದರೆ ಅವುಗಳನ್ನು ತಂದು ಹಲವು ದಿನಗಳೇ ಕಳೆದರೂ ಅಳವಡಿಸಿಲ್ಲ. ಸೋಲಾರ್ ವ್ಯವಸ್ಥೆಯು ಕೇವಲ ಮಧ್ಯಾಹ್ನದ ಮೇಲೆ ಬಿಸಿನೀರು ನೀಡುವುದರಿಂದ, ಕೊರೆಯುವ ಚಳಿಯಲ್ಲಿ ಬೆಳಿಗ್ಗೆ ಈ ಪುಟ್ಟ ಮಕ್ಕಳು ತಣ್ಣೀರಿನಲ್ಲೇ ಸ್ನಾನ ಮಾಡುವರು. ವರ್ಷದಿಂದ ಯುಪಿಎಸ್ ಬ್ಯಾಟರಿ ಕೆಟ್ಟಿದೆ. ರಾತ್ರಿ ವಿದ್ಯುತ್ ಹೋದಾಗ ಮಕ್ಕಳು ಕತ್ತಲೆಯಲ್ಲಿ ಕಾಲ ಕಳೆಯುತ್ತಿದ್ದಾರೆ ಎನ್ನಲಾಗಿದೆ. ಆಶ್ರಮ ಶಾಲೆಯಲ್ಲಿ ವಾಷಿಂಗ್ ಮೆಷಿನ್ ವ್ಯವಸ್ಥೆ ಇದ್ದರೂ ಮಕ್ಕಳ ಬಳಕೆಗೆ


ಉದಯವಾಹಿನಿ ಚಿತ್ರ

ಸದ್ಬಳಕೆ ಆಗುತ್ತಿಲ್ಲ. ವಾರ್ಡನ್ ಶಾಲೆಗೆ ಬರುವುದು ಅಪರೂಪ ಎನ್ನುವ ಮಾತಿದೆ. ಶಾಲೆಯಲ್ಲಿರುವ ಎಲ್ಲರೂ ಅತಿಥಿ ಶಿಕ್ಷಕರೇ ಆಗಿದ್ದಾರೆ.

ವಸತಿ ಶಾಲೆಯ ನಿಯಮದಂತೆ ಎಲ್ಲಾ ಶಿಕ್ಷಕರು ರಾತ್ರಿ ಇಲ್ಲೇ ಇರಬೇಕು. ಆದರೆ ದಿನಕ್ಕೊಬ್ಬರಂತೆ ಪಾಳಿಯಲ್ಲಿ ಇರುತ್ತಾರೆ. ಈ ಬಗ್ಗೆ ಮಾಹಿತಿ ಪಡೆಯಲು ಬಾಗೇಪಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗೆ ಹಲವು ಬಾರಿ ಕರೆ ಮಾಡಿದರೂ ಅವರು ಕರೆ ಸ್ವೀಕರಿಸಲಿಲ್ಲ. ಜಿಲ್ಲಾಧಿಕಾರಿ ಸಿಇಒ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಕೇವಲ ನಾಮಕಾವಸ್ಥೆಗೆ ಎಚ್ಚರಿಕೆ ನೀಡಿ ಕೈತೊಳೆದುಕೊಳ್ಳುವ ಬದಲಿಗೆ ಕಠಿಣ ಕ್ರಮವಹಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸುವರು.

### ವಾರ್ಡನ್‌ಗಳಿಲ್ಲ

**ಜಿಲ್ಲೆಯಲ್ಲಿ ವಾರ್ಡನ್ ಹುದ್ದೆಗಳು ಖಾಲಿ ಇವೆ. ನಮಗೆ 10 ವಾರ್ಡನ್ ಗಳು ಬೇಕು. ಆದರೆ ಇರುವುದು ಕೇವಲ ಮೂವರು ಮಾತ್ರ. ಹೀಗಾಗಿ ಒಬ್ಬರೇ ಮೂರ್ನಾಲ್ಕು ಹಾಸ್ಟೆಲ್ ಜವಾಬ್ದಾರಿ ನೋಡಿಕೊಳ್ಳಬೇಕಿದೆ. ಬಟ್ಟೆ ಒಗೆಯುವ ಯಂತ್ರ ಕೆಟ್ಟಿರುವುದು ಗಮನಕ್ಕೆ ಬಂದಿದೆ. ಈಗಾಗಲೇ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದೇನೆ. ಕಾಯಂ ಶಿಕ್ಷಕರ ನೇಮಕ ಸರ್ಕಾರದಿಂದ ಆಗಬೇಕಿದೆ ಎನ್ನುತ್ತಾರೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರವೀಣ್ ಪಾಟೀಲ್.**

## ಪಿಂಚಣಿ ಮೊತ್ತ ಹೆಚ್ಚಳಕ್ಕೆ ಒತ್ತಾಯ


ಉದಯವಾಹಿನಿ ಚಿತ್ರ

• ಉದಯವಾಹಿನಿ, ತುಮಕೂರು

ನಿವೃತ್ತ ನೌಕರರ ಇಪಿಎಸ್ ಪಿಂಚಣಿ ಕನಿಷ್ಠ ಮೊತ್ತವನ್ನು ಹೆಚ್ಚಿಸಬೇಕು. ಹೆಚ್ಚುವರಿ ಪಿಂಚಣಿ ನೀಡಬೇಕು ಎಂದು ಎನ್‌ಎಸಿ ರಾಷ್ಟ್ರೀಯ ಮುಖ್ಯ ಸಂಯೋಜಕ ರಮಾಕಾಂತ್ ನರಗುಂದ ಆಗ್ರಹಿಸಿದರು. ನಗರದಲ್ಲಿ ಕೆಎಸ್‌ಆರ್‌ಟಿಸಿ ತುಮಕೂರು ವಿಭಾಗದ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಟ್ರಸ್ಟ್ ಹಮ್ಮಿಕೊಂಡಿದ್ದ ಮೊದಲ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದರು. ಪಿಂಚಣಿ ಹೆಚ್ಚಳಕ್ಕೆ ಆಗ್ರಹಿಸಿ ಸಾಕಷ್ಟು ಬಾರಿ ಮನವಿ ಸಲ್ಲಿಸಿ, ಹೋರಾಟ ನಡೆಸಲಾಗಿದೆ. ಉನ್ನತ ಅಧಿಕಾರಿಗಳೊಂದಿಗೂ ಚರ್ಚೆ ನಡೆಸಿ, ಸಮಸ್ಯೆ ಮನವರಿಕೆ ಮಾಡಿ ಕೊಡಲಾಗಿದೆ. ನಮ್ಮ ಹೋರಾಟ ನಿರ್ಣಾಯಕ ಹಂತದಲ್ಲಿದ್ದು, ಮುಂದಿನ ದಿನಗಳಲ್ಲಿ ಪಿಂಚಣಿ ಕನಿಷ್ಠ ಮೊತ್ತವನ್ನು ಮಾಸಿಕ ರೂ. 7,500ಕ್ಕೆ ಹೆಚ್ಚಿಸುವ ಸಾಧ್ಯತೆ ಇದೆ ಎಂದು ಹೇಳಿದರು.

ವಿವಿಧ ನಿಗಮ, ಮಂಡಳಿಗಳಲ್ಲಿ ಕೆಲಸ ಮಾಡಿ ನಿವೃತ್ತಿಯ ನಂತರ, ಸಂಧ್ಯಾಕಾಲದಲ್ಲಿ ಗೌರವಯುತ ಜೀವನ ನಡೆಸಲು ಪಿಂಚಣಿ ಮೊತ್ತ ಹೆಚ್ಚಿಸಬೇಕು. ಸುಪ್ರೀಂ ಕೋರ್ಟ್ ಸಹ ಕನಿಷ್ಠ ಪಿಂಚಣಿ ಹೆಚ್ಚಳಕ್ಕೆ ನಿರ್ದೇಶಿಸಿದೆ ಎಂದರು.

ಸಾರಿಗೆ ಸಂಸ್ಥೆ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷ ಆರ್.ಸುಬ್ಬಣ್ಣ, ಕೆಎಸ್‌ಆರ್‌ಟಿಸಿ ಸಿಬ್ಬಂದಿ, ನೌಕರರ ಪಿಂಚಣಿಗೆ ಸಂಬಂಧಿಸಿದಂತೆ ಸರ್ಕಾರದ ನೀತಿಗಳು ಬದಲಾಗಬೇಕಿದೆ.

ನಮ್ಮ ಬೇಡಿಕೆ ಈಡೇರಿಸುವ ಬಗ್ಗೆ ಸರ್ಕಾರ ಲಿಖಿತ ಭರವಸೆ ನೀಡಿದೆ ಎಂದು ತಿಳಿಸಿದರು. ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಜಗದೀಶ್, ನಿವೃತ್ತ ಅಧಿಕಾರಿ ಗಜೇಂದ್ರಕುಮಾರ್, ಟ್ರಸ್ಟ್ ಅಧ್ಯಕ್ಷ ಭೀಮಾನಾಯ್ಕ, ಕನ್ನಡ ಸೇನೆ ಅಧ್ಯಕ್ಷ ಧನಿಯಕುಮಾರ್, ಟ್ರಸ್ಟ್ ಪದಾಧಿಕಾರಿಗಳಾದ ಕುಲಕರ್ಣಿ, ದೊಡ್ಡ ಗೌಡ, ಡಿಟಿಒ ಮಂಜುನಾಥ್, ಡಿಎಂಇ ಅಶೀಫ್‌ವುಲ್ಲಾ ಷರೀಫ್, ಮುಖಂಡರಾದ ಕುಂಭಯ್ಯ ಇತರರು ಉಪಸ್ಥಿತರಿದ್ದರು.

## ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಅನುಮತಿಗೆ ಆಗ್ರಹ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಧುಗಿರಿ

ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಅನುಮತಿ ನೀಡಲು ಅಧಿಕಾರಿಗಳು ಸುಪ್ರೀಂಕೋರ್ಟ್ ಮೇಲೆ ಹೇಳುತ್ತಾರೆ. ಆದರೆ ಚಲನಚಿತ್ರ ನಟರ ಪುತ್ಥಳಿ ನಿರ್ಮಾಣಕ್ಕೆ ಎಲ್ಲಿಂದ ಅನುಮತಿ ನೀಡಿದ್ದಾರೆ. ತಕ್ಷಣ ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಅನುಮತಿ ನೀಡಬೇಕು ಎಂದು ದಲಿತ ಮುಖಂಡರು ಒತ್ತಾಯಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಉಪವಿಭಾಗ ಮಟ್ಟದ ಪರಿಶಿಷ್ಟರ ಕುಂದುಕೊರತೆ ಸಭೆಯಲ್ಲಿ ಮಾತನಾಡಿದರು.ಉಪವಿಭಾಗಾಧಿಕಾರಿ ಗೊಟೂರು ಶಿವಪ್ಪ ಪ್ರತಿಕ್ರಿಯಿಸಿ, ತಿಂಗಳೊಳಗಾಗಿ ಪುತ್ಥಳಿ ನಿರ್ಮಾಣಕ್ಕೆ ಅನುಮತಿ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು.

ಕೊರಟಗೆರೆ ತಾಲ್ಲೂಕಿನ ನೇಗಲಾಲ ಗ್ರಾಮದ ದೇವಾಲಯದಲ್ಲಿ ಅಸ್ಪೃಶ್ಯತೆ ಹೋಗಲಾಡಿಸಬೇಕು. ಬಹುತೇಕ ಗ್ರಾಮಗಳಲ್ಲಿ ದಲಿತ ಸಮುದಾಯ ಸ್ಮಶಾನ ಕೊರತೆ, ಮನೆ- ನಿವೇಶನ ಕೊರತೆ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಆದ್ಯತೆ ಮೇರೆಗೆ ಪರಿಹಾರ ನೀಡಬೇಕು. ಮಧುಗಿರಿ ತಾಲ್ಲೂಕು ಸಿದ್ದಾಪುರ ಗ್ರಾಮದಲ್ಲಿ ದಲಿತರಿಗೆ ಪ್ರತ್ಯೇಕ ರುದ್ರಭೂಮಿಗೆ ಅವಕಾಶ ಮಾಡಿ ಕೊಡಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕಿನಲ್ಲಿ ಅಂಬೇಡ್ಕರ್, ಬಾಬು ಜಗಜೀವನ್ ರಾಂ. ವಾಲ್ಮೀಕಿ ಭವನಗಳಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದರು. ತಹಶೀಲ್ದಾರ್ ಶ್ರೀನಿವಾಸ್, ರವಿ, ಆನಂದ್ ಕುಮಾರ್, ಮಂಜುನಾಥ್ ಡಿವೈಎಸ್‌ಪಿ ಮಂಜುನಾಥ್, ಇಒ ಲಕ್ಷ್ಮಣ್, ಪವಿತ್ರ ಹಾಗೂ ವಕೀಲ ನರಸಿಂಹಮೂರ್ತಿ, ತೊಂಡೊಟಿ ರಾಮಾಂಜಿ, ಮೈಲಾರಪ್ಪ, ಎಂ.ವೈ. ಶಿವಕುಮಾರ್, ಭರತ್ ಬೆಲ್ಲದಮಡಗು, ಮಹಾಲಿಂಗಪ್ಪ, ವೆಂಕಟೇಶ್ ಮೂರ್ತಿ, ಕೃಷ್ಣಮೂರ್ತಿ, ಸಿದ್ದಪ್ಪ, ರಂಗನಾಥ್, ಸಂಜೀವಪ್ಪ ಹಾಜರಿದ್ದರು.

## ಮಿನಿ ನ್ಯೂಸ್

### ಕಾಡಾನೆ ದಾಳಿ: ಗೊನೆಭರಿತ ಬಾಳೆತೋಟ ನಾಶ

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನ ಸಿಂಗರಾಜಿಪುರ ಗ್ರಾಮದಲ್ಲಿ ಕಾಡಾನೆಗಳು ದಾಳಿ ನಡೆಸಿ ರೈತರೊಬ್ಬರ ಲಕ್ಷಾಂತರ ರೂಪಾಯಿ ಮೌಲ್ಯದ ಗೊನೆಭರಿತ ಬಾಳೆ ಗಿಡಗಳನ್ನು ಧ್ವಂಸ ಮಾಡಿರುವ ಘಟನೆ ನಡೆದಿದೆ. ಗ್ರಾಮದ ರೈತ ರಾಮಕೃಷ್ಣಗೌಡ ಅವರು ತಮ್ಮ ಒಂದೂವರೆ ಎಕರೆ ಜಮೀನಿನಲ್ಲಿ ಬೆಳೆದಿದ್ದ ಸುಮಾರು 600ಕ್ಕೂ ಹೆಚ್ಚು ಬಾಳೆ ಗಿಡಗಳಿರುವ ತೋಟದ ಮೇಲೆ ದಾಳಿ ಮಾಡಿರುವ ಕಾಡಾನೆಗಳು ಇಡೀ ತೋಟವನ್ನು ಧ್ವಂಸ ಮಾಡಿವೆ. ಇದರಿಂದ ರೈತನಿಗೆ ರೂ.3 ಲಕ್ಷಕ್ಕೂ ಅಧಿಕ ನಷ್ಟ ಉಂಟಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಆನೆಗಳನ್ನು ಕಾಡಿ ಗಟ್ಟಲು ಮುಂದಾಗುತ್ತಿಲ್ಲ. ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ನಷ್ಟ ಅನುಭವಿಸಿರುವ ಬೆಳೆಗೆ ಪರಿಹಾರ ನೀಡಬೇಕು ಎಂದು ನಷ್ಟ ಅನುಭವಿಸಿರುವ ರೈತ ರಾಮಕೃಷ್ಣಗೌಡ ಒತ್ತಾಯಿಸಿದ್ದಾರೆ.

### ಗಿರವಿ ಅಂಗಡಿ ಒಡವೆ ಕಳೆದುಕೊಂಡವರ ಪ್ರತಿಭಟನೆ

• ಉದಯವಾಹಿನಿ, ಕನಕಪುರ

ಕೋಡಿಹಳ್ಳಿ ಹೋಬಳಿ ಕೊಳಗೊಂಡನಹಳ್ಳಿ ಗಿರವಿ ಅಂಗಡಿ ಮಾಲೀಕ ಗ್ರಾಹಕರ ಐದು ಕೆ.ಜಿ ಚಿನ್ನ ಮತ್ತು 50 ಲಕ್ಷದೊಂದಿಗೆ ಪರಾರಿಯಾಗಿ ಎರಡು ಕಳೆದರೂ ಪೊಲೀಸರು ಆರೋಪಿಯನ್ನು ಪತ್ತೆ ಮಾಡಿಲ್ಲ ಎಂದು ಆರೋಪಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಗಿರವಿ ಅಂಗಡಿ ಮಾಲೀಕ ಬಾಬುರಾವ್ ರಾತ್ರೋರಾತ್ರಿ ಜನರ ಚಿನ್ನಾಭರಣ ಮತ್ತು ಲಕ್ಷಾಂತರ ರೂಪಾಯಿ ಹಣದೊಂದಿಗೆ ಕುಟುಂಬ ಸಮೇತ ಪರಾರಿಯಾಗಿದ್ದು ಅಂದು ಪೊಲೀಸರು ದೂರು ಸ್ವೀಕರಿಸಿರಲಿಲ್ಲ. ಆರೋಪಿಯನ್ನು ಪತ್ತೆ ಹಚ್ಚಿ ಒಡವೆ ಹಾಗೂ ಹಣ ವಾಪಸ್ ಕೊಡುವುದಾಗಿ ಸಮಾಧಾನಪಡಿಸಿ ಕಳಿಸಿದ್ದರು. ಎರಡು ವರ್ಷವಾದರೂ ಆರೋಪಿಯನ್ನು ಪೊಲೀಸರು ಪತ್ತೆ ಹಚ್ಚಲು ಸಾಧ್ಯವಾಗಿಲ್ಲ ಎಂದು ಜನರು ದೂರಿದರು. ಹನುಮಾನ್ ಜುವೆಲರ್ಸ್ ಆ್ಯಂಡ್ ಪಾನ್ ಬ್ರೋಕರ್ಸ್, ಮಾತಾಜಿ ಪಾನ್ ಬ್ರೋಕರ್ಸ್ ಆ್ಯಂಡ್ ಜುವೆಲರ್ಸ್ ಹೆಸರಿನ ಗಿರವಿ ಅಂಗಡಿಯಲ್ಲಿ ಕೊಳಗೊಂಡನಹಳ್ಳಿ ಹಾಗೂ ಸುತ್ತಮುತ್ತಲ 15 ಗ್ರಾಮಗಳ 150ಕ್ಕೂ ಹೆಚ್ಚು ಗ್ರಾಹಕರು ಚಿನ್ನಾಭರಣ ಗಿರವಿ ಇಟ್ಟಿದ್ದರು. ಪರಿಚಿತರ ಬಳಿ ಒಟ್ಟು ರೂ.40 ಲಕ್ಷದಿಂದ ರೂ.50 ಲಕ್ಷದವರೆಗೆ ಸಾಲ ಪಡೆದಿದ್ದ ಎಂದು ಪ್ರತಿಭಟನಕಾರರು ದೂರಿದರು.

ಈವರೆಗೂ ಪೊಲೀಸರು ಆರೋಪಿಯನ್ನು ಹುಡುಕಿ, ಒಡವೆಗಳನ್ನು ವಾಪಸ್ ಕೊಡಿಸಿಲ್ಲ. ಪೊಲೀಸರನ್ನು ವಿಚಾರಿಸಿದರೆ ಆರೋಪಿಯ ಹುಡುಕಾಟ ಮಾಡುತ್ತಿದ್ದೇವೆ. ಇನ್ನೂ ಪತ್ತೆಯಾಗಿಲ್ಲ ಎಂದು ಸಬೂಬೂ ಹೇಳಿ ಕಳಿಸುತ್ತಿದ್ದಾರೆ ಎಂದು ಅಳಲು ತೋಡಿಕೊಂಡರು.

### ತಾಲ್ಲೂಕಿನ ಕಿತ್ತನಾಮಂಗಲ ಕೆರೆ ಅಂಗಳದಲ್ಲಿ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕುಣಿಗಲ್

ತಾಲ್ಲೂಕಿನ ಕಿತ್ತನಾಮಂಗಲ ಕೆರೆ ಮಣ್ಣನ್ನು ಹೂಳೆತ್ತುವ ನೆಪದಲ್ಲಿ ಕಾಂಗ್ರೆಸ್ ಮುಖಂಡರು ಇಟ್ಟಿಗೆ ಕಾರ್ಖಾನೆಗೆ ಸಾಗಿಸುತ್ತಿದ್ದಾರೆ ಎಂದು ಆರೋಪಿಸಿ ಗ್ರಾಮಸ್ಥರು ಕೆರೆ ಅಂಗಳದಲ್ಲಿ ಪ್ರತಿಭಟನೆ ನಡೆಸಿದರು. ಕಸಬಾ ಹೋಬಳಿ ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಕುಲುಮೆಪಾಳ್ಯ ಶಿವಣ್ಣ ಮಾತನಾಡಿ, ಕಸಬ ಹೋಬಳಿ ಕೆರೆಗಳಿಗೆ ನೀರು ಹರಿಸಲು ವಿಫಲರಾಗಿರುವ ಶಾಸಕರು, ಶ್ರೀರಂಗ ಏತನೀರಾವರಿಗೆ ಪ್ರಾಮುಖ್ಯತೆ ನೀಡಿದ್ದಾರೆ. ಹುತ್ತಿದುರ್ಗ ಹೋಬಳಿಯ ಕೇವಲ ಐದು ಕೆರೆಗೆ ನೆಪಮಾತ್ರಕ್ಕೆ ನೀರು ಹರಿಸಿ ಮಾಗಡಿ ತಾಲ್ಲೂಕಿನ ಕೆರೆಗಳನ್ನು ತುಂಬಿಸಲು ಹೊರಟಿದ್ದಾರೆ. ಕಿತ್ತಾನಾಮಂಗಲ ಕೆರೆಗೆ ನೀರು ಹರಿಸುವ ಬದಲು ಹೂಳೆತ್ತುವ ನೆಪದಲ್ಲಿ ಕೆರೆ ಮಣ್ಣನಡಿಯಲ್ಲಿರುವ ಮರಳನ್ನು ತೆಗೆದು ಹಣ ಮಾಡಲು ಕಾಂಗ್ರೆಸ್ ಮುಖಂಡರು ಸಂಚು ನಡೆಸಿದ್ದಾರೆ ಎಂದು ದೂರಿದರು.

ಕೆರೆ ಮಣ್ಣು ರೈತರ ಹೊಲಗಳಿಗೆ ನೀಡುವ ಬದಲು ಅಂಚೆಪಾಳ್ಯ ಬಳಿಯ ಇಟ್ಟಿಗೆ ಕಾರ್ಖಾನೆಗೆ ಸಾಗಿಸುತ್ತಿದ್ದಾರೆ. ಯಾವುದೇ ಕಾರಣಕ್ಕೂ ಕೆರೆ ಮಣ್ಣನ್ನು ಕಾರ್ಖಾನೆಗಳಿಗೆ ನೀಡಲು ಬಿಡುವುದಿಲ್ಲ. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಮುಂದುವರೆದರೆ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಗುಜ್ಜೇನಹಳ್ಳಿ ಕುಮಾರ್, ಬ್ರಹ್ಮಕುಮಾರ್, ಜಗದೀಶ್, ಪುಟ್ಟಣ್ಣ, ಗಂಗಾಧರ್, ಗಂಗಣ್ಣ, ಗಂಗಾಧರಯ್ಯ ಮತ್ತು ಗುಜ್ಜೇನಹಳ್ಳಿ, ಗಂಟಗಾನಹಳ್ಳಿ, ಕಾಡಮತ್ತಿಕೆರೆ, ಕಾಡರಾಮನಹಳ್ಳಿ, ಚನ್ನಾಪುರ ಗ್ರಾಮಸ್ಥರು ಹಾಜರಿದ್ದರು.

# ಸಮಸ್ಯೆಗೆ ಪರಿಹಾರದ ಹೊಣೆಗಾರಿಕೆ ನಿರ್ವಹಿಸುವೆ: ಯದುವೀರ್ ಒಡೆಯರ್ ಭರವಸೆ

## ಜನಸಂಪರ್ಕ ಸಭೆಯಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ವೃದ್ಧೆಯೊಬ್ಬರ ಅಹವಾಲು ಆಲಿಸಿದರು

• ಉದಯವಾಹಿನಿ, ಮೈಸೂರು

ಜನರ ಸಮಸ್ಯೆಗಳನ್ನು ಕೇಳುವುದಷ್ಟೆ ನನ್ನ ಕರ್ತವ್ಯವಲ್ಲ. ಅವುಗಳಿಗೆ ಪರಿಹಾರ ಒದಗಿಸುವುದು ಹೊಣೆಗಾರಿಕೆಯನ್ನೂ ನಿರ್ವಹಿಸುವೆ' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದರು. ತಾಲ್ಲೂಕಿನ ನಾಗನಹಳ್ಳಿಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ನಾಗರಿಕರ ಅಹವಾಲುಗಳನ್ನು ಸ್ವೀಕರಿಸಿ ಅವರು ಮಾತನಾಡಿದರು.

ರಸ್ತೆ, ಕುಡಿಯುವ ನೀರು, ಒಳಚರಂಡಿ, ವಿದ್ಯುತ್, ಆರೋಗ್ಯ, ಶಿಕ್ಷಣ ಹಾಗೂ ಮೂಲಸೌಕರ್ಯ ಸಂಬಂಧಿಸಿದಂತೆ ಹಲವು ಅಹವಾಲುಗಳು ಬಂದಿವೆ. ಅವುಗಳನ್ನು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದು ಕಾಲಮಿತಿಯೊಳಗೆ ಪರಿಹಾರ ಒದಗಿಸುವ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಜನರ ವಿಶ್ವಾಸವೇ ನನ್ನ ಸಾರ್ವಜನಿಕ ಜೀವನದ ಶಕ್ತಿ ಎಂದ ಅವರು, ಪ್ರತಿ ಸಮಸ್ಯೆಯನ್ನೂ ಗಂಭೀರವಾಗಿ ಪರಿಗಣಿಸಲಾಗುವುದು' ಎಂದು ತಿಳಿಸಿದರು.

ಖುದ್ದಾಗಿ ತಿಳಿಯಲು: 'ಇಂತಹ ಸಭೆಗಳ ಮೂಲಕ ಜನರೊಂದಿಗೆ


ಉದಯವಾಹಿನಿ ಚಿತ್ರ

**ಪ್ರಧಾನಿ ನರೇಂದ್ರ ಮೋದಿ ಅವರು ಜನರಿಗಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ರಾಜ್ಯ ಸರ್ಕಾರ ಜನರನ್ನು ಸಂಪೂರ್ಣ ನಿರ್ಲಕ್ಷಿಸಿರುವುದು ಸ್ಪಷ್ಟವಾಗಿದೆ. ಹೀಗಾಗಿ ಜನರ ಸಮಸ್ಯೆಗಳನ್ನು ಪರಿಹರಿಸುವ ಜವಾಬ್ದಾರಿ ನನ್ನ ಮೇಲಿದೆ. ಇನ್ಮುಂದೆ ಈ ರೀತಿಯ ಜನಸಂಪರ್ಕ ಸಭೆಗಳನ್ನು ಹೆಚ್ಚಾಗಿ ಆಯೋಜಿಸಲಾಗುವುದು ಎಂದು ಹೇಳಿದರು.**

-ಯದುವೀರ್ ಸಂಸದ

ನಂಟು ಬೆಳೆಯಲು ಹಾಗೂ ಅವರ ಸಮಸ್ಯೆಗಳನ್ನು ಖುದ್ದಾಗಿ ತಿಳಿಯಲು ಅನುಕೂಲ ಆಗುತ್ತದೆ. ಪ್ರತಿ ಪಂಚಾಯಿತಿಗೆ ಭೇಟಿ ನೀಡಿ ಜನರ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವುದಲ್ಲದೆ ಅವುಗಳನ್ನು ತ್ವರಿತವಾಗಿ ಪರಿಹರಿಸಲು ಆದ್ಯತೆ ನೀಡುತ್ತೇವೆ. ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಅಧಿಕಾರಿಗಳಿಗೆ ತಿಳಿಸಿ ಪರಿಹಾರ ದೊರಕಿಸಿಕೊಟ್ಟಿದ್ದೇವೆ ಎಂದರು. ನಾಗರಿಕರು ಅಧಿಕಾರಿಗಳಿಗೆ ಅಹವಾಲು ಸಲ್ಲಿಸಿದಾಗಲೂ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅಗತ್ಯವಿದ್ದರೆ ನಾನೇ ಇಲಾಖೆ ಅಥವಾ ಕಚೇರಿಗಳಿಗೆ ಭೇಟಿ ನೀಡಿ ಅರ್ಜಿಗಳು ಏನಾಗಿವೆ ಎಂಬುದನ್ನು ಪರಿಶೀಲಿಸುತ್ತೇನೆ' ಎಂದು ತಿಳಿಸಿದರು. 'ಪಕ್ಷದ ಚಾಮುಂಡೇಶ್ವರಿ ಮಂಡಲದ ಅಧ್ಯಕ್ಷ ಪೈಲ್ವಾನ್ ಟಿ.ರವಿ ಲಕ್ಷ್ಮೀಪುರ ಅಧ್ಯಕ್ಷತೆ ವಹಿಸಿದ್ದರು. ಗ್ರಾಮಾಂತರ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ಸಿ.ಕೆ ರುದ್ರಮೂರ್ತಿ, ಕಾರ್ಯದರ್ಶಿ ಮರಿಸ್ವಾಮಿನಾಯಕ, ಮುಖಂಡರಾದ ಎಸ್. ಆರ್.ಗೋಪಾಲ್‌ರಾವ್, ಜಗದೀಶ್ ಗೌಡ, ಹೇಮಂತ್‌ಕುಮಾರ್ ಗೌಡ, ರಾಜಕುಮಾರ್, ನಂಜುಂಡಸ್ವಾಮಿ, ಸುನೀಲ್, ಶರತ್, ವೀರಭದ್ರಸ್ವಾಮಿ, ಎನ್.ಎಸ್. ರಮೇಶ್, ದಿನೇಶ್, ಭಾಸ್ಕರ್, ಕೃಷ್ಣಕುಮಾರ್, ನಟರಾಜು, ಯಜಮಾನ್ ಮಹದೇವಪ್ಪ, ಶಂಕರ್ ಹಾಜರಿದ್ದರು.

### ಕೊನೆಯವರೆಗೂ ತಲುಪಬೇಕು

**ಬಿಜೆಪಿ ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಲ್.ನಾಗೇಂದ್ರ, ಸರ್ಕಾರದ ಯೋಜನೆಗಳು ಕೊನೆಯ ವ್ಯಕ್ತಿಯವರೆಗೂ ತಲುಪಬೇಕೆಂಬುದೇ ಪಕ್ಷದ ಗುರಿಯಾಗಿದೆ. ಜನರ ಸಮಸ್ಯೆಗಳನ್ನು ಕೇಳಿ, ಅವುಗಳಿಗೆ ಪರಿಹಾರ ಒದಗಿಸುವಲ್ಲಿ ಪಕ್ಷ ಮತ್ತು ಕೇಂದ್ರ ಸರ್ಕಾರ ಒಟ್ಟಾಗಿ ಕಾರ್ಯನಿರ್ವಹಿಸುತ್ತಿವೆ. ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲೇ ಪರಿಹಾರ ಕಂಡುಕೊಳ್ಳುವ ಅಗತ್ಯವಿದೆ ಎಂದು ಹೇಳಿದರು. ಜನಸಂಪರ್ಕ ಸಭೆಗಳು ಜನರ ಬದುಕಿನ ವಾಸ್ತವ ಚಿತ್ರಣವನ್ನು ಅರಿಯುವ ವೇದಿಕೆಗಳಾಗಬೇಕು ಎಂದರು.**

ಅಂತರಾಳದಿಂದ... EDITORIAL

# ಅಕ್ರಮ ಬಂಧನದಲ್ಲಿ ನ್ಯಾಯ ದೇವತೆ?

ಉಮರ್ ಖಾಲಿದ್ ಜಾಮೀನು ನಿರಾಕರಣೆಯಿಂದ ನಿಜಕ್ಕೂ ಅನ್ಯಾಯವಾಗಿರುವುದು ನಮ್ಮ ನ್ಯಾಯ ವ್ಯವಸ್ಥೆಗೆ. ಎಲ್ಲೆಡೆ ನ್ಯಾಯದ ಬಾಗಿಲು ಮುಚ್ಚಿದಾಗ ಸುಪ್ರೀಂಕೋರ್ಟ್‌ಗೆ ಹೋಗಿಯಾದರೂ ನ್ಯಾಯವನ್ನು ಪಡೆಯುತ್ತೇನೆ ಎಂಬ ಶ್ರೀಸಾಮಾನ್ಯನೊಬ್ಬನ ಆತ್ಮವಿಶ್ವಾಸ, ನಂಬಿಕೆಯ ಬೆನ್ನು ಮೂಳೆಯನ್ನು ಉಮರ್ ಖಾಲಿದ್‌ಗೆ ಸಂಬಂಧಿಸಿ ಸುಪ್ರೀಂಕೋರ್ಟ್ ನೀಡಿದ ಆದೇಶ ಮುರಿದು ಹಾಕಿದೆ. ಒಂದೆಡೆ ಈ ದೇಶದಲ್ಲಿ ವಿಚಾರಣೆಯ ಹೆಸರಿನಲ್ಲಿ ಕೊಳೆಯುತ್ತಿರುವ ನೂರಾರು ವಿಚಾರಣಾಧೀನ ಕೈದಿಗಳ ಬಗ್ಗೆ ಕಳವಳ ವ್ಯಕ್ತಪಡಿಸುವ ಸುಪ್ರೀಂಕೋರ್ಟ್, ಉಮರ್ ಖಾಲಿದ್ ವಿಷಯದಲ್ಲಿ ಮಾತ್ರ ದೀರ್ಘ ಕಾಲದ ಜೈಲು ವಾಸವು ಜಾಮೀನು ಪಡೆಯಲು ಸಂಪೂರ್ಣ ಅರ್ಹತೆಯಾಗುವುದಿಲ್ಲ ಎಂದು ಷರಾ ಬರೆದಿದೆ. 2020ರ ದಿಲ್ಲಿ ಗಲಭೆಗೆ ಸಂಬಂಧಿಸಿದಂತೆ ಜೈಲಿನಲ್ಲಿರುವ ವಿದ್ಯಾರ್ಥಿ ಮುಖಂಡರಾದ ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ಅವರಿಗೆ ಜಾಮೀನು ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದ್ದು ಆದರೆ ಅವರ ಸಹವರ್ತಿಗಳಾಗಿರುವ ಇತರ ಐದು ಮಂದಿಗೆ ಶರತ್ತುಗಳ ಜೊತೆಗೆ ಜಾಮೀನು ಮಂಜೂರು ಮಾಡಿದೆ. ಜಾಮೀನಿಗೆ ವಿಧಿಸಿರುವ ಕಠಿಣ ನಿಯಮಗಳು ಅವರ ಪಾಲಿಗೆ ಹೊರ ಜಗತ್ತನ್ನೂ ಜೈಲಾಗಿಯೇ ಪರಿವರ್ತಿಸಿದೆ. ಸಾಮಾಜಿಕ ಅಥವಾ ರಾಜಕೀಯ ಚಟುವಟಿಕೆಗಳಿಗೆ ಸಂಬಂಧಿಸಿದ ಅವರ ಎಲ್ಲಾ ಹಕ್ಕುಗಳಿಗೆ ಕತ್ತರಿ ಹಾಕಲಾಗಿದೆ ಮಾತ್ರವಲ್ಲ ಅವರ ಪ್ರತಿ ಹೆಜ್ಜೆಗಳ ಮೇಲೂ ಕಣ್ಣಿಡುವುದಕ್ಕೆ ನ್ಯಾಯಾಲಯ ಸೂಚನೆ ನೀಡಿದೆ.ದಿಲ್ಲಿ ಗಲಭೆಗೆ ಪೂರ್ವದಲ್ಲಿ ಬಿಜೆಪಿ ನಾಯಕನೊಬ್ಬ 'ಗೋಲಿ ಮಾರೋ ಸಾಲೋಂಕೋ' ಎಂದು ಬಹಿರಂಗ ಕರೆ ನೀಡಿರುವುದು ದಿಲ್ಲಿ ಪೊಲೀಸರಿಗೆ ಪ್ರಚೋದನೆ ಎಂದು ಅನ್ನಿಸಿಲ್ಲ. ಆದರೆ ಯಾವುದೇ ಹಿಂಸಾತ್ಮಕ ಅಥವಾ ಪ್ರಚೋದನಾತ್ಮಕ ಹೇಳಿಕೆಗಳನ್ನು ತನ್ನ ಭಾಷಣದಲ್ಲಿ ನೀಡಿರದೇ ಇದ್ದರೂ ಉಮರ್ ಖಾಲಿದ್‌ರ ಮಾತುಗಳಲ್ಲಿ ಭಯೋತ್ಪಾದನೆಯ ವಿಧಾನಗಳು ಸುಪ್ರೀಂಕೋರ್ಟ್‌ಗೆ ಗೋಚರಿಸಿರುವುದು ಹೇಗೆ ಎಂದು ಹಿರಿಯ ನ್ಯಾಯವಾದಿಗಳು ತಲೆಕೆಡಿಸಿಕೊಳ್ಳುತ್ತಿದ್ದಾರೆ. ಶರ್ಜೀಲ್ ಇಮಾಮ್ ರಸ್ತೆ ತಡೆ, ಚಕ್ಕಜಾಂಗೆ ಕರೆ ನೀಡಿರುವುದನ್ನು ಭಯೋತ್ಪಾದನಾ ಕೃತ್ಯವಾಗಿ ಸುಪ್ರೀಂಕೋರ್ಟ್ ಭಾವಿಸುತ್ತದೆ.

> **ಯಾವುದೇ ಭಯೋತ್ಪಾದನಾ ಕೃತ್ಯಗಳಲ್ಲಿ ನೇರವಾಗಿ ಭಾಗವಹಿಸಿದ ಆರೋಪ ಉಮರ್ ಖಾಲಿದ್ ಮೇಲಾಗಲಿ, ಶರ್ಜೀಲ್ ಇಮಾಮ್ ಮೇಲಾಗಲಿ ಇಲ್ಲ. ಉಮರ್ ಖಾಲಿದ್ ಮೇಲಿರುವ ಆರೋಪಗಳ ವಿಚಾರಣೆಯೇ ಕಳೆದ 5 ವರ್ಷಗಳಲ್ಲಿ ನಡೆದಿಲ್ಲ. ಹೀಗಿರುವಾಗ, ಯುಎಪಿಎ ಕಾಯ್ದೆಯನ್ನು ಮುಂದಿಟ್ಟುಕೊಂಡು ಐದು ವರ್ಷಗಳ ದೀರ್ಘ ಸೆರೆಮನೆವಾಸದ ಬಳಿಕವೂ ಈ ಜಾಮೀನು ನಿರಾಕರಣೆ ಎಷ್ಟರಮಟ್ಟಿಗೆ ನ್ಯಾಯಯುತವಾಗಿದೆ ಎಂದು ಕಾನೂನು ತಜ್ಞರು ಕಳವಳ ವ್ಯಕ್ತಪಡಿಸುತ್ತಿದ್ದಾರೆ.**

ಆದರೆ ಈ ದೇಶದ ಹಲವು ಹೋರಾಟಗಳಲ್ಲಿ ರಸ್ತೆ ತಡೆಯನ್ನು ಒಂದು ಅಸ್ತವಾಗಿ ಬಳಸುತ್ತಾ ಬಂದಿದ್ದಾರೆ. ಈ ದೇಶದ ರೈತ ಹೋರಾಟಗಳು ರಸ್ತೆ ತಡೆಗಳ ಮೂಲಕ ಹಲವು ಬಾರಿ ನಡೆದಿವೆ. ರಸ್ತೆ ತಡೆಗೆ ಕರೆ ನೀಡಿರುವುದು ಭಯೋತ್ಪಾದನಾ ಚಟುವಟಿಕೆಯಾಗಿ ಸುಪ್ರೀಂಕೋರ್ಟ್‌ಗೆ ಕಂಡ ಬಗೆಯಿಂದಾಗಿ ಮುಂದಿನ ದಿನಗಳಲ್ಲಿ ಯಾವುದೇ ರಸ್ತೆ ತಡೆಗಳನ್ನು ಭಯೋತ್ಪಾದನಾ ಕೃತ್ಯಗಳಾಗಿ ನ್ಯಾಯಾಲಯ ಪರಿಭಾವಿಸುವ ಸಾಧ್ಯತೆಗಳಿವೆಯೇ ಎಂದು ಆತಂಕಪಡುವಂತಾಗಿದೆ. ಜಾಮೀನು ನಿರಾಕರಣೆಗೆ ಸುಪ್ರೀಂಕೋರ್ಟ್ ಮಂಡಿಸಿರುವ ತರ್ಕವನ್ನು ಮುಂದಿನ ದಿನಗಳಲ್ಲಿ ಸರಕಾರದ ಜನವಿರೋಧಿ ನೀತಿಗಳ ವಿರುದ್ಧದ ಎಲ್ಲಾ ಪ್ರತಿಭಟನೆಗಳ ವಿರುದ್ಧ ಪ್ರತಿಭಟನಾಕಾರರ ವಿರುದ್ಧ ಅನ್ವಯಿಸಬಹುದಾಗಿದೆ. ಸುಪ್ರೀಂಕೋರ್ಟ್ ತೀರ್ಪಿನಲ್ಲಿ ಹತ್ತು ಹಲವು ವಿರೋಧಗಳಿರುವುದನ್ನು ಕಾನೂನು ತಜ್ಞರು ಎತ್ತಿ ತೋರಿಸಿದ್ದಾರೆ. ವಿಚಾರಣೆ ಯಾಕೆ ವಿಳಂಬವಾಗುತ್ತಿದೆ ಎನ್ನುವುದನ್ನು ಪರಿಗಣಿಸಲು ಸುಪ್ರೀಂಕೋರ್ಟ್ ಸಿದ್ಧವಿರಲಿಲ್ಲ. ಒಂದೆಡೆ ದೀರ್ಘಕಾಲ ವಶದಲ್ಲಿಟ್ಟಿರುವುದನ್ನು ತಪ್ಪು ಎಂದು ಹೇಳುತ್ತಲೇ, ಅದರ ಆಧಾರದಲ್ಲಿ ಜಾಮೀನು ನೀಡಲು ಸಾಧ್ಯವಿಲ್ಲ ಎಂದೂ ಹೇಳುತ್ತದೆ. ವಿಚಾರಣೆಯೇ ನಡೆಯದ ಪ್ರಕರಣದಲ್ಲಿ ಖಾಲಿರನ್ನು ಯಾವ ಆಧಾರದಲ್ಲಿ ಪ್ರಮುಖ ಆರೋಪಿಯೆಂದು ಭಾವಿಸುತ್ತದೆ ಎನ್ನುವುದೂ ಸ್ಪಷ್ಟವಿಲ್ಲ. ಒಂದು ರೀತಿಯಲ್ಲಿ ವಿಚಾರಣೆ ನಡೆಯುವ ಮುನ್ನವೇ ಉಮರ್ ಖಾಲಿದ್‌ರನ್ನು ನ್ಯಾಯಾಲಯ ಅಪರಾಧಿಯೆಂದು ಘೋಷಿಸಿದೆ. ರಹಸ್ಯ ಸಾಕ್ಷ್ಯದ ಪರಿಶೀಲನೆ ಒಂದು ವರ್ಷದ ಒಳಗೆ ನಡೆಯದೇ ಇದ್ದಲ್ಲಿ ಮತ್ತೆ ಜಾಮೀನು ಅರ್ಜಿ ಹಾಕಬಹುದು ಇದು ಸುಪ್ರೀಂ ಕೋರ್ಟ್ ಉಮರ್ ಖಾಲಿದ್‌ಗೆ ತೋರಿಸಿದ ಬಹುದೊಡ್ಡ ಕೃಪೆ.ಮೋದಿ ಸರಕಾರ ವರ್ಷಗಳ ಹಿಂದೆ ನ್ಯಾಯ ದೇವತೆಯ ಕಣ್ಣ ಪಟ್ಟಿಯನ್ನು ಬಿಚ್ಚಿತು. ತ್ವರಿತ ನ್ಯಾಯದ ಸಂಕೇತವಾಗಿದ್ದ ಖಡ್ಗವನ್ನು ಕಿತ್ತುಕೊಂಡು ನ್ಯಾಯ ದೇವತೆಯ ಕೈಗೆ ಪುಸ್ತಕವನ್ನು ನೀಡಿತು. ಇದೀಗ ನ್ಯಾಯ ದೇವತೆಯ ಕೈಯಲ್ಲಿರುವ ಆ ಪುಸ್ತಕ ನಿಜಕ್ಕೂ ಸಂವಿಧಾನದ ಪುಸ್ತಕ ಹೌದೇ ಎಂದು ಜನಸಾಮಾನ್ಯರು ಅನುಮಾನಿಸುವಂತಾಗಿದೆ. ಯಾವುದೇ ಜಾತಿ, ಧರ್ಮ, ವರ್ಗಗಳನ್ನು ನೋಡದೆ ನ್ಯಾಯ ನೀಡಬೇಕು ಎನ್ನುವ ಕಾರಣಕ್ಕಾಗಿ ಸಾಂಕೇತಿಕವಾಗಿ ನ್ಯಾಯದೇವತೆಯ ಕಣ್ಣಿಗೆ ಪಟ್ಟಿಕಟ್ಟಲಾಗಿತ್ತು. ಇದೀಗ ನ್ಯಾಯದೇವತೆಗೆ ತನ್ನೆದುರು ನಿಂತಿರುವ ಉಮರ್ ಖಾಲಿದ್‌ರ ಧರ್ಮ ಸ್ಪಷ್ಟವಾಗಿ ಕಾಣುತ್ತಿರುವ ಕಾರಣಕ್ಕೇ ನ್ಯಾಯ ವಿಳಂಬವಾಗುತ್ತಿದೆಯೇ ಎಂದು ಜನರು ಅನುಮಾನ ಪಡುವಂತಾಗಿದೆ. ಒಂದು ರೀತಿಯಲ್ಲಿ ಕಳೆದ ಐದು ವರ್ಷಗಳಿಂದ ಯುಎಪಿಎ ಕಾಯ್ದೆಯ ಹೆಸರಿನಲ್ಲಿ ಉವರ್ ಖಾಲಿದ್ ಮೂಲಕ ನಮ್ಮ ನ್ಯಾಯವ್ಯವಸ್ಥೆಯೇ ಅಕ್ರಮ ಬಂಧನದಲ್ಲಿದೆ ಎಂದು ಕಾನೂನು ತಜ್ಞರು ವ್ಯಾಖ್ಯಾನಿಸುತ್ತಿದ್ದಾರೆ. ಈ ದೇಶದಲ್ಲಿ ಜಾಮೀನು ಮಂಜೂರಾಗಿದ್ದರೂ 5,000ಕ್ಕೂ ಅಧಿಕ ವಿಚಾರಣಾಧೀನ ಕೈದಿಗಳು ಶರತ್ತುಗಳನ್ನು ಪೂರೈಸಲಾಗದೆ ಜೈಲುಗಳಲ್ಲೇ ಕೊಳೆಯುತ್ತಿದ್ದಾರೆ ಎಂದು ಸರಕಾರಿ ಅಂಕಿಅಂಶಗಳು ಹೇಳುತ್ತವೆ. ಲಕ್ಷಾಂತರ ವಿಚಾರಣಾಧೀನ ಕೈದಿಗಳು ಅಪರಾಧ ಸಾಬೀತಾಗದಿದ್ದರೂ ಪರೋಕ್ಷ ಜೈಲು ಶಿಕ್ಷೆ ಅನುಭವಿಸುತ್ತಿದ್ದಾರೆ. ಈ ಕುರಿತಂತೆ ಸುಪ್ರೀಂಕೋರ್ಟ್ ಹಲವು ಬಾರಿ ತನ್ನ ಆತಂಕವನ್ನು ವ್ಯಕ್ತಪಡಿಸಿದೆ.



# ರಾಮಾಯಣ

ವಾಲಿಯನ್ನು ವಧಿಸುತ್ತೇನೆಂದು ಶ್ರೀ ರಾಮನ ಪ್ರತಿಜ್ಞೆ

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಹಿಮವಂತನು ಎಲೈ ದುಂದುಭಿಯೆ, ದೇವೇಂದ್ರನ ಮಗನಾದ ವಾಲಿಯು ಮಹಾ ಸಮರ್ಥನು. ಆತನು ಕಿಷ್ಕಂಧಾಪಟ್ಟಣದಲ್ಲಿದ್ದಾನೆ. ಆತನು ನಿನ್ನೊಡನೆ ದ್ವಂದ್ವಯುದ್ಧವನ್ನು ಮಾಡಲು ಸಮರ್ಥನು, ಪೂರ್ವದಲ್ಲಿ ದೇವೇಂದ್ರನು ನಮುಚಿ ಎಂಬ ರಾಕ್ಷಸನಿಗೆ ಯುದ್ಧವನ್ನು ಕೊಟ್ಟಂತೆ ನಿನಗೆ ವಾಲಿಯು ಯುದ್ಧವನ್ನು ಕೊಡುವನು. ನೀನು ಯುದ್ಧವನ್ನು ಮಾಡಬೇಕಾದ ಪಕ್ಷದಲ್ಲಿ ಆತನ ಸಮೀಪಕ್ಕೆ ಹೋಗು. ವಾಲಿಯು ಯುದ್ಧರಂಗದಲ್ಲಿ ಮಹಾನಿಪುಣನು ಎಂದು ಹೇಳಿದನು.

ಆ ಮಾತನ್ನು ಕೇಳಿ ದುಂದುಭಿಯು ಕೋಪಾಕ್ರಾಂತನಾಗಿ ಕಿಕ್ಕಿಂಧಾಪಟ್ಟಣಕ್ಕೆ ಬಂದು ಬಲವಾದ ಕೊಂಬುಗಳುಳ್ಳ ಕೋಣದ ಸ್ವರೂಪವನ್ನು ತಾಳಿ, ವರ್ಷಾಕಾಲದಲ್ಲಿ ತೋರುವ ನೀರುಂಡ ಮೇಘದಂತೆ ನುಗ್ಗಿ ಬಂದನು. ತನ್ನ ಬಲಗರ್ವದಿಂದ ಕಿಂಧಾಪಟ್ಟಣದ ಬಾಗಿಲನ್ನು ಅಡ್ಡಗಟ್ಟಿ ಆ ಪಟ್ಟಣದಲ್ಲಿದ್ದ ಸಮಸ್ತ ಪ್ರಾಣಿಗಳಿಗೂ ಭಯವಾಗುವಂತೆ ಬೊಬ್ಬಿಟ್ಟು ಕೂಗಿ ಸಮೀಪದಲ್ಲಿದ್ದ ಮರಗಳನ್ನು ಕಿತ್ತಾಡುತ್ತ ತನ್ನ ತೋಳುಗಳಿಂದ ಭೂಮಿಯನ್ನು ಒಡೆಯುತ್ತ ಮದಸೊಕ್ಕಿದ ಆನೆಯಂತೆ ತನ್ನ ಕೊಂಬುಗಳಿಂದ ಪಟ್ಟಣದ ಬಾಗಿಲನ್ನು ತಿವಿಯುತ್ತ ಕೋಲಾಹಲವನ್ನು ಮಾಡುತ್ತಿದ್ದನು. ಅದನ್ನು ಕೇಳಿ ತನ್ನ ಅಂತಃಪುರದಲ್ಲಿದ್ದ ವಾಲಿಯು ನಕ್ಷತ್ರಗಳೊಡಗೂಡಿದ ಚಂದ್ರನು ಹೊರಡುವಂತೆ ತನ್ನ ಅಂತಃಪುರದಲ್ಲಿದ್ದ ಸ್ತ್ರೀಯರಿಂದ ಸಮೇತನಾಗಿ ದುಂದುಭಿಯನ್ನು ಅಟ್ಟಿ ಬಂದು ಆತನನ್ನು ಕುರಿತು ಮೃದುನುಡಿಯಿಂದ ಎಲೈ ದುಂದುಬಿಯೆ, ನೀನೇನು ಕಾರಣವಾಗಿ ಕಿಂಧಾಪಟ್ಟಣದ ಬಾಗಿಲನ್ನಡ್ಡಗಟ್ಟಿ ಇಲ್ಲಿಂದ ಬೊಬ್ಬಿಟ್ಟು ಕೂಗುತ್ತಿದ್ದೀಯೆ ನನ್ನ ಪರಾಕ್ರಮವನ್ನು ನೀನು ಬಲ್ಲೆಯಷ್ಟೆ! ಇಲ್ಲಿರಬೇಡ. ಇಲ್ಲಿಂದ ಹಿಂದಿರುಗಿ ನಿನ್ನ ಪ್ರಾಣಗಳನ್ನು ಉಳಿಸಿಕೊ ಎಂದು ಹೇಳಿದನು.

ದುಂದುಭಿಯು ಅತ್ಯಂತ ಕೋಪಯುಕ್ತನಾಗಿ ಎಲೈ ವಾಲಿಯೆ, ನೀನು ನಿನ್ನ ಸ್ತ್ರೀಯರ ಸಮೀಪದಲ್ಲಿ ಪೌರುಷವನ್ನು ಹೇಳಿಕೊಳ್ಳಬೇಡ. ಈಗ ನನ್ನೊಡನೆ ಯುದ್ಧವನ್ನು ಮಾಡಿದರೆ ನನ್ನ ಸಾಮರ್ಥ್ಯವನ್ನು ಕಾಣುವೆ: ಈಗ ನನ್ನ ಕೋಪವನ್ನು ತಡೆದುಕೊಂಡಿರುತ್ತೇನೆ. ನೀನು ಈ ರಾತ್ರಿಯಲ್ಲಿ ನಿನ್ನ ಸತಿಯೊಡನೆ ವಿಹರಿಸುತ್ತ ಸುಖವಾಗಿರು. ನಿನ್ನ ಪರಿವಾರಕ್ಕೆ ಉಚಿತವಾದ ಉಡುಗೊರೆಗಳನ್ನು ಕೊಟ್ಟು ಸಂತವಿಟ್ಟು ನಿನಗೆ ಸಹಾಯವಾಗಿರುವ ಬಂಧುಗಳನ್ನು ಸನ್ಮಾನಿಸಿ ಪಟ್ಟಣಗಳಲ್ಲಿರುವ ಪ್ರಜೆಗಳನ್ನು ಸಂತವಿಡು. ನೀನು ಸ್ತ್ರೀಲೋಲನಾಗಿದ್ದೀಯ, ರಾಜನೀತಿಯಲ್ಲಿ ಸ್ತ್ರೀಶೋಲನಾಗಿ ಮದಿಸಿರುವವನೊಡನೆ ಯುದ್ಧವು ಸಲ್ಲದೆಂದು ಹೇಳಿದೆ. ಕಾಮದಿಂದ ಮದಿಸಿದವನೊಡನೆಯೂ ಉನ್ಮಾದದಿಂದ ಮೈಮರೆತವನೊಡನೆಯೂ ಮಲಗಿದ್ದವನೊಡನೆಯೂ ಆಯುಧವಿಲ್ಲದವನೊಡನೆಯೂ ಯುದ್ಧವನ್ನು ಮಾಡಿ ಕೊಲ್ಲುವವನು ಭ್ರೂಣಹತ್ಯೆ ಪಾಪಫಲ ನನ್ನೆದುವನು. ಆದಕಾರಣ ಕಾಮಮೋಹಿತನಾಗಿರುವ ನೀನು ತಿರುಗಿ ಹೋಗಿ ನಿನ್ನ ಮನಸ್ಸು ಬಂದಂತೆ ಭೋಗಗಳನ್ನನುಭವಿಸಿ ನಾಳೆಯ ಪ್ರಾತಃಕಾಲದಲ್ಲಿ ಬಾ. ಆಗ ನಿನಗೆ ತಕ್ಕ ಬುದ್ಧಿಯನ್ನು ಕಲಿಸುವೆನು ಎಂದು ಹೇಳಿದನು. ಆ ಮಾತನ್ನು ಕೇಳಿ ವಾಲಿಯು ತಾರಾದೇವಿಯೇ ಮೊದಲಾದ ತನ್ನ ಸ್ತ್ರೀಯರನ್ನು ಮನೆಗೆ ಕಳುಹಿಸಿ ಎಲೈ ದುಂದುಭಿಯೆ, ನನ್ನನ್ನು ನೀನು ಮೋಹದಿಂದ ಮದಿಸಿದವನೆಂದೆಣಿಸಬೇಡ

**ಮುಂದುವರಿಯುವುದು...**




☛ ವಿಶ್ವಾಸ್.ಡಿ.ಗೌಡ

# ಶಬರಿಮಲೆ ಸ್ವಾಮಿ ಅಯ್ಯಪ್ಪ: ಭಕ್ತಿ, ತ್ಯಾಗ,ಮಾನವೀಯತೆಯ ದೀಪಸ್ತಂಭ

ಭಾರತದ ಧಾರ್ಮಿಕ ಪರಂಪರೆಯಲ್ಲಿ ಶಬರಿಮಲೆ ಸ್ವಾಮಿ ಅಯ್ಯಪ್ಪನಿಗೆ ವಿಶಿಷ್ಟ ಸ್ಥಾನವಿದೆ. ಕೇರಳ ರಾಜ್ಯದಲ್ಲಿರುವ ಶಬರಿಮಲೆ ಪರ್ವತಮಾಲೆಯಲ್ಲಿ ನೆಲೆಸಿರುವ ಈ ದೇವಾಲಯವು ಕೇವಲ ಒಂದು ಪೂಜಾಸ್ಥಳವಲ್ಲ; ಅದು ಭಕ್ತಿ, ಶಿಸ್ತು, ಸಮಾನತೆ ಮತ್ತು ಆತ್ಮಶುದ್ಧಿಯ ಸಂಕೇತವಾಗಿದೆ. ಪ್ರತಿವರ್ಷ ಲಕ್ಷಾಂತರ ಭಕ್ತರು ಜಾತಿ ಮತ ಭಾಷೆಯ ಭೇದವಿಲ್ಲದೆ ''ಸ್ವಾಮಿ ಶರಣಂ ಅಯ್ಯಪ್ಪ'' ಎಂಬ ಘೋಷಣೆಯೊಂದಿಗೆ ಈ ಪವಿತ್ರ ಕ್ಷೇತ್ರಕ್ಕೆ ಪಾದಯಾತ್ರೆ ಕೈಗೊಳ್ಳುತ್ತಾರೆ.

ಪುರಾಣಗಳ ಪ್ರಕಾರ ಸ್ವಾಮಿ ಅಯ್ಯಪ್ಪನು ಶಿವ ಮತ್ತು ವಿಷ್ಣುವಿನ ಮೋಹಿನೀ ಅವತಾರದ ಸಂಯೋಗದಿಂದ ಜನಿಸಿದವನು. ಮಹಿಷಾಸುರನ ವಧೆಯ ಮೂಲಕ ಧರ್ಮವನ್ನು ರಕ್ಷಿಸಿದ ಅಯ್ಯಪ್ಪನು ತ್ಯಾಗ, ಶೌರ್ಯ ಮತ್ತು ಧರ್ಮನಿಷ್ಠೆಯ ಪ್ರತೀಕ. ಬಾಲ್ಯದಲ್ಲಿಯೇ ಯೋಗಸಾಧನೆ, ತಪಸ್ಸು ಮತ್ತು ಕರ್ತವ್ಯನಿಷ್ಠೆಯಿಂದ ಬೆಳೆದ ಅಯ್ಯಪ್ಪನು ರಾಜಕೀಯ ಸೌಖ್ಯವನ್ನೂ ತ್ಯಜಿಸಿ ಲೋಕಕಲ್ಯಾಣಕ್ಕಾಗಿ ತಪಸ್ಸಿಗೆ ನಿರತರಾದನು ಎಂಬ ನಂಬಿಕೆ ಭಕ್ತರಲ್ಲಿ ಆಳವಾಗಿ ನೆಲೆಯೂರಿದೆ. ಶಬರಿಮಲೆ ಯಾತ್ರೆಯ ವೈಶಿಷ್ಟ್ಯವೇ ''ವ್ರತಾಚರಣೆ''. ಕನಿಷ್ಠ 41 ದಿನಗಳ ವ್ರತದಲ್ಲಿ ಭಕ್ತರು ಶುದ್ಧ ಆಹಾರ, ಶಿಸ್ತುಬದ್ಧ ಜೀವನ, ಬ್ರಹ್ಮಚರ್ಯ,



ಅಹಿಂಸೆ ಮತ್ತು ಸತ್ಯಾಚರಣೆಯನ್ನು ಪಾಲಿಸುತ್ತಾರೆ. ಈ ಅವಧಿಯಲ್ಲಿ ಕಪ್ಪು ಅಥವಾ ಕೇಸರಿ ವಸ್ತ್ರಧಾರಣೆ, ಮಾಲಾಧಾರಣೆ, ದೈನಂದಿನ ಪೂಜೆ, ಸೇವಾಭಾವ ಮತ್ತು ಸಹನಶೀಲತೆಯನ್ನು ಅಭ್ಯಾಸ ಮಾಡುತ್ತಾರೆ. **ಇದು ಕೇವಲ ದೇಹಶುದ್ಧಿಯಲ್ಲ;** ಮನಸ್ಸಿನ ಅಹಂಕಾರವನ್ನು ತೊಳೆದು ಹಾಕುವ ಆತ್ಮಸಾಧನೆಯ ಮಾರ್ಗವಾಗಿದೆ.

ಶಬರಿಮಲೆಯ ಮತ್ತೊಂದು ಮಹತ್ವದ ಅಂಶ ಸಮಾನತೆ. ಇಲ್ಲಿ ಎಲ್ಲರೂ ಸ್ವಾಮಿ ಎಂಬ ಭಾವನೆ ಜೀವಂತ. ಶ್ರೀಮಂತ ಬಡವ, ವಿದ್ಯಾವಂತ ಅಶಿಕ್ಷಿತ ಎಂಬ ಬೇಧವಿಲ್ಲದೆ ಎಲ್ಲರೂ ಸಮಾನವಾಗಿ ನಡೆದುಕೊಳ್ಳುತ್ತಾರೆ. ಪಾದಯಾತ್ರೆಯಲ್ಲಿ ಪರಸ್ಪರ ಸಹಾಯ, ಅನ್ನದಾನ, ನೀರಿನ ಸೇವೆ, ಗಾಯಾಳುಗಳಿಗೆ ಸಹಕಾರ ಇವೆಲ್ಲವೂ ಮಾನವೀಯತೆಯ ಪಾಠಗಳನ್ನು ಕಲಿಸುತ್ತವೆ. ಈ ಯಾತ್ರೆ ಸಮಾಜಕ್ಕೆ ಏಕತೆಯ ಸಂದೇಶವನ್ನು ನೀಡುತ್ತದೆ. ಮಕರ ಸಂಕ್ರಾಂತಿಯಂದು ಕಾಣುವ ಮಕರ ಜ್ಯೋತಿ ಶಬರಿಮಲೆಯ ಭಕ್ತಿಗೆ ಉಚ್ಚಾಯ ತರುವ ಕ್ಷಣ. ಲಕ್ಷಾಂತರ ಭಕ್ತರು ಕಣ್ಣಲ್ಲಿ ನೀರು, ಹೃದಯದಲ್ಲಿ ನಂಬಿಕೆ ಹೊತ್ತು ಆ ದಿವ್ಯ ಪ್ರಕಾಶವನ್ನು ದರ್ಶನ ಮಾಡುತ್ತಾರೆ. ಈ ಅನುಭವ ಅನೇಕ ಭಕ್ತರಿಗೆ ಜೀವನದಲ್ಲಿ ಶ್ರದ್ಧೆ ಧೈರ್ಯ ಮತ್ತು ನೈತಿಕ ಬಲವನ್ನು ತುಂಬುತ್ತದೆ ಎಂಬ ನಂಬಿಕೆ ಇದೆ.

ಸ್ವಾಮಿ ಅಯ್ಯಪ್ಪನ ತತ್ವಗಳಲ್ಲಿ ಶಿಸ್ತು, ತ್ಯಾಗ, ಸೇವೆ ಮತ್ತು ಧರ್ಮಪಾಲನೆ ಪ್ರಮುಖ. ಇಂದಿನ ಅಶಾಂತ ಜೀವನದಲ್ಲಿ ಶಬರಿಮಲೆಯ ಸಂದೇಶಗಳು ಅತ್ಯಂತ ಪ್ರಸ್ತುತ. ಸ್ವಾರ್ಥವನ್ನು ಮರೆತು ಸಮಾಜಕ್ಕಾಗಿ ಬದುಕುವ ಮನೋಭಾವ, ಪ್ರಕೃತಿಯೊಂದಿಗೆ ಸಹಜವಾಗಿ ಹೊಂದಿಕೊಂಡ ಜೀವನಶೈಲಿ, ಮತ್ತು ಆಂತರಿಕ ಶಾಂತಿಯನ್ನು ಹುಡುಕುವ ಪ್ರಯತ್ನ ಇವೆಲ್ಲವೂ ಅಯ್ಯಪ್ಪನ ಮಾರ್ಗದರ್ಶನದಲ್ಲಿ ಅಡಕವಾಗಿವೆ.

ಸಾರಾಂಶವಾಗಿ, ಶಬರಿಮಲೆ ಸ್ವಾಮಿ ಅಯ್ಯಪ್ಪನ ಆರಾಧನೆ ಕೇವಲ **ಧಾರ್ಮಿಕ ಆಚರಣೆ ಅಲ್ಲ;** ಅದು ಮಾನವ ಜೀವನಕ್ಕೆ ದಾರಿ ತೋರಿಸುವ ತತ್ವಶಾಸ್ತ್ರ. ಭಕ್ತಿ ಮತ್ತು ಶಿಸ್ತು, ಸಮಾನತೆ ಮತ್ತು ಸೇವಾಭಾವ ಈ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜ ಹೆಚ್ಚು ಶಾಂತ, ನ್ಯಾಯಯುತ ಮತ್ತು ಮಾನವೀಯವಾಗಬಹುದು. ಸ್ವಾಮಿ ಶರಣಂ ಅಯ್ಯಪ್ಪ ಎಂಬ ಘೋಷಣೆ ನಮ್ಮೊಳಗಿನ ಅಹಂಕಾರವನ್ನು ಕರಗಿಸಿ, ಧರ್ಮದ ದಾರಿಯಲ್ಲಿ ನಡೆಯುವ ಶಕ್ತಿಯನ್ನು ನೀಡಲಿ.



# ರಾಜ್ಯಮಟ್ಟದ ಬ್ರಾಹ್ಮಣ ವಧು- ವರಾನ್ವೇಷಣಾ ಸಮಾವೇಶ

• **ಉದಯವಾಹಿನಿ, ಬೆಂಗಳೂರು**

ಬ್ರಾಹ್ಮಣ ವಿವಿಧ ಸಂಘಟನೆಗಳು, ಮೈಸೂರು ಮಂಗಳಸೂತ್ರ ಫೌಂಡೇಶನ್ ಸಹಯೋಗದಲ್ಲಿ ರಾಜ್ಯಮಟ್ಟದ ಬೃಹತ್ ಬ್ರಾಹ್ಮಣ ವಧು-ವರಾನ್ವೇಷಣ ಸಮಾವೇಶ ಹಾಗೂ ಶೀಘ್ರದಲ್ಲಿ ಕಲ್ಯಾಣಕ್ಕಾಗಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವವನ್ನು ಕುಮಾರ ಪಾರ್ಕ್‌ನ ಬಡಗನಾಡು ಸಂಘದ ಕನ್ವೆಷನ್ ಹಾಲ್‌ನಲ್ಲಿ ಜನವರಿ 10 ಹಾಗೂ 11 ರಂದು ನಡೆಯಲಿದೆ.

ಶನಿವಾರ ಹಾಗೂ ಭಾನುವಾರದಂದು ಬೆಳಗ್ಗೆ 9 ರಿಂದ ಸಂಜೆ 6 ವರೆಗೆ ವಧು-



ವರಾನ್ವೇಷಣೆ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಮಾಹಿತಿಗಾಗಿ: 9449425536 / 8217876335 ಸಂಚಾಲಕರಾದ ಶ್ರೀನಿವಾಸ್ ಭಾರದ್ವಾಜ್ ಸಂಪರ್ಕಿಸಬಹುದು

# ಬಿಜೆಪಿ ಕಾರ್ಯಕರ್ತೆ ಮೇಲೆ ದೌರ್ಜನ್ಯ ಪೊಲೀಸ್ ದೌರ್ಜನ್ಯದ ಪರಾಕಾಷ್ಠೆ

• **ಉದಯವಾಹಿನಿ, ಬೆಂಗಳೂರು**

ಹುಬ್ಬಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತೆ ಮೇಲೆ ಆದ ದೌರ್ಜನ್ಯ ಪೊಲೀಸ್ ದೌರ್ಜನ್ಯದ ಪರಾಕಾಷ್ಠೆ. ಗೃಹ ಸಚಿವ ಪರಮೇಶ್ವರ್ ಕೂಡಲೇ ರಾಜೀನಾಮೆ ನೀಡಬೇಕು ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಪ್ರತಿಕ್ರಿಯೆ ನೀಡಿರೋ ಅವರು, ಇದೊಂದು ಅಮಾನವೀಯ ಘಟನೆ ಎಂದು ಕಿಡಿಕಾರಿದ್ದಾರೆ.

**ಎಕ್ಸ್‌ನಲ್ಲಿ ಏನಿದೆರೂ:** ಹುಬ್ಬಳ್ಳಿಯಲ್ಲಿ ಮಾನವೀಯತೆ ಮಟಾಷ್, ಮಹಿಳಾ ಕಾರ್ಯಕರ್ತೆಯ



ಮೇಲೆ ಪೊಲೀಸ್ ದೌರ್ಜನ್ಯದ ಪರಾಕಾಷ್ಠೆ. ಹುಬ್ಬಳ್ಳಿಯ ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ಬಿಜೆಪಿ ಕಾರ್ಯಕರ್ತೆ ಸುಜಾತ ಅವರ ಮೇಲೆ ನಡೆದಿದೆ ಎನ್ನಲಾದ ಅಮಾನವೀಯ ಕೃತ್ಯವು ನಾಗರಿಕ ಸಮಾಜವೇ ತಲೆತಗ್ಗಿಸುವಂತದ್ದು. ಕಾಂಗ್ರೆಸ್ ಪಾಲಿಕೆ ಸದಸ್ಯೆಯೊಬ್ಬರ ದೂರಿನ ಹಿನ್ನೆಲೆಯಲ್ಲಿ ಸುಜಾತ ಅವರನ್ನು ವಶಕ್ಕೆ ಪಡೆದ ಪೊಲೀಸರು, ಅವರು ಒಬ್ಬ ಮಹಿಳೆ ಎಂಬ ಕನಿಷ್ಠ ಗೌರವವನ್ನೂ ನೀಡದೆ ವಿವಸ್ತ್ರಗೊಳಿಸಿ ಅಮಾನವೀಯವಾಗಿ ಚಿತ್ರಹಿಂಸೆ ನೀಡಿರುವುದು ಆಘಾತಕಾರಿಯಾಗಿದೆ.

ಕಾನೂನು ಪಾಲಿಸಬೇಕಾದ ಪೊಲೀಸರೇ ಈ ಮಟ್ಟದ ದೌರ್ಜನ್ಯಕ್ಕೆ ಇಳಿದಿರುವುದು ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಕೇವಲ ರಾಜಕೀಯ ಪ್ರೇರಿತ ದೂರಿನ ಆಧಾರದ ಮೇಲೆ ಒಬ್ಬ ಮಹಿಳಾ ಕಾರ್ಯಕರ್ತೆಯ ವಿರುದ್ಧ ಇಂತಹ ಭೀಕರ ಕ್ರಮ ಕೈಗೊಂಡಿರುವುದು ಪ್ರಜಾಪ್ರಭುತ್ವದ ಮೌಲ್ಯಗಳ ಹತ್ಯೆಯಾಗಿದೆ.

# ಒಡೆದಿರುವ ತುಟಿಗಳಿಗೆ ಸಕ್ಕರೆಯಿಂದ ತಯಾರಿಸಿ ಲಿಪ್ ಸ್ಕ್ರಬ್

ಚಳಿಗೆ ನಿಮ್ಮ ತುಟಿ ಒಡೆಯಬಾರದೆಂದರೆ ನೀವು ಮನೆಯಲ್ಲೇ ಸುಲಭವಾಗಿ ಸಕ್ಕರೆಯಿಂದ ಲಿಪ್ ಸ್ಕ್ರಬ್ ತಯಾರಿಸಿ ನೋಡಿ. ಚಳಿಗಾಲದಲ್ಲಿ ಅನೇಕ ಚರ್ಮದ ಸಮಸ್ಯೆಗಳು ಹೆಚ್ಚಾಗುತ್ತವೆ. ಹಾಗೆಯೇ ಪಾದಗಳಲ್ಲಿ ಬಿರುಕು, ತುಟಿ ಬಿರುಕು ಬಿಡುವುದೂ ಕೂಡಾ ಸೇರಿದೆ. ಈ ಸಮಸ್ಯೆಯನ್ನು ತೊಡೆದುಹಾಕಲು ಜನರು ಎಲ್ಲಾ ರೀತಿಯ ವಿಧಾನಗಳನ್ನು ಆಶ್ರಯಿಸುತ್ತಾರೆ. ಕೆಲವೊಮ್ಮೆ, ತುಟಿಗಳು ತುಂಬಾ ಬಿರುಕು ಬಿಡುತ್ತವೆ ಮತ್ತು ಅವು ತುಂಬಾ ನೋವಿನಿಂದ ಕೂಡಿರುತ್ತವೆ. ಬಿರುಕು ಬಿಟ್ಟ ತುಟಿಗಳಿಗೆ ಅಗ್ಗದ ಮತ್ತು ಶಕ್ತಿಯುತ ಪರಿಣಾಮಗಳನ್ನು ಹೊಂದಿರುವ ಕೆಲವು ಮನೆಮದ್ದುಗಳನ್ನು ಅಳವಡಿಸಿಕೊಳ್ಳುವುದು ಮುಖ್ಯ.

**ತುಟಿ ಒಡೆತಕ್ಕೆ ಸಕ್ಕರೆ ಸ್ಕ್ರಬ್:** ಅಂತಹ ಪರಿಸ್ಥಿತಿಯಲ್ಲಿ, ನೀವು ಸರಳವಾದ ಮನೆಯಲ್ಲಿ ತಯಾರಿಸಿದ ಸಕ್ಕರೆ ಸ್ಕ್ರಬ್ ಅನ್ನು ಬಳಸಬಹುದು. ಇದು ತುಟಿಗಳನ್ನು ಮೃದುಗೊಳಿಸುತ್ತದೆ, ಮೈಬಣ್ಣವನ್ನು ಸುಧಾರಿಸುತ್ತದೆ. ಇದನ್ನು ತಯಾರಿಸಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ನೀವು ಮನೆಯಲ್ಲಿ ಸಕ್ಕರೆ ಸ್ಕ್ರಬ್ ಅನ್ನು ಹೇಗೆ ತಯಾರಿಸಬಹುದು ಮತ್ತು ಅದನ್ನು ಹೇಗೆ ಬಳಸುವುದು ಎಂಬುದನ್ನು ನಾವಿಲ್ಲಿ ತಿಳಿಸಿದ್ದೇವೆ.

**ಚಳಿಗಾಲದಲ್ಲಿ ತುಟಿಗಳು ಏಕೆ ಬಿರುಕು ಬಿಡುತ್ತವೆ:** ನಾವು ತಿಳಿಯದೆಯೇ ನಮ್ಮ ತುಟಿಗಳನ್ನು ಹೆಚ್ಚು ನೆಕ್ಕುತ್ತೇವೆ, ಅವು ಒಣಗುತ್ತವೆ. ಇದಲ್ಲದೆ, ಕಡಿಮೆ ನೀರು ಕುಡಿಯುವುದುಬಲವಾದ ಪರಿಮಳಯುಕ್ತ ತುಟಿ ಉತ್ಪನ್ನಗಳನ್ನು ಬಳಸುವುದರಿಂದ ತುಟಿಗಳು ಒಣಗುತ್ತವೆ. ಸತ್ತ ಚರ್ಮವು ಮೇಲ್ಮೈಯಲ್ಲಿ ಸಂಗ್ರಹವಾಗುತ್ತದೆ, ಅವು ಒರಟು ಮತ್ತು ಗಾಢವಾಗಿ ಕಾಣುವಂತೆ ಮಾಡುತ್ತದೆ.

**ಸಕ್ಕರೆ ಸ್ಕ್ರಬ್ ಹೇಗೆ ಕೆಲಸ ಮಾಡುತ್ತದೆ?:** ಡೆಡ್ ಸ್ಕಿನ್‌ನ್ನುಸಕ್ಕರೆ ಕಣಗಳು ನೈಸರ್ಗಿಕವಾಗಿ ತೆಗೆದುಹಾಕುತ್ತವೆ. ಅವು ತುಂಬಾ ಕಠಿಣವಾಗಿರುವುದಿಲ್ಲ, ಆದ್ದರಿಂದ ಅವು ತುಟಿಗಳ ಮೇಲಿನ ಸೂಕ್ಷ್ಮ ಚರ್ಮಕ್ಕೆ ಹಾನಿ ಮಾಡುವುದಿಲ್ಲ. ಒಣಗಿದ ಪದರವನ್ನು ತೆಗೆದುಹಾಕಿದ ನಂತರ ಅದನ್ನು ಹಚ್ಚುವುದು ಚರ್ಮವನ್ನು ಆಳವಾಗಿ ತೇವಗೊಳಿಸುತ್ತದೆ.

### ಸಕ್ಕರೆ ಸ್ಕ್ರಬ್ ಮಾಡಲು ಏನು ಬೇಕು?

- ಅರ್ಧ ಟೀಚಮಚ ಬಿಳಿ ಸಕ್ಕರೆ
- ಸ್ವಲ್ಪ ಜೇನುತುಪ್ಪ ಅಥವಾ ಆಲಿವ್ ಎಣ್ಣೆ
- ಉತ್ತಮ ಬಟ್ಟೆ ಅಥವಾ ಟವೆಲ್
- ಒಳ್ಳೆಯ, ದಪ್ಪ ಲಿಪ್ ಬಾಮ್
- ಸ್ವಲ್ಪ ತೆಂಗಿನ ಎಣ್ಣೆ

### ಮನೆಯಲ್ಲಿ ಸಕ್ಕರೆ ಸ್ಕ್ರಬ್ ಮಾಡುವುದು ಹೇಗೆ?



- ಸಣ್ಣ ಬಟ್ಟಲಿನಲ್ಲಿ ಅರ್ಧ ಟೀಚಮಚ ಸಕ್ಕರೆಯನ್ನು ಇರಿಸಿ.
- ಅದಕ್ಕೆ ಕೆಲವು ಹನಿ ಜೇನುತುಪ್ಪ ಅಥವಾ ಆಲಿವ್ ಎಣ್ಣೆಯನ್ನು ಸೇರಿಸಿ.
- ನೀವು ಬಯಸಿದರೆ ತೆಂಗಿನ ಎಣ್ಣೆಯನ್ನು ಸಹ ಸೇರಿಸಬಹುದು.
- ಮಿಶ್ರಣವನ್ನು ಸ್ವಲ್ಪ ದಪ್ಪವಾಗಿ ಇರಿಸಿ.



ಸಾಮಾಜಿಕ ಕಳಕಳಿ


**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

# ಸರಳ ಸಜ್ಜನಿಕೆಯ ವ್ಯಕ್ತಿತ್ವದ ಜನ ನಾಯಕರು ಬಸವರಾಜ ಹೊರಟ್ಟಿರವರು

1980ರಿಂದ ಮೊದಲ್ಗೊಂಡು ಇದುವರೆಗೆ ಬಸವರಾಜ ಹೊರಟ್ಟಿ ಅವರು ಹಲವಾರು ಮಹತ್ತರ ಜವಾಬ್ದಾರಿಗಳಿಗೆ ಹೆಗಲು ಕೊಟ್ಟವರು. ರಾಜ್ಯದ ಸಾಕಷ್ಟು ಸಮಸ್ಯೆಗಳ ಬಗ್ಗೆ ಸದನದ ಬೆಳಕು ಚೆಲ್ಲುವ ಮೂಲಕ ಜನರ ಧ್ವನಿಯಾಗಿ ಕೆಲಸ ಮಾಡಿದವರು ಬಸವರಾಜ ಹೊರಟ್ಟಿ. ಬಡವರು ಹಾಗೂ ಅಂಗವಿಕಲರು, ಕೈಲಾಗದವರು, ವೃದ್ಧರು, ಅನಾಥರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಹಕಾರ ನೀಡಿ ಯಶಸ್ವಿಯಾಗಿದ್ದಾರೆ.

ಸದ್ಯ ವಿಧಾನಪರಿಷತ್‌ನ ಸಭಾಪತಿಯಾಗಿ ಸೇವೆ ಸಲ್ಲಿಸುತ್ತಿರುವ ಬಸವರಾಜ ಹೊರಟ್ಟಿ ಅವರು 2004ರಿಂದ 2006ರ ತನಕ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಸಣ್ಣ ಉಳಿತಾಯ ಸಚಿವರಾಗಿ, 2006ರಿಂದ 2007ರವರೆಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇದಲ್ಲದೆ, ಈ ಹಿಂದೆಯೂ ಅಂದರೆ 2018ರ ಜೂನ್ 21ರಿಂದ 2018ರ ಡಿಸೆಂಬರ್ 12ರ ತನಕ ವಿಧಾನ ಪರಿಷತ್ ಸಭಾಪತಿಯಾಗಿಯೂ ಇವರು ಕರ್ತವ್ಯ ನಿರ್ವಹಿಸಿದ್ದಾರೆ.

ಬಹಳಷ್ಟು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿರುವ ಬಸವರಾಜ ಹೊರಟ್ಟಿ ಅವರ ಸಾಧನೆಯ ಕಿರೀಟದಲ್ಲಿ ಪರಿಷತ್‌ನಲ್ಲಿ ಸುದೀರ್ಘ ಅವಧಿಗೆ ಸದಸ್ಯರಾಗಿ ಸೇವೆ ಸಲ್ಲಿಸಿದವರು ಎಂಬ ಹೆಮ್ಮೆಯ ಗರಿ ಕೂಡಾ ಇದೆ. ಇನ್ನು



ಕರ್ನಾಟಕ ಪ್ರೌಢ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್‌ನ ಉಪಾಧ್ಯಕ್ಷರಾಗಿ, ಕರ್ನಾಟಕ ವಿಶ್ವವಿದ್ಯಾಲಯ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿ, ಶಿಕ್ಷಣ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ವಿಷಯ ಸಮಿತಿ ಸದಸ್ಯರಾಗಿ, ವಿಧಾನ ಪರಿಷತ್ತಿನ ಸರ್ಕಾರಿ ಭರವಸೆ ಸಮಿತಿ ಅಧ್ಯಕ್ಷರಾಗಿ, ವಿಧಾನ ಮಂಡಲದ ವಿವಿಧ ಸಮಿತಿಗಳ ಸದಸ್ಯರಾಗಿ ಇವರ ಸೇವೆ, ಕೊಡುಗೆ ಅನನ್ಯವಾಗಿದೆ. ತಮ್ಮ ಜನಪರ ಕಾರ್ಯಗಳಿಂದಲೇ ಬಸವರಾಜ ಹೊರಟ್ಟಿ ಅವರು ಶಿಕ್ಷಕರ ಕ್ಷೇತ್ರದ ಅದ್ವಿತೀಯ ನಾಯಕರಾಗಿ ಹೊರಹೊಮ್ಮಿದ್ದಾರೆ. ಜಾತ್ಯಾತೀತ ಜನತಾದಳದ ನಾಯಕನಾಗಿ ಪಕ್ಷವನ್ನೂ ಕಟ್ಟುವಲ್ಲಿ ಇವರ ಕೊಡುಗೆ ಮಹತ್ವದ್ದು. ತಾನು ನಂಬಿದ ತತ್ವಸಿದ್ಧಾಂತಕ್ಕೆ ಅನುಗುಣವಾಗಿ ಶುದ್ಧ ಹಸ್ತದ ರಾಜಕಾರಣಿಯಾಗಿಯೂ ಬಸವರಾಜ ಹೊರಟ್ಟಿ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ

ಹುಬ್ಬಳ್ಳಿಯ ನೆಹರು ಮೈದಾನದಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ಕೊಟ್ಟರು.

ಬಳಿಕ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಅವರಿಗೆ ಸನ್ಮಾನ ಮಾಡಿದರು ಆ ವಿಚಾರ ಕರ್ನಾಟಕದ ಜನತೆಗೆ ಸಂತಸವನ್ನು ತಂದಿತ್ತು ಸಭಾಪತಿ ಬಸವರಾಜ್ ಹೊರಟ್ಟಿ ಪ್ರಸ್ತುತ ಇವರು ಪರಿಷತ್ ಸದಸ್ಯರಾಗಿ 45 ವರ್ಷ ಪೂರ್ಣಗೊಳಿಸಿದ್ದಾರೆ.

ಈ ಹಿನ್ನೆಲೆ ಹುಬ್ಬಳ್ಳಿಯಲ್ಲಿ ಬಸವರಾಜ್ ಹೊರಟ್ಟಿಯವರಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಸನ್ಮಾನ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ , ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸೇರಿದಂತೆ ಅನೇಕ ರಾಜಕಾರಣಿಗಳು ಗಣ್ಯರು ಭಾಗಿಯಾಗಿದ್ದರು. ಕಾರ್ಯಕ್ರಮದಲ್ಲಿ ಮಾತನಾಡಿದ ರಾಜಕೀಯ ನಾಯಕರು ಬಸವರಾಜ್ ಹೊರಟ್ಟಿ ಅವರನ್ನು ಹಾಡಿ ಹೊಗಳಿದರು ಬಸವರಾಜ ಹೊರಟ್ಟಿ ಸನ್ಮಾನ ಕಾರ್ಯಕ್ರಮ ಬಹಳಷ್ಟು ಯಶಸ್ವಿಯನ್ನು ಕಂಡಿದ್ದು ನಮಗೆಲ್ಲಾ ತಿಳಿದಿದೆ. ಹಲವಾರು ವಿಚಾರಗಳನ್ನು ನಾವು ಇವರ ಬಗ್ಗೆ ತಿಳಿಯಬೇಕೆಂದರೆ ಗೂಗಲ್ ಒಡೆದರೆ ಸಾಕು ಮಾಹಿತಿಗಳು ಲಭ್ಯವಾಗುತ್ತದೆ ಒಟ್ಟಾರೆ ಬಸವರಾಜ ಹೊರಟ್ಟಿರವರ ಬಗ್ಗೆ ಎಷ್ಟು ಹೇಳಿದರು ಕಡಿಮೆ.

ತಮ್ಮ ಸರಳವಾದ ವ್ಯಕ್ತಿತ್ವದಿಂದಲೇ ಮನ ಗೆದ್ದು ಸಮಾಜದ ಏಳಿಗೆಗಾಗಿ ಕಾರ್ಯನಿರ್ವಹಿಸುತ್ತಿರುವ ಇಂಥವರಿಗೆ ಎಷ್ಟು ಹೊಗಳಿದರೂ ಕಡಿಮೆ. ಎಂತಹ ಪಡು ಬಡವರನ್ನು ಪ್ರೀತಿಯಿಂದ ಮಾತನಾಡಿಸುವ ಇವರ ವ್ಯಕ್ತಿತ್ವ ಸಂಯಮ ಶಾಂತಿಗೆ ನಮ್ಮೆಲ್ಲರ ನಮಸ್ಕಾರವಿರಬೇಕು. ನೋಡುವರ ಪರವಾಗಿ ಧ್ವನಿಯಾಗಿ ನಿಲ್ಲುವಂತಹ ಜನನಾಯಕರಿಗೆ ನಮ್ಮ ಪರವಿರಬೇಕು. ಇಂತಹ ನಾಯಕರಿಗೆ ನಮ್ಮ ಬೆಂಬಲ ನೀಡಿದಾಗ ಮಾತ್ರ ಸಮಾಜದಲ್ಲಿ ಸ್ವಚ್ಛತೆಯ ಬಾಳು ಬಾಳಲು ಸಾಧ್ಯವಾಗುತ್ತದೆ. ಬಲೆ ಬಲೆ ನಮ್ಮ ನಾಯಕರು ನೀವೆ ಸ್ಫೂರ್ತಿದಾಯಕರು ಸಾಧನೆಗೆ ನೀಡುವಿರಿ ಪ್ರೋತ್ಸಾಹ ಪ್ರೀತಿ ವಿಶ್ವಾಸದಿ ನೀವು ಮಾಡುವಿರಿ ದಾಸೋಹ ಹಲವು ನಾಯಕರು ನಿಮ್ಮನ್ನು ನೋಡಿ ಕಲಿಯಲಿ ಜನರ ಕಷ್ಟ ನಷ್ಟಗಳನ್ನು ಆಲಿಸುವಂತಾಗಲಿ ಮುಂದಾದರೂ ಬದಲಾವಣೆ ಕಾಣಲಿ ಜಗದಿ ನ್ಯಾಯವತವಾದ ಚಿಗುರು ಹೆಮ್ಮರವಾಗಿ ಬೆಳೆಯಲಿ ನೀವು ನಮ್ಮೆಲ್ಲರ ಸ್ಫೂರ್ತಿದಾಯಕ ನಾಯಕರು

ಮುಂದೆ ಇರಲಿ ನಿಮ್ಮ ಆಶೀರ್ವಾದದ ನಮ್ಮ ಮೇಲೆ ಎನ್ನುತ ನಿಮಗೆ ಮತ್ತೊಮ್ಮೆ ಧನ್ಯವಾದಗಳು ಪ್ರೋತ್ಸಾಹ ನೀಡುತ್ತಿರುವುದಕ್ಕೆ ಎಲ್ಲಾ ಕ್ಷೇತ್ರ ದವರಿಗೂ ನಿಮ್ಮ ಸೇವೆ ಸಲ್ಲುತ್ತಿರುವುದು ನಮಗೆ ಸ್ಫೂರ್ತಿ ಎನ್ನುತ ನಿಮ್ಮ ಬಗ್ಗೆ ಹೇಳುವಷ್ಟು ದೊಡ್ಡವಳು ನಾನಲ್ಲ ಆದರೂ ನಿಮ್ಮ ಮೇಲಿನ ಗೌರವ ಹಾಗೂ ಅಭಿಮಾನದಿಂದ ಈ ಲೇಖನ ನಿಮಗೆ ಅರ್ಪಣೆ.

ಕೊನೆಯಲ್ಲಿದೆ ನಿಮ್ಮ ಸಾಧನೆಗೆ ಹಾಗೆಯೇ ವಿರಾಮವೆಲಿದೆ ನಿಮ್ಮ ಬಗ್ಗೆ ಬರೆಯಲು ಬರವಣಿಗೆಗೆ ಬದುಕು ಅನ್ನೋದು ಹಲವು ಪಾಠಗಳ

ದಾರಿದೀಪದ ಲಾಟೀನು ಹಿಡಿದು ಹೋಗುವಂತೆ ಬೆಳಕು ಕಾಣಬೇಕಿದೆ ಹಲವರ ಬಾಳಲ್ಲಿ ಅಂತಹ ಬೆಳಕು ನೀಡುವವರೇ ನಮ್ಮ ಅಚ್ಚುಮೆಚ್ಚಿನ ಜನನಾಯಕರು ನಿಮ್ಮಂತವರು ಇಲ್ಲಿ

ಜೈ ಹಿಂದ್ ಜೈ ಕರ್ನಾಟಕ ಮಾತೆ

# ನರೇಗಾ ಯೋಜನೆ ಸತ್ಯನಾಶ ಮಾಡಲು ಹೊರಟ ಬಿಜೆಪಿ

• ಉದಯವಾಹಿನಿ, ಯಾದಗಿರಿ

ಬಡ ಕಾರ್ಮಿಕರಿಗೆ ಸಹಾಯ ಮಾಡಲೆಂದು ಕಾಂಗ್ರೆಸ್ ಪಕ್ಷ 20 ವರ್ಷಗಳ ಹಿಂದೆ ತಂದಿರುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕೇಂದ್ರದ ಬಿಜೆಪಿ ಸರ್ಕಾರ ಸತ್ಯನಾಶ ಮಾಡಲು ಹೊರಟಿದೆ. ಹೀಗಾಗಿ 2025 ರಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ, ಹಕ್ಕು ಸ್ವರೂಪವನ್ನು ತೆಗೆದಾಕಿ ಕೇವಲ ಸರ್ಕಾರದ ಹಣತಿಯ ಯೋಜನೆಗಾಗಿ ಹೊಸದಾಗಿ ವಿಕಾಸಿತ ಭಾರತ ರೋಜ್ಗಾರ್ ಮತ್ತು ಆಜಿವಿಕ್ ಮಿಷನ್ ಗ್ರಾಮೀಣ ಖಾತ್ರಿ, ವಿಬಿಗ್ರಾಂಜಿ ಖಾತೆಯನ್ನು ಜಾರಿಗೊಳಿಸಿದೆ. ಈ ಹೊಸ ಕಾಯ್ದೆಯಿಂದ ಕೂಲಿಕಾರರ ಮೇಲೆ ಹಲವು ದುಷ್ಪರಿಣಾಮ ಬೀರುತ್ತವೆ ರೈತರ ಋತುವಿನ ಸಂದರ್ಭದಲ್ಲಿ 60 ದಿನಗಳ ಕೃಷಿ ಕೆಲಸ ನಿರ್ಬಂಧಿಸಿದನು ನೋಡಿದರೆ 125 ದಿನಗಳ ಕೆಲಸ ಸಿಗುವುದಿಲ್ಲ ಮತ್ತು ಕೆಲಸದಿಂದ ವಂಚಿತರಾಗುತ್ತಾರೆ.

ಕೇಂದ್ರ ಸರ್ಕಾರ 60% ರಾಜ್ಯ ಸರ್ಕಾರ 40% ರಷ್ಟು ಮತವನ್ನು ಖರ್ಚು ಮಾಡಬೇಕೆಂಬ ಅಂಶಗಳಿಂದ ಕೂಲಿಕಾರ್ರಿಗೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರವು ಹಣ ನೀಡಲ್ಲವೆಂದು ರಾಜ ಸರ್ಕಾರವು ಕೇಂದ್ರ ಸರ್ಕಾರವು ಹಣ ಕೊಟ್ಟಿಲ್ಲವೆಂದು ಹೇಳುವ ಮೂಲಕ ಕೂಲಿಕಾರ್ಮಿಕರನ್ನು ಕೂಲಿಯಿಂದ ವಂಚಿತರಾಗಿ ಮಾಡುತ್ತದೆ. ಎಂದು ಮಂಗಳವಾರದಂದು ಯಾದಗಿರಿ ಜಿಲ್ಲಾ ಅಧಿಕಾರಿ ಕಚೇರಿ ಮುಂದೆ. ಪ್ರತಿಭಟನೆಗೆ ಮುಂದಾಗಿ ಮನವಿಯನ್ನು ಸಲ್ಲಿಸಲಾಯಿತು.


ಉದಯವಾಹಿನಿ ಚಿತ್ರ

# ಪ್ಲಾಸ್ಟಿಕ್ ಮುಕ್ತ ಜೀವನಕ್ಕೆ ಹೆಜ್ಜೆ ಇಡೋಣ

## U M C A ಫೌಂಡೇಶನ್ ಜೀವನ್ ದಾನ್ ಗ್ರೂಫ್ ಸಂಸ್ಥೆ ಕಾರ್ಯಕ್ರಮಕ್ಕೆ ಚಾಲನೆ

• ಉದಯವಾಹಿನಿ, ಯಲಬುರ್ಗಾ

ಜೈವವೈವಿಧ್ಯತೆಯ ಹಾನಿ ಮಾಡುವ ಪ್ಲಾಸ್ಟಿಕ್ ಮಾನವನ ಆರೋಗ್ಯದ ಮೇಲೆ ಪರಿಣಾಮ ಬೀರುವ ಆರ್ಥಿಕ ಹಾನಿ ಪ್ಲಾಸ್ಟಿಕ್ ನಿಂದ ಹಲವಾರು ನಷ್ಟವಾಗುತ್ತಿದೆ ಎಂದು ಮುಖ್ಯ ಅತಿಥಿಗಳಾಗಿ ಕರ್ನಾಟಕ ಯು ಎಮ್ ಸಿ ಎ ಫೌಂಡೇಶನ್ ಸಂಸ್ಥೆಯ ಮಂಜುನಾಥ್ ಬೆಂಗಳೂರು ಅವರು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಂಡಿದ್ದ ಯುಎಮ್‌ಸಿಎ ಫೌಂಡೇಶನ್ ಜೀವನ್ ದಾನ್ ಗ್ರೂಫ್ ಸಂಸ್ಥೆ ವತಿಯಿಂದ ಪ್ಲಾಸ್ಟಿಕ್ ಮುಕ್ತ ಭಾರತ ಮಾಡೋಣ ಕಾರ್ಯಕ್ರಮವನ್ನ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

**ಪ್ಲಾಸ್ಟಿಕ್ ಮುಕ್ತ ಭಾರತ ಮಾಡೋಣ**

ಮಹಿಳೆಯರಿಗೆ ಮನೆಯಲ್ಲಿಯೇ ಸ್ವಉದ್ಯೋಗ ಮಾಡುವ ಕೆಲಸ ಚೀಲ ಹೊಲಿದು ಕೊಡುವುದರ ಬಗ್ಗೆ ಮತ್ತು ಬ್ರಾಸ್ ಲೈಟ್ ಮುತ್ತಿನ ಸರ ಮಾಂಗಲ್ಯ ಸೋತ್ರ ತಯಾರಿಕೆಯಲ್ಲಿ ಅಪ್ಪಳ ಸಂಡಿಗೆ ಉಪ್ಪಿನಕಾಯಿ ಇನ್ನೂ 15 ವಿವಿಧ ರೀತಿಯ ತಯಾರಿಕೆಗಳನ್ನ ಮಾಡಬಹುದು ಎಂದು ಈ ಸಂಸ್ಥೆಯವರು ತಿಳಿಸಿದರು.

ಶರಣಪ್ಪ ವಡ್ಡರ ಮುಧೋಳ ಅವರು ಯಲಬುರ್ಗಾ ಪಟ್ಟಣ, ತಾಲ್ಲೂಕಿನ ವಿವಿಧ ಗ್ರಾಮಗಳ ಮಹಿಳೆಯರನ್ನು ಗುರುತಿಸಿ ಎರಡು ನೂರಕ್ಕೂ ಹೆಚ್ಚು ಜನರನ್ನು ಸೇರಿಸಿ ಕಾರ್ಯಕ್ರಮಕ್ಕೆ ಕೇಂದ್ರ ಬಿಂದುವಾದರು, ಕಾರ್ಯಕ್ರಮದ ನಿರೂಪಣೆ ಮಾಡಿದರು. ಇದೆ ಸಂದರ್ಭದಲ್ಲಿ ಅಂದಪ್ಪ ಸಂಗನಾಳ. ಕಳಕೇಶ್ ನಿಡಗುಂದಿ. ನವೀನ್ ಕುಮಾರ್. ರಾಘವೇಂದ್ರ ಕೆರೂರು. ಖಜಾಬಿ ಎಮ್. ಹೇಮಾವತಿ ಬಡಿಗಾರ. ನೂರಜಾನ್ ಇಟಗಿ. ಲಕ್ಷ್ಮಿ ದೇವಿ ಆಡೂರ್. ಮದು ಬಳೂಟಗಿ. ಗೌರಮ್ಮ ಛಲವಾದಿ. ಸಾವಿತ್ರಮ್ಮ ಬಿನ್ನಾಳ. ಜ್ಯೋತಿ ಜಾಲಗಾರ. ಇವರೆಲ್ಲರೂ ಯುಎಮ್‌ಸಿಎ ಫೌಂಡೇಶನ್ ಸಂಸ್ಥೆಯ ಉದ್ಯೋಗ ಕಲ್ಪಿಸುವ ಬಗ್ಗೆ ಸಹಕಾರಿಯಾಗಿ ದ್ದಾರೆ ಕಾರ್ಯಕ್ರಮದಲ್ಲಿ ಪಟ್ಟಣ ಮತ್ತು ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ಮಹಿಳೆಯರೆಲ್ಲರೂ ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಿದರು.


ಉದಯವಾಹಿನಿ ಚಿತ್ರ

> ಹೆಣ್ಣು ಮಕ್ಕಳು ಸ್ವವಲಂಬನೆ ಬದುಕಿಗೆ ಈ ಯು ಎಮ್ ಸಿ ಎ ಫೌಂಡೇಶನ್ ಸಂಸ್ಥೆಯು ಪ್ರತಿಯೊಬ್ಬರಿಗೂ ಅವಕಾಶ ಕಲ್ಪಿಸಿ ಕೊಟ್ಟಿದೆ ಬೆಳಿಗ್ಗೆ ಎದ್ದು ಹಲ್ಲುಜ್ಜುವ ಬ್ರಶ್ ನಿಂದ ಹಿಡಿದು ದಿನನಿತ್ಯ ನಾವು ಉಪಯೋಗಿಸುವ ಹಲವಾರು ವಸ್ತುಗಳೆಲ್ಲವೂ ಪ್ಲಾಸ್ಟಿಕ್‌ದ್ದೇ ಆಗಿದೆ. ಬದಲಾವಣೆಯತ್ತ ಗಮನ ಹರಿಸಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು ಮತ್ತು ಪರಿಸರ ಸ್ನೇಹಿ ಪರ್ಯಾಯವನ್ನು ಬಳಸುವುದು ಅತ್ಯಗತ್ಯವಾಗಿದೆ.
>
> –ನಾಗವೇಣಿ ಕೋಲಾರ್

> ಪ್ಲಾಸ್ಟಿಕ್ ಬಾಟಲಿಯು ಕ್ಯಾನ್ಸರ್‌ಗೆ ಕಾರಣವಾಗುವ ರಾಸಾಯನಿಕವನ್ನು ಬಿಡುಗಡೆ ಮಾಡಬಹುದು ಆದ್ದರಿಂದ ಪ್ಲಾಸ್ಟಿಕ್ ಬಾಟಲಿಯ ಬದಲಿಗೆ ಸ್ಟೀಲ್, ಗಾಜು, ಅಲ್ಯೂಮಿನಿಯಂ ಬಾಟಲಿಯನ್ನು ಬಳಸಬೇಕು. ಇದು ಮರುಬಳಕೆಗೆ ಸುಲಭವಾಗುವುದರ ಜತೆಗೆ ಪರಿಸರದ ಮೇಲೆ ಒತ್ತಡ ಕಡಿಮೆ ಮಾಡಬಹುದು.
>
> – ಶರಣಯ್ಯ ಶಿರೂರ ಮಠ ಜಿಲ್ಲಾ ಸಂಯೋಜಕರು

# ಮಿನಿ ನ್ಯೂಸ್

## ಹಾಳು ಬಿದ್ದ ಸಾಲಹಳ್ಳಿ ಬಸ್ ನಿಲ್ದಾಣ

• ಉದಯವಾಹಿನಿ, ಕಾಳಗಿ

ತಾಲ್ಲೂಕಿನ ಸಾಲಹಳ್ಳಿ ಜನರ ಪಾಲಿಗೆ ಬಸ್ ನಿಲ್ದಾಣ ಇದ್ದರೂ ಇಲ್ಲದಂತಾಗಿ ಕನ್ನಡಿಯೊಳಗಿನ ಗಂಟಾಗಿದೆ. ದಶಕದ ಹಿಂದೆ ನಿರ್ಮಿಸಲಾಗಿರುವ ಬಸ್ ನಿಲ್ದಾಣ ಹಾಳು ಬಿದ್ದು ಹೋಗಿದೆ.ಅಲ್ಲಿ ಗಿಡ-ಗಂಟಿಗಳು ಎದ್ದು ಅದರಲ್ಲಿಯೇ ಮರೆಯಾಗಿದೆ. ಹೀಗಾಗಿ ಪಟ್ಟಣಕ್ಕೆ ಬರುವ ಜನರು ಬಸ್ ನಿಲ್ದಾಣ ಎಂದರೆ, ರಸ್ತೆಯ ಬದಿಯಲ್ಲಿರುವ ಅಂಗಡಿ ಗಳೇ ಅವರ ಪಾಲಿಗೆ ಬಸ್ ನಿಲ್ದಾಣ, ಆಶ್ರಯ ತಾಣವಾಗಿವೆ. ಇಲ್ಲಿಂದ ಬೇರೆ ಊರುಗಳಿಗೆ ಸಂಚರಿಸುವ ಪ್ರಯಾಣಿಕರು ಬಸ್ ಇಲ್ಲದೆ ಪರದಾಡುವಂತಾಗಿದೆ. ಜನರ ಗೋಳಂತೂ ಹೇಳತೀರದು ಸಾರ್ವಜನಿಕರಿಗೆ ಅವಶ್ಯಕವಾಗಿರುವ ಸೌಲಭ್ಯಗಳಲ್ಲೊಂದಾದ ಬಸ್ ನಿಲ್ದಾಣದ ಸೌಲಭ್ಯ ಪಟ್ಟಣಕ್ಕೆ ಮರಿಚಿಕೆಯಾಗಿದೆ. ಇಲ್ಲಿಂದ ಬಸ್‌ಗಳಲ್ಲಿ ಸಾರ್ವಜನಿಕರು ಪ್ರಯಾಣಿಸಬೇಕಾದರೇ ರಸ್ತೆಯಲ್ಲೆ ನಿಲ್ಲಬೇಕು. ಇಲ್ಲವೇ ಅಕ್ಕಪಕ್ಕದ ಅಂಗಡಿಗಳ ಆಸರೆ ಪಡೆಯಬೇಕು. ಕೂಡಲಿಕ್ಕೂ ಸ್ಥಳಾವಕಾಶವಿಲ್ಲದೇ ಪ್ರಯಾಣಿಕರ ಪಡಿಪಾಡಲು ಹೇಳತೀರದಾಗಿದೆ.

ಹೀಗಾಗಿ ಜನರು ನಿತ್ಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಧಿಗಳಿಗೆ ಹಿಡಿ ಶಾಪ ಹಾಕುತ್ತಲೇ ಇರುತ್ತಾರೆ. 20 ವರ್ಷಗಳ ಹಿಂದೆ ನಿರ್ಮಾಣವಾದ ಬಸ್ ನಿಲ್ದಾಣವು ಉಪಯೋಗಕ್ಕೆ ಬಾರದೇ ನಿರುಪಯುಕ್ತವಾಗಿ ಸಾರ್ವಜನಿಕ ಶೌಚಾಲಯವಾಗಿ ಮಾರ್ಪಟ್ಟಿದೆ. ಎಷ್ಟೋ ಬಾರಿ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಸಾರ್ವಜನಿಕರು ದೂರುತ್ತಿದ್ದಾರೆ. ಈಗಾಗಲಾದರೂ ಗಮನ ಹರಿಸಿ ಸೂಕ್ತ ಕ್ರಮ ಜರುಗಿಸಿ ಜನರಿಗೆ ಅನುವು ಮಾಡಿಕೊಡುಬೇಕು ಎಂದು ಕಾಳಗಿ ಕೊಡ್ಲಿ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಂತೋಷ ಹುಳಗೇರಿ ಹೇಳಿದರು.

## ರಾಯಣ್ಣ ಉದ್ಯಾನವನದಲ್ಲಿರುವ ವಿವಿಧ ವಸ್ತುಗಳು ನಾಶ: ಖಂಡನೆ

• ಉದಯವಾಹಿನಿ, ಸೇಡಂ

ಪಟ್ಟಣದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉದ್ಯಾನವನದನಲ್ಲಿರುವ ಸಿಮೆಂಟ್ ಟೇಬಲ್ ಮತ್ತು ಗೇಟು ಇತರೆ ವಸ್ತುಗಳು ಒಡೆದು ಹಾಕಿದು, ಕರ್ನಾಟಕ ಪ್ರದೇಶ ಕುರುಬರ ಸಂಘ ತಾಲ್ಲೂಕ ಘಟಕ ತೀರುವವಾಗಿ ಖಂಡಿಸಿದ್ದು ಸಂಬಂಧಪಟ್ಟ ಪುರಸಭೆ ಅಧಿಕಾರಿಗಳಿಗೂ, ಸೇಡಂ ಪೊಲೀಸ್ ಸ್ಟೇಷನ್‌ಗೆ ಮನವಿ ಪತ್ರ ಸಲ್ಲಿಸಿ ತಕ್ಷಣ ಕಿಡಿಗೇಡಿಗಳನ್ನು ಬಂಧಿಸಬೇಕು ಹಾಗೂ ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕು, ತಕ್ಷಣ ಈ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಪುರಸಭೆ ಅಧಿಕಾರಿಗಳು ಅಳವಡಿಸಬೇಕು ಎಂದು ಒತ್ತಾಯಿಸಿದರು.

## ಶಾಸಕರ ಮೇಲೆ ಹಲ್ಲೆ ಮಾಡಿದವರ ಮೇಲೆ ಕ್ರಮ ಕೈಗೊಳ್ಳದಿದ್ದರೆ ಹೋರಾಟ

• ಉದಯವಾಹಿನಿ, ಬೀದರ

ಜಿಲ್ಲಾ ಕೆ.ಡಿ.ಪಿ. ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾಧಿಕಾರಿಗಳು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಹಾಗೂ ಮಾಧ್ಯಮದವರ ಸಮ್ಮುಖದಲ್ಲಿಯೆ ಕಾಂಗ್ರೇಸಿನ ವಿಧಾನ ಪರಿಷತ್ ಸದಸ್ಯರಾದ ಭೀಮರಾವ ಪಾಟೀಲ ಅವರು ನಮ್ಮ ಶಾಸಕರಾದ ಡಾ. ಸಿದ್ದಲಿಂಗಪ್ಪ ಪಾಟೀಲ ಅವರ ಮೆಲೆ ಹಲ್ಲೆ ಮಾಡಿರುವುದು ಖಂಡನೀಯ. ಹಿಂದೆ ಬೀದರನಲ್ಲಿ ವೈದ್ಯಕೀಯ ಕಾಲೇಜು ತೆಗೆಯುವ ಉದ್ದೇಶದಿಂದ ದಿ.ಜೊಗಾಸಿಂಗ ಅವರು ಗುರುನಾನಕ ದೇವ ಟ್ರಸ್ಟ ಹೆಸರಿನಲ್ಲಿ ಪಡೆದ ಭೂಮಿಯನ್ನು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅಕ್ರಮವಾಗಿ ಲೇಔಟ್ ಮಾಡಿರುವುದನ್ನು ಕೆ.ಡಿ.ಪಿ. ಸಭೆಯಲಿ ನಮ್ಮ ಶಾಸಕರಾದ ಡಾ ಸಿದ್ದು ಪಾಟೀಲರವರು ಪ್ರಶ್ನಿಸುತ್ತಿದಂತೆ ಎಕಾಎಕಿ ಅವರ ಮೇಲೆ ಕಾಂಗ್ರೇಸ್‌ನ ವಿಧಾನ ಪರಿಷತ್ ಸದಸ್ಯರು ಹಲ್ಲೆ ಮಾಡಿರುವುದನ್ನು ಗಮನಿಸಿದ ಜಿಲ್ಲಾಡಳಿತ ಹಾಗೂ ಜಿಲ್ಲಾ ಪೋಲಿಸರು ಅಲ್ಲಿಯೆ ಸೋಮೋಟೋಕೇಸ್ ದಾಖಲಿಸ ಬೇಕಾಗಿತ್ತು. ಆದರೆ ಇಲ್ಲಿಯವರೆಗೆ ಯಾವುದೆ ಕ್ರಮ ಕೈಗೊಂಡಿಲ್ಲ. ಈ ವಾರದೊಳಗೆ ಹಲ್ಲೆಮಾಡಿದವರ ವಿರುದ್ಧ ಕೇಸ್ ದಾಖಲಿಸಿ ಕ್ರಮಕೊಳ್ಳದ ಇದ್ದಲ್ಲಿ, ಅಕ್ರಮವಾಗಿ ನಿರ್ಮಿಸಿರುವ ಲೇಔಟನ್ನು ರದ್ದುಗೊಳಿಸದಿದ್ದಲ್ಲಿ ಜಿಲ್ಲಾ ಬಿ.ಜೆ.ಪಿ.ಯಿಂದ ಜನವರಿ 12 ರಂದು ಬೀದರನಲ್ಲಿ ಬೃಹತ್ ಹೋರಾಟ ಮಾಡಲಾಗುವುದು ಎಂದು ಬಿಜೆಪಿ ಜಿಲ್ಲಾಧ್ಯಕ್ಷರಾದ ಸೋಮನಾಥ ಪಾಟೀಲ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಸವಣ್ಣನ ಹೆಸರಿನಲ್ಲಿ ಉದ್ಯಾನ ಬಸವ ಪರ ಸಂಘಟನೆಗಳಿಂದ ಹರ್ಷ

• ಉದಯವಾಹಿನಿ, ಬೀದರ್

ಬೀದರ ಬಸವ ಪರ ಸಂಘಟನೆ ವತಿಯಿಂದ ಬುಧವಾರ ನಗರದ ಅಕ್ಕಮಹಾದೇವಿ ಕಾಲೇಜಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ವಿಶೇಷವಾಗಿ ಸನ್ಮಾನಿಸಿ ಅಭಿನಂದನೆ ಸಲ್ಲಿಸಲಾಯಿತು. ಬೆಂಗಳೂರು ನಗರದಲ್ಲಿ ಸರಕಾರದಿಂದ 153 ಎಕರೆ ಭೂಮಿಯಲ್ಲಿ ಜೀವ ವೈವಿಧ್ಯ ಉದ್ಯಾನವನ್ನು ಸ್ಥಾಪಿಸಲು ಅನುಮೋದನೆ ದೊರೆತಿರುವುದು ಹಾಗೂ ಈ ಉದ್ಯಾನವನ್ನು ವಿಶ್ವಗುರು ಬಸವಣ್ಣನವರ ಹೆಸರಿನಲ್ಲಿ ನಿರ್ಮಿಸುತ್ತಿರುವ ಮಹತ್ವದ ನಿರ್ಧಾರಕ್ಕಾಗಿ ಸಂಘಟನೆಗಳು ಅತೀವ ಸಂತೋಷ ವ್ಯಕ್ತಪಡಿಸಿವೆ. ಈ ಯೋಜನೆಯು ಪರಿಸರ ಸಂರಕ್ಷಣೆಗೂ ಜೊತೆಗೆ ಬಸವ ತತ್ವಗಳ ಪ್ರಚಾರಕ್ಕೂ ಸಹಕಾರಿಯಾಗಲಿದೆ ಎಂದು ಸಂಘಟನೆಯ ಪದಾಧಿಕಾರಿಗಳು ಅಭಿಪ್ರಾಯಪಟ್ಟರು.

## ಜನಾರ್ದನ ರೆಡ್ಡಿ ವಿರುದ್ಧ ಮಹತ್ವದ ಸಾಕ್ಷಿ ರಿಲೀಸ್ ಮಾಡಿದ ಭರತ್ ರೆಡ್ಡಿ ಬೆಂಬಲಿಗರು; ಜನಾರ್ದನ ಮನೆ ಮೇಲಿದ್ರಾ ಗನ್ ಮ್ಯಾನ್


# ಬಳ್ಳಾರಿ ಬ್ಯಾನರ್ ಗಲಾಟೆಗೆ ಮತ್ತೊಂದು ಟ್ವಿಸ್ಟ್

• ಉದಯವಾಹಿನಿ, ಬಳ್ಳಾರಿ

ಬ್ಯಾನರ್ ವಿಚಾರವಾಗಿ ನಡೆದ ಗಲಾಟೆಯಲ್ಲಿ ಕಾಂಗ್ರೇಸ್ ಕಾರ್ಯಕರ್ತ ಮೃತಪಟ್ಟ ಪ್ರಕರಣ ದಿನಕ್ಕೊಂದು ಟ್ವಿಸ್ಟ್ ಸಿಗುತ್ತಿದೆ. ಭರತ್ ರೆಡ್ಡಿ ಬೆಂಬಲಿಗ ಖಾಸಗಿ ಗನ್ ಮ್ಯಾನ್ ಗಳು ಜನಾರ್ದನ ರೆಡ್ಡಿ ಮನೆಯನ್ನು ಗುರಿಯಾಗಿಸಿಕೊಂಡು ಫೈರಿಂಗ್ ನಡೆಸಿದ್ದರು ಎಂಬ ಆರೋಪ ಇಲ್ಲಿ ತನಕ ಕೇಳಿ ಬಂದಿತ್ತು, ಆದರೆ, ಈಗ ಫೈರಿಂಗ್ ನಡೆದ ವೇಳೆ ಜನಾರ್ದನ ರೆಡ್ಡಿ ಮನೆಯ ಮೇಲೂ ಗನ್ ಮ್ಯಾನ್ ಇದ್ದರು ಎಂಬುದಕ್ಕೆ ಸಾಕ್ಷ್ಯಗಳನ್ನು ಭರತ್ ರೆಡ್ಡಿ ಕಡೆಯವರು ಬಿಡುಗಡೆ ಮಾಡಿದ್ದಾರೆ.

**ಜನಾರ್ದನ್ ಮನೆ ಮೇಲೆ ಗನ್ ಮ್ಯಾನ್ ಇದ್ದ ಫೋಟೋ ರಿಲೀಸ್:** ಈ ಘಟನೆ ವೇಳೆ ಜನಾರ್ದನ ರೆಡ್ಡಿ ಅವರ ಮನೆ ಮೇಲೆ ಗನ್‌ಮ್ಯಾನ್ ನಿಂತಿರುವ ಫೋಟೋವನ್ನು ಶಾಸಕ ಭರತ್ ರೆಡ್ಡಿ ಬೆಂಬಲಿಗರು ಬಿಡುಗಡೆ ಮಾಡಿದ್ದು, ಜನಾರ್ದನ ರೆಡ್ಡಿ ಕಡೆಯಿಂದಲೂ ಗುಂಡು ಹಾರಿಸಲಾಗಿದೆ ಎಂದು ಆರೋಪಿಸಿ, ಸರ್ಕಾರಿ ಗನ್‌ಮ್ಯಾನ್ ವಿಚಾರಣೆಗೆ ಕಾಂಗ್ರೇಸ್ ಒತ್ತಾಯಿಸಿದೆ.


ಉದಯವಾಹಿನಿ ಚಿತ್ರ



ಈ ಹಿನ್ನೆಲೆಯಲ್ಲಿ ಪೊಲೀಸರು ಸದ್ಯ ಬಿಡುಗಡೆಯಾದ ಫೋಟೋ ಬಗ್ಗೆ ತನಿಖೆ ಆರಂಭಿಸಿದ್ದಾರೆ. ಘಟನೆ ಸಂಬಂಧ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದು, ರೆಡ್ಡಿ ಹಾಗೂ ಅವರ ಬೆಂಬಲಿಗ ನಾಗರಾಜ್ ನೀಡಿದ ದೂರುಗಳ ಬಗ್ಗೆ ವಿಚಾರಣೆ ನಡೆಸುತ್ತಿದ್ದಾರೆ. ಬ್ಯಾನರ್ ಹರಿದ ಸ್ಥಳ, ಜನಾರ್ದನ ರೆಡ್ಡಿ ತೋರಿಸಿದ ಜಾಗಗಳನ್ನು ಬಾಂಬ್ ನಿಷ್ಕ್ರಿಯ ದಳ ಮತ್ತು ಎಫ್‌ಎಸ್‌ಎಲ್ ತಂಡ ಪರಿಶೀಲನೆ ನಡೆಸಿದೆ. ಇದಕ್ಕೂ ಮುನ್ನ ಶಾಸಕ ಭರತ್ ರೆಡ್ಡಿ ಕಡೆಯವರು ಗುಂಡು ಹಾರಿಸುತ್ತಿರುವ ದೃಶ್ಯಗಳನ್ನು ಬಿಜೆಪಿ ನಾಯಕರು ಬಿಡುಗಡೆ ಮಾಡಿದ್ದರು. ಇದಕ್ಕೆ ಪ್ರತಿಯಾಗಿ, ಬಿಜೆಪಿ ಕಡೆಯವರು ಖಾರದ ಪುಡಿ ಎರಚುತ್ತಿರುವ ಮತ್ತು ಬ್ಯಾನರ್ ಹರಿಯುತ್ತಿರುವ ದೃಶ್ಯಗಳನ್ನು ಕಾಂಗ್ರೇಸ್ ಬಿಡುಗಡೆ ಮಾಡಿತ್ತು. ಈಗ ಮತ್ತೆ ಹೊಸ ಫೋಟೋ ಬಿಡುಗಡೆ ಮಾಡಿರುವ ಶಾಸಕ ಭರತ್ ರೆಡ್ಡಿ ಕಡೆಯವರೂ ಕೂಡ ಫೈರಿಂಗ್ ನಡೆಸಿದ್ದಾರೆ ಎಂದು ಆರೋಪಿಸಿದ್ದಾರೆ.

### ಜನಾರ್ದನ್ ರೆಡ್ಡಿ ವಿರುದ್ಧ ಡಿಕೆಶಿ ಕಿಡಿ

ಘಟನೆ ಬಳಿಕ ಬಳ್ಳಾರಿ ತೆರಳಿದ್ದ ಡಿಸಿಎಂ ಡಿಕೆಶಿ ಜನಾರ್ದನ ರೆಡ್ಡಿ ವಿರುದ್ಧ ವಾಗ್ದಾಳಿ ನಡೆಸಿದ್ದು, ಜನಾರ್ದನ ರೆಡ್ಡಿ ಅವರು ದೊಡ್ಡ ಡ್ರಾಮಾ ಮಾಸ್ಟರ್. ಅವರು ಮೊದಲೇ ಸಿನಿಮಾ ನಿರ್ಮಾಪಕರಲ್ಲವೇ? ಡ್ರಾಮಾ ಮಾಡುತ್ತಾರೆ. ಕೋಟೆ ನಿರ್ಮಿಸಿಕೊಂಡು ನೂರು ಜನ ಭದ್ರತಾ ಸಿಬ್ಬಂದಿ ಹೊಂದಿರುವವರನ್ನು ಯಾರು ಹತ್ಯೆ ಮಾಡುತ್ತಾರೆ? ಎಂದು ಪ್ರಶ್ನೆ ಮಾಡಿದ್ದರು.



### ತಪ್ಪು ಮಾಹಿತಿ ನೀಡುವುದು ಸರಿಯಲ್ಲ

ಜನಾರ್ದನ ರೆಡ್ಡಿಯನ್ನು ಕೊಲ್ಲಲು ಬಂದಿದ್ದರೆ ಮಹಜರು ಮಾಡಿಸಬೇಕಿತ್ತು. ಜನಾರ್ದನ ರೆಡ್ಡಿ ಬುಲೆಟ್ ತೋರಿಸುತ್ತಿದ್ದರು, ಅವರಿಗೆ ಹೊಡೆದಿತ್ತಾ ಅದು ತಪ್ಪು ಮಾಹಿತಿ ನೀಡುವುದು ಸರಿಯಲ್ಲ, ಹೇಳಿದ್ದೆಲ್ಲಕ್ಕೂ ಉತ್ತರ ಕೊಡಲ್ಲ ಎಂದು ಕಿಡಿಕಾರಿದ್ದಾರೆ. ಹೀಗೆ ಬಳ್ಳಾರಿ ಬ್ಯಾನರ್ ಗಲಾಟೆ ರಾಜಕೀಯವಾಗಿ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದ್ದು, ಆರೋಪ ಪ್ರತ್ಯಾರೋಪಗಳು ಮುಂದುವರೆದಿದೆ. ಇತ್ತ ಪೊಲೀಸರ ತಲೆದಂಡವಾದರೆ ಮತ್ತೊಬ್ಬ ಪೊಲೀಸರು ಬಳ್ಳಾರಿಗೆ ಬರುತ್ತಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.

# ದಲಿತರ ಬಗ್ಗೆ ಅವಮಾನ ಕಿಡಿಗೇಡಿ ಬಂಧಿಸಲು ಮನವಿ

• ಉದಯವಾಹಿನಿ, ಜೇವರ್ಗಿ

ಗುಲಾಮರ ಅಪ್ಪ ಫೇಸ್ಬುಕನಲ್ಲಿ ಡಾ ಬಿ ಆರ್ ಅಂಬೇಡ್ಕರ್, ದಲಿತರ ಬಗ್ಗೆ ಅವಮಾನ ಮಾಡುತ್ತಿದ್ದು ಕಿಡಿಗೇಡಿಯನ್ನು ಬಂಧಿಸಬೇಕೆಂದು ತಾಲ್ಲೂಕು ದಲಿತಸಂಘಟನೆಗಳ ಸಮನ್ವಯ ಸಮಿತಿಯಿಂದ ವತಿಯಿಂದ ಗೃಹ ಬಸವರಾಜ ಡಾಕ್ಟರ್‌ಜಿ .ಪರಮೇಶ್ವರ್ ಅವರಿಗೆ ಬೆಂಗಳೂರಿನ ಅವರ ನಿವಾಸದಲ್ಲಿ ಮನವಿ ಸಲ್ಲಿಸಿದ್ದಾರೆ ಸಾಮಾಜಿಕ ಜಾಲತಾಣವಾದ ಫೇಸ್ಬುಕ್‌ನಲ್ಲಿ ಗುಲಾಮರ ಅಪ್ಪ, ಹಿಂದು ಹುಲಿ ಅನ್ನುವ ನಕಲಿ ಖಾತೆಗಳಿಗಳಿಂದ ದೇಶದ ಸ್ವತಂತ್ರ ಚಳುವಳಿಯ ನೇತಾರ ಭಗತಸಿಂಗ್ ರವರ ಭಾವಚಿತ್ರ ಬಳಸಿಕೊಳ್ಳುವ ಮುಖಾಂತರ ಸಂವಿಧಾನ ಶಿಲ್ಪಿ, ಶೋಷಿತರ ಆಶಾಕಿರಣ, ಡಾ.ಬಿ.ಆರ್ ಅಂಬೇಡ್ಕರ ರವರ ವಿದ್ಯಾಭ್ಯಾಸ, ಕುಟುಂಬದ ಬಗ್ಗೆ ಅವಹೇಳನ, ಸಂವಿಧಾನ ಕರಡು ಸಮಿತಿಯ ಬಗ್ಗೆ, ಡಾ. ಅಂಬೇಡ್ಕರ ರವರ ಕೊಡುಗೆ ಗಿಂತಲು ಬಿ.ಎನ್ ರಾವ್ ರವರ ಪಾತ್ರ ದೊಡ್ಡದು ಎನ್ನುವ ರೀತಿಯಲ್ಲಿ ಈ ದೇಶದ ಬಹುಸಂಖ್ಯಾತರ ಆಶಾಕಿರಣವಾಗಿದ್ದ ಡಾ. ಬಿ.ಆರ್ ಅಂಬೇಡ್ಕರ ರವರಿಗೆ ಅವಹೇಳನ ಮಾಡುವುದು, ದಲಿತ, ಶೋಷಿತರ ಸ್ವಾಭಿಮಾನದ ಯುದ್ಧವಾದ ಭೀಮಾ ಕೋರೆಗಾಂವ್ ವಿಜಯೋತ್ಸವದ ಬಗ್ಗೆ ಅವಹೇಳನ ಮತ್ತು ಅಸಭ್ಯ ಎನ್ನುವ ರೀತಿಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ಬಿಂಬಿಸುವುದು, ಪ್ರಭಾವಿ ದಲಿತ ರಾಜಕಾರಣಿಯಾದ ಸನ್ಮಾನ್ಯ ಶ್ರೀ ಪ್ರೀಯಾಂಕ ಖರ್ಗೆ ಯವರ ಬಗ್ಗೆ ಕೆಲವು ಸನ್ನಿವೇಶಗಳ ಪೋಟೊಗಳನ್ನು ಬಳಸಿಕೊಂಡು ಅಶ್ಲೀಲ ಪದಗಳಿಂದ ಈ ಖಾತೆಯ ಮೂಲಕ ಅವಮಾನಕರ ರೀತಿಯ ಪೋಸ್ಟ್‌ಗಳನ್ನು ಹಾಕುವದು, ದಲಿತ ಸಂಘಟನೆಗಳು ಮತ್ತು ದಲಿತ ನಾಯಕರನ್ನು ನೀಲಿ ಪಾರಿವಾಳಗಳು, ಇವರೆಲ್ಲರೂ ಗುಲಾಮರು ಎನ್ನುವ ರೀತಿಯಲ್ಲಿ ದಿನನಿತ್ಯ ಒಂದಲ್ಲ ಒಂದು ವಿಷಯದ ಬಗ್ಗೆ ಈ ನಕಲಿ ಖಾತೆಯ ಮೂಲಕ ಪೋಸ್ಟ್ ಮಾಡುತ್ತ ಈ ದೇಶದ ಅಗ್ರಗಣ್ಯ ನಾಯಕ, ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ರವರಿಗೆ ಮತ್ತು ಬಹು ಸಂಖ್ಯಾತರಿಗೆ ಅವಮಾನ ಮಾಡುತ್ತಿದ್ದಾನೆ ಗುಲಾಮರ ಅಪ್ಪ ಫೇಸ್ಬುಕ್ ಕಿಡಿಗೇಡಿ ಬಂಧಿಸಿ ದೇಶದಿಂದ ಗಡಿಪಾರು ಮಾಡಬೇಕೆಂದು ದಲಿತ ಸಂಘಟನೆಗಳ ಸಮನ್ವಯ ಸಮಿತಿ ಆಗ್ರಹಿಸಿದ್ದಾರೆನಾಗರಿಕರಿಗೆ ಪಗತಿಪರ ಚಿಂತಕರಿಗೆ ಮತ್ತು ಶೋಷಿತ ಸಮುದಾಯದವರ ಭಾವನೆಗಳಿಗೆ ದಕ್ಕೆ ತರುವಂತೆ ಪ್ರತಿದಿನ ಅವಮಾನಕರ ಪೋಸ್ಟ್‌ಗಳನ್ನು ಹಾಕುವದರ ಮುಖಾಂತರ ಸಮ ಸಮಾಜದಲ್ಲಿ ಕೋಮು ವಿಷಬೀಜ ಬಿತ್ತುತ್ತಿರುವ ಸಾಮಾಜಿಕ ಜಾಲತಾಣದ ಫೇಸ್ಬುಕ್ ನಕಲಿ ಖಾತೆಗಳಿಗೆ ಸ್ವತಂತ್ರ್ಯ ಚಳುವಳಿಯ ನೇತಾರ ಭಗತಸಿಂಗ್ ರವರ ಭಾವಚಿತ್ರ ಬಳಸುತ್ತಿರುವ ಗುಲಾಮರ ಅಪ್ಪ ಮತ್ತು ಹಿಂದು ಹುಲಿ ಖಾತೆಗಳನ್ನು ಇಷ್ಟಪಡುವವರ, ಕಾಮೆಂಟ್ ಮಾಡುವವರ ಮುಖಾಂತರ ಆ ಸುಳ್ಳು ಖಾತೆಗಳನ್ನು ನಿಷೇಧಿಸುವುದರ ಜೊತೆಗೆ ಅವನ್ನು ನಿರ್ವಹಣೆ ಮಾಡುವವರ ವಿರುದ್ಧ, ಆ ಖಾತೆಗಳನ್ನು ಸಮರ್ಥಿಸಿ ಕೊಳ್ಳುತ್ತಿರುವ ಡಾ. ಅಂಬೇಡ್ಕರ ವಿಚಾರದಾರೆಯ ವಿರೋಧಿಗಳ ಪ್ರಚೋದನೆಕಾರಿ ನಡೆಯ ಬಗೆ ಸರಕಾರ ತಕ್ಷಣ ಎಚ್ಚೆತ್ತುಕೊಂಡು ಸುಳ್ಳು ಖಾತೆಗಳನ್ನು, ತನಿಖೆ ಮಾಡಿ ತಪ್ಪಿತಸ್ಥರನ್ನು ಬಂಧಿಸಿ ಕಠಿಣ ಶಿಕ್ಷೆಗೆ ದಲಿತ ಸಂಘಟನೆಗಳ ಸಮನ್ವಯ ಸಮಿತಿ ಸಂಘಟನೆ ವತಿಯಿಂದ ಒತ್ತಾಯಿಸಲಾಯಿತು.


ಉದಯವಾಹಿನಿ ಚಿತ್ರ

# ಮುಖ್ಯರಸ್ತೆ ಅಗಲೀಕರಣಕ್ಕೆ ಜಿಲ್ಲಾಧಿಕಾರ ಮಟ್ಟದ ಪರಿಶೀಲನೆ

• ಉದಯವಾಹಿನಿ, ಆಳಂದ

ಪಟ್ಟಣದ ಹೃದಯಭಾಗದ ಹಳೆಯ ತಹಶೀಲ್ದಾರ್ ಕಚೇರಿಯಿಂದ ದರ್ಗಾ ಚೌಕ್ ರಾಜ್ಯ ಹೆದ್ದಾರಿವರೆಗೆ ನಡೆಯುತ್ತಿರುವ 1.4 ಕಿಲೋಮೀಟರ್ ಉದ್ದದ ಮುಖ್ಯ ರಸ್ತೆ ಅಗಲೀಕರಣ ಕಾರ್ಯ ಪ್ರಗತಿಯಲ್ಲಿರುವ ಹಿನ್ನೆಲೆಯಲ್ಲಿ, ಕಲಬುರಗಿ ಜಿಲ್ಲಾ ಪೌರಾಡಳಿತ ಯೋಜನಾ ನಿರ್ದೇಶಕ ಮುನ್ನಾವರ ದೌಲಾ ಅವರು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯ ಪರಿಶೀಲನೆ ನಡೆಸಿದರು. ರಸ್ತೆ ಅಗಲೀಕರಣ ಕಾರ್ಯದಲ್ಲಿ ಸಾರ್ವಜನಿಕರು ನೀಡುತ್ತಿರುವ ಸಹಕಾರಕ್ಕೆ ಅವರು ಮೆಚ್ಚುಗೆ ವ್ಯಕ್ತಪಡಿಸಿ, ಯೋಜನೆ ಪೂರ್ಣಗೊಂಡ ಬಳಿಕ ಮೂಲಸೌಕರ್ಯಗಳ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸ್ಥಳ ಪರಿಶೀಲನೆ ವೇಳೆ ಜೆಸಿಬಿ ಮತ್ತು ಹಿಟಾಚಿ ಯಂತ್ರಗಳ ಮೂಲಕ ನಡೆಯುತ್ತಿರುವ ಕಟ್ಟಡ ತೆರವು ಕಾರ್ಯ, ರಸ್ತೆ ಅಗಲೀಕರಣದ ಅಗಲ, ಸಂಚಾರ ವ್ಯವಸ್ಥೆ ಹಾಗೂ ಸಾರ್ವಜನಿಕರಿಗೆ ಉಂಟಾಗುವ ತಾತ್ಕಾಲಿಕ ಅಸೌಕರ್ಯಗಳ ಬಗ್ಗೆ ಮಾಹಿತಿ ಪಡೆದ ಯೋಜನಾ ನಿರ್ದೇಶಕರು, ಕಾಮಗಾರಿ ವೇಗದ ಜೊತೆಗೆ ಗುಣಮಟ್ಟಕ್ಕೂ ಆದ್ಯತೆ ನೀಡಬೇಕು ಎಂದು ಹೇಳಿದರು. ರಸ್ತೆ ಅಗಲೀಕರಣ ಕೇವಲ ವಿಸ್ತರಣೆಗಾಗಿ ಸೀಮಿತವಾಗಬಾರದು ಮುಂದಿನ ಹಲವು ವರ್ಷಗಳ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಸಮಗ್ರ ಯೋಜನೆಯಡಿ ಕೆಲಸ ನಡೆಯಬೇಕು ಎಂದು ಅವರು ಸ್ಪಷ್ಟಪಡಿಸಿದರು.


ಉದಯವಾಹಿನಿ ಚಿತ್ರ

**ನೀಲ ನಕ್ಷೆಯಂತೆ ಮುಂದಿನ ಹಂತದ ಕಾಮಗಾರಿ:**

ರಸ್ತೆ ಅಗಲೀಕರಣ ಪೂರ್ಣಗೊಂಡ ಬಳಿಕ ಅಗತ್ಯವಿರುವ ಕಡೆಗಳಲ್ಲಿ ಚರಂಡಿ ನಿರ್ಮಾಣ, ನೀರು ಸರಾಗವಾಗಿ ಹರಿಯಲು ಸಣ್ಣ ಸೇತುವೆಗಳ ನಿರ್ಮಾಣ ಹಾಗೂ ರಸ್ತೆ ಬದಿಯಲ್ಲಿ ವಿದ್ಯುತ್ ದೀಪಗಳ ಅಳವಡಿಕೆ ಕುರಿತು ಈಗಾಗಲೇ ಸಿದ್ಧಪಡಿಸಿರುವ ನೀಲ ನಕ್ಷೆಯಂತೆ ಕಾರ್ಯ ಕೈಗೊಳ್ಳುವಂತೆ ಮುನ್ನಾವರ ದೌಲಾ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಳೆಗಾಲದಲ್ಲಿ ನೀರು ನಿಲ್ಲುವ ಸಮಸ್ಯೆ ಉಂಟಾಗದಂತೆ ವೈಜ್ಞಾನಿಕವಾಗಿ ಚರಂಡಿ ವ್ಯವಸ್ಥೆ ರೂಪಿಸುವುದು ಅಗತ್ಯವೆಂದು ಅವರು ಅಭಿಪ್ರಾಯಪಟ್ಟರು.

ಈ ಸಂಬಂಧ ಜಿಲ್ಲಾ ನಗರ ಅಭಿವೃದ್ಧಿ ಕೋಶದ ಕಾರ್ಯಪಾಲಕ ಅಭಿಯಂತರ ಸೋಮು ರಾಠೋಡ ಅವರಿಂದ ವಿವರವಾದ ಮಾಹಿತಿ ಕಲೆಹಾಕಿದ ಅವರು, ತಾಂತ್ರಿಕ ಅಂಶಗಳು, ವೆಚ್ಚ ಅಂದಾಜು ಮತ್ತು ಹಂತ ಹಂತದ ಕಾರ್ಯಯೋಜನೆ ಕುರಿತು ಚರ್ಚಿಸಿದರು.

# ಸರಕಾರದ ಮಟ್ಟದಲ್ಲಿ ಚರ್ಚಿಸಿ ಇತ್ಯರ್ಥ ಪಡಿಸಲು ರೈತರ ಆಗ್ರಹ

• ಉದಯವಾಹಿನಿ, ಸುಳ್ಯ

ರೈತರಿಗೆ ಬೆಳೆ ವಿಮೆ ಪರಿಹಾರದಲ್ಲಿ ತಾರತಮ್ಯವಾಗಿದ್ದು ಮಲೆನಾಡ ಹಿತರಕ್ಷಣಾ ವೇದಿಕೆ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಸಭೆಯ ಹಿನ್ನಲೆಯಲ್ಲಿ ಶಾಸಕಿ ಭಾಗೀರಥಿ ಮುರುಳ್ಯ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಿಗಳು ಮತ್ತು ರೈತರ ಸಭೆಯು ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಿತು. ಸಭೆಯಲ್ಲಿ ಮಾತನಾಡಿದ ಮಲೆನಾಡ ಹಿತರಕ್ಷಣಾ ವೇದಿಕೆ ಸಂಚಾಲಕ ಕಿಶೋರ್ ಕುಮಾರ್ ಶಿರಾಡಿ, ಪ್ರತಿವರ್ಷ ಮಳೆಯ ಪ್ರಮಾಣ ಹೆಚ್ಚಾಗುತ್ತಿದ್ದು ಜಿಲ್ಲಾಧಿಕಾರಿಗಳು ಮಳೆ ಪ್ರಮಾಣದಲ್ಲಿ ಮಕ್ಕಳಿಗೆ ರಜೆ ನೀಡುತ್ತಾರೆ ಆದರೆ ಇದೀಗ ಬೆಳೆ ವಿಮೆ ಪರಿಹಾರದಲ್ಲಿ ಮಾತ್ರ ತಾರತಮ್ಯವಾಗಿದೆ ಎಂದು ಹೇಳಿದರು. ನ್ಯಾಯವಾದಿ ಎಂ. ವೆಂಕಪ್ಪ ಗೌಡ ಮಾತನಾಡಿ ಮಳೆ ಪ್ರಮಾಣವನ್ನು ಯಾವ ರೀತಿಯಲ್ಲಿ ಕಲೆಹಾಕಲಾಗುತ್ತದೆ ಮತ್ತು ಯಾವ ತಿಂಗಳಿನಿಂದ ಯಾವ ತಿಂಗಳ ತನಕ ಇದು ಒಂದು ವರ್ಷದ ವಿಮೆ ಅನ್ವಯವಾಗುತ್ತದೆ ಎಂದು ಪ್ರಶ್ನಿಸಿದರು.


ಉದಯವಾಹಿನಿ ಚಿತ್ರ

ಅರಂತೋಡು ಸಹಕಾರಿ ಸಂಘದ ಅಧ್ಯಕ್ಷ ಸಂತೋಷ್ ಕುತ್ತಮೊಟ್ಟೆ ಮಾತನಾಡಿ ಅಧಿಕಾರಿಗಳು ಮಾಡಿದ ತಪ್ಪಿನಿಂದ ಇದೀಗ ರೈತರು ಬಲಿಯಾಗಿದ್ದಾರೆ. ಡಿಸಿಸಿ ಬ್ಯಾಂಕ್‌ನಲ್ಲಿ ನಡೆದ ಸಭೆಯಲ್ಲಿ ವಿಮಾ ಕಂಪನಿಯವರು ಪರಿಷ್ಕೃತ ದತ್ತಾಂಶ ಸರಕಾರ ನೀಡಿದಲ್ಲಿ ಪರಿಹಾರ ನೀಡುವುದಾಗಿ ಒಪ್ಪಿಕೊಂಡಿದ್ದು, ಇದನ್ನು ಸರಕಾರದ ಮಟ್ಟದಲ್ಲಿ ಚರ್ಚಿಸಿ ಇತ್ಯರ್ಥ ಪಡಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ ಸುಳ್ಯ ಸಿ.ಎ ಬ್ಯಾಂಕ್ ಅಧ್ಯಕ್ಷ ವಿಕ್ರಂ ಎ.ವಿ ಧ್ವನಿಗೂಡಿಸಿ 2024, 2025ನೇ ಸಾಲಿನ ಮಳೆ ವರದಿಯನ್ನು ನೀಡಬೇಕು ಹಾಗೂ ನಿರ್ವಹಣೆ ಯಾರು ಎಂಬುವುದನ್ನು ಸ್ಪಷ್ಟ ಪಡಿಸಬೇಕು ಅಲ್ಲದೇ ರೈತರಿಗೆ ಅನ್ಯಾಯವಾದಾಗ ಉಗ್ರ ರೀತಿಯ ಹೋರಾಟ ಮಾಡುವ ಅನಿವಾರ್ಯತೆ ಇದೆ. ಇದೇ ರೀತಿ ಮುಂದಿನ ವರ್ಷವು ತಾರತಮ್ಯವಾದರೇ ರೈತರು ಯಾರು ಕೂಡ ಪಾವತಿ ಮಾಡುವುದಿಲ್ಲ ಎಂದು ಹೇಳಿದರು.

ಸುದರ್ಶನ್ ಪಾತಿಕಲ್ಲ, ಹರೀಶ್ ಕಂಜಿಪಿಲಿ ,ಪುರುಷೋತ್ತಮ ಕೋಲ್ಚಾರ್, ರಮಾನಂದ ಎಣ್ಣೆಮಜಲು ಮಾತನಾಡಿ ರೈತರಿಗೆ ಆದ ಅನ್ಯಾಯ ಸರಿಪಡಿಸಬೇಕು, ಮಳೆ ದತ್ತಾಂಶವನ್ನು ಗಮನಿಸಿದಾಗಲೇ ಇದರಲ್ಲಿನ ಸಮಸ್ಯೆ ಆಗಿರುವುದು ಕಾಣಿಸುತ್ತದೆ ಎಂದು ಹೇಳಿದರು.

# ಪರೀಕ್ಷೆಯೋ... ಪ್ರವಾಸವೋ... ಗೊಂದಲ

## ಶಿಕ್ಷಣ ಸಂಸ್ಥೆಗಳು, ಶಾಲೆಗಳು ಜ. ಮೂರನೇ ವಾರ 4–5 ದಿನ ಪ್ರವಾಸ ಆಯೋಜಿಸಿವೆ, ಮಕ್ಕಳ ಶೈಕ್ಷಣಿಕ ಪ್ರವಾಸ ಅವಧಿ ವಿಸ್ತರಣೆಗೆ ಆಕ್ಷೇಪ

• ಉದಯವಾಹಿನಿ, ಧಾರವಾಡ

ಬೆಳಗಾವಿ ಅಧಿವೇಶನದ ಕಾರಣಕ್ಕೆ ಶಾಲಾ ಶಿಕ್ಷಣ ಇಲಾಖೆಯು ಮಕ್ಕಳ ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಜನವರಿ 21ರ ವರೆಗೂ ಅವಕಾಶ ಕಲ್ಪಿಸಿದೆ. ಇದರಿಂದಾಗಿ ವಿದ್ಯಾರ್ಥಿಗಳು, ಪಾಲಕರು ಪ್ರವಾಸವೋ? ಪರೀಕ್ಷೆಯೋ? ಎಂಬ ಗೊಂದಲಕ್ಕೆ ಬಿದ್ದಿದ್ದಾರೆ. ಪ್ರತಿ ವರ್ಷ ಡಿಸೆಂಬರ್ ಒಳಗಾಗಿ ಶೈಕ್ಷಣಿಕ ಪ್ರವಾಸ ಮುಗಿಯುತ್ತಿತ್ತು. ಆದರೆ, ಪ್ರಸಕ್ತ ವರ್ಷ ಬೆಳಗಾವಿ ಅಧಿವೇಶನದ ಹಿನ್ನಲೆಯಲ್ಲಿ ಸಾರಿಗೆ ಸಂಸ್ಥೆಗಳು ಅನುಮತಿ ನಿರಾಕರಿಸಿದ್ದರಿಂದ ಬೆಳಗಾವಿ ವಿಭಾಗದ ಶಿಕ್ಷಣ ಇಲಾಖೆಯು ತನ್ನ ವ್ಯಾಪ್ತಿಯ 9 ಶೈಕ್ಷಣಿಕ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳಲು ಅವಧಿ ವಿಸ್ತರಿಸಿ ಷರಾ ಬರೆದಿದೆ. ಹೀಗಾಗಿ ಅದೆಷ್ಟೋ ಶಿಕ್ಷಣ ಸಂಸ್ಥೆಗಳು, ಶಾಲೆಗಳು ಜನವರಿ ಮೂರನೇ ವಾರ 4–5 ದಿನ ಪ್ರವಾಸ ಆಯೋಜಿಸಿವೆ. ಇದು ಮಕ್ಕಳಿಗೆ ಎಷ್ಟು ಅನುಕೂಲ ಆಗಲಿದೆ ಎಂಬ ಪ್ರಶ್ನೆ ಎದುರಾಗಿದೆ.

ಬೆಳಗಾವಿ ವಿಭಾಗ ಮಟ್ಟದಲ್ಲಿ ಈಗಾಗಲೇ ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆಗಳೂ ನಡೆದಿವೆ. ಒಂದರಿಂದ ಒಂಬತ್ತನೇ ತರಗತಿಯ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆ ಬರೆಯಲು ತಯಾರಾಗುತ್ತಿದ್ದಾರೆ. ಇದೇ ಹೊತ್ತಿನಲ್ಲಿ ಪ್ರವಾಸಕ್ಕೆ ಹೊರಟಿರುವುದು ಮಕ್ಕಳ ಮನೋಭಾವದ ಮೇಲೆ ಪರಿಣಾಮ ಬೀರುವುದಂತೂ ಸತ್ಯ ಇದೀಗ ವಿದ್ಯಾರ್ಥಿಗಳಿಗೆ ಪ್ರವಾಸಕ್ಕೆ ಹೋಗುವುದನ್ನು ಬಿಡಲೂ ಮನಸ್ಸಿಲ್ಲ, ಇತ್ತ ಪರೀಕ್ಷೆ ಸಿದ್ಧತೆಯಿಂದ ತಪ್ಪಿಸಿಕೊಳ್ಳಲೂ ಆಸಕ್ತಿ ಇಲ್ಲದೇ ಗೊಂದಲಕ್ಕೆ ಬಿದ್ದಿದ್ದಾರೆ. ಮಕ್ಕಳಿಗೆ ಜನವರಿಯಿಂದ ವಾರ್ಷಿಕ ಪರೀಕ್ಷೆ ಮುಗಿಯುವವರೆಗೂ ಪಠ್ಯ ಚಟುವಟಿಕೆಗಳಿಗೆ ಆದ್ಯತೆ ಕೊಡಬೇಕು. ಅದನ್ನು ಬಿಟ್ಟು ಪ್ರವಾಸಕ್ಕೆ ಹೋಗುವುದಾದರೆ ಹೇಗೆ ಎಂದು ಪಾಲಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

**ಮಕ್ಕಳಿಗೆ ಎಷ್ಟು ಅನುಕೂಲ**



**ಸಾರಿಗೆ ಸಂಸ್ಥೆ ನಡೆಗೆ ಆಕ್ಷೇಪ:** ಬೆಳಗಾವಿ ಅಧಿವೇಶನ 2025, ಡಿಸೆಂಬರ್ 8 ರಿಂದ 19 ರವರೆಗೂ ನಡೆದಿದೆ. ಇದಕ್ಕೆ ಸಾರಿಗೆ ಬಸ್‌ಗಳ ಅಗತ್ಯತೆ ಅಷ್ಟೊಂದಿರಲಿಲ್ಲ. ಆದರೂ ಇದೇ ಕಾರಣ ಮುಂದಿಟ್ಟುಕೊಂಡು ಸಾರಿಗೆ ಸಂಸ್ಥೆಗಳು ಶೈಕ್ಷಣಿಕ ಪ್ರವಾಸಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಲು ಅನುಮತಿ ನೀಡಿಲ್ಲ ಎಂಬುದೂ ಇಲ್ಲಿಹಲವು ಪ್ರಶ್ನೆಗಳನ್ನು ಮೂಡಿಸಿದೆ. ಶೈಕ್ಷಣಿಕ ಪ್ರವಾಸದಿಂದ ಸಾರಿಗೆ ಸಂಸ್ಥೆಗೆ ಅಷ್ಟೊಂದು ಲಾಭ ಇಲ್ಲದ್ದರಿಂದ ಈ ತೀರ್ಮಾನಕ್ಕೆ ಬಂದಿರಬಹುದು ಎಂಬ ಊಹಾಪೋಹಗಳೂ ಇವೆ. ಸಾರಿಗೆ ಸಂಸ್ಥೆಗಳು ಒಪ್ಪಿಗೆ ನೀಡದಿರುವುದನ್ನೇ ಉಲ್ಲೇಖಿಸಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಶಿಕ್ಷಣ ಇಲಾಖೆಗೆ ಮನವಿ ಸಲ್ಲಿಸಿದ್ದವು ಎಂಬುದು ಈಗ ಚರ್ಚಾ ವಸ್ತುವಾಗಿದೆ.ಏನೇ ಆಗಲಿ ಶೈಕ್ಷಣಿಕ ಪ್ರವಾಸ ಎಂಬುದು ಕಲಿಕೆಯ ಒಂದು ಭಾಗವಷ್ಟೇ. ಅದು ಸಕಾಲದಲ್ಲಿ ನಡೆಯಬೇಕು. ಅದನ್ನು ಬಿಟ್ಟು ಮಕ್ಕಳು ಓದುವ ಅವಧಿಯಲ್ಲಿ ಪ್ರವಾಸಕ್ಕೆ ಹೋಗುವುದು ಅಪ್ರಸ್ತುತ. ಮಕ್ಕಳ ಮನಸ್ಸು ಚಂಚಲಗೊಳ್ಳಲಿದೆ ಎಂಬುದು ಶಿಕ್ಷಣ ತಜ್ಞರ ಅಭಿಪ್ರಾಯ.

> ಅಧಿವೇಶನದ ಸಂದರ್ಭ ಸಾರಿಗೆ ಸಂಸ್ಥೆಗಳು ಪ್ರವಾಸಕ್ಕೆ ಅನುಮತಿ ನೀಡಿಲ್ಲವೆಂದು ಶಿಕ್ಷಕರ ಸಂಘಗಳು ಅವಧಿ ವಿಸ್ತರಣೆಗೆ ಮನವಿ ಸಲ್ಲಿಸಿದ್ದವು. ಇದನ್ನು ಪುರಸ್ಕರಿಸಿ ಒಪ್ಪಿಗೆ ನೀಡಲಾಗಿದೆ. ಪರೀಕ್ಷೆಗೆ ಯಾವುದೇ ತೊಂದರೆ ಆಗದಂತೆ ಕ್ರಮ ವಹಿಸಲು ಸೂಚಿಸಲಾಗಿದೆ.
>
> –ಡಾ.ಈಶ್ವರ ಉಳ್ಳಾಗಡ್ಡಿ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರು

> ಶೈಕ್ಷಣಿಕ ಪ್ರವಾಸ ಡಿಸೆಂಬರ್ ಒಳಗಾಗಿ ಮುಗಿಯಬೇಕು. ಆದರೆ ಕೆಲ ಶಾಲೆಗಳು ಜನವರಿ 17ರಿಂದ ಹೈದರಾಬಾದ್ ಪ್ರವಾಸ ಹೋಗಲು ನಿರ್ಧರಿಸಿವೆ. ಇದು ಮಕ್ಕಳ ಓದನ್ನು 8–10 ದಿನ ಕಸಿದುಕೊಳ್ಳಲಿದೆ. ಈ ಬಗ್ಗೆ ಇಲಾಖೆ ಆದೇಶ ಪರಿಷ್ಕರಿಸಬೇಕು.
>
> –ಶ್ರೀಧರ ರಡ್ಡೇರ್, ಮಕ್ಕಳ ಪಾಲಕರು

## ದಿನ ಭವಿಷ್ಯ

| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
|---|---|---|
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ**: ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಆಲೋಚಿಸದೆ ನೀವು ಯಾರಿಗೂ ತಮ್ಮ ಹಣವನ್ನು ಕೊಡಬಾರದು, ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ದೊಡ್ಡ ತೊದರೆಗೊಳಗಾಗಬಹುದು. ನೆರೆಮನೆಯವರ ಜೊತಗಿನ ಜಗಳ ನಿಮ್ಮ ಮನಸ್ಸು ಕೆಡಿಸುತ್ತದೆ. ಆದರೆ ನಿಮ್ಮ ಸಹನೆ ಕಳೆದುಕೊಳ್ಳಬೇಡಿ.

**ವೃಷಭ**: ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ. ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ, ವಿಶ್ವಾಸ ಮೂಡುತ್ತದೆ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಅನೇಕ ಸಮಸೆಗಳನ್ನು ದೂರ ಮಾಡಬಹುದು.

**ಮಿಥುನ**: ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ, ಆನಂದವನ್ನು ಹಂಚಿಕೊಳ್ಳಿ. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು. ನಿಮ್ಮ ಸಂಗಾತಿಯ ಜೊತೆಗಿನ ಸಂಬಂಧ ನಿಮ್ಮ ಕಚೇರಿ ಕೆಲಸದ ಕಾರಣ ಹಾಳಾಗಬಹುದು.

**ಕರ್ಕಾಟಕ**: ಆರೋಗ್ಯದ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕು. ವ್ಯಾಪಾರ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಈ ಅವಧಿ ಹೊಸ ಯೋಜನೆಗಳು ಹಾಗೂ ಆಲೋಚನೆಗಳ ಬಗ್ಗೆ ನಿಮ್ಮ ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಒಳ್ಳೆಯದಾಗಿದೆ. ಇಂದು ಪ್ರೀತಿಪಾತ್ರರಿಗೆ ನಿಮ್ಮ ವಿಚಿತ್ರ ವರ್ತನೆಯ ಜೊತೆ ಏಗಲು ಅತ್ಯಂತ ಕಷ್ಟವಾಗುತ್ತದೆ.

**ಸಿಂಹ**: ನಿಮ್ಮಲ್ಲಿ ಇಂದು ಚುರುಕುತನವನ್ನು ನೋಡಬಹುದು. ನಿಮ್ಮ ಆರೋಗ್ಯವು ಇಂದು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಯಾವುದೇ ಅಪರಿಚಿತ ವ್ಯಕ್ತಿಯ ಸಲಹೆಯಿಂದ ಎಲ್ಲಾದರೂ ಹೂಡಿಕೆ ಮಾಡಿರುವ ಜನರಿಗೆ, ಇಂದು ಆ ಹೂಡಿಕೆಯಿಂದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ.

**ಕನ್ಯಾ**: ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು ಮತ್ತು ನಿಮ್ಮ ಭಯವನ್ನು ಸಾಧ್ಯವಾದಷ್ಟೂ ಬೇಗ ತೊಡೆದುಹಾಕಬೇಕು ಏಕೆಂದರೆ ಇವು ತಕ್ಷಣವೇ ನಿಮ್ಮ ಆರೋಗ್ಯವನ್ನು ಬಾಧಿಸಬಹುದು ಮತ್ತು ಒಳ್ಳೆಯ ಆರೋಗ್ಯವನ್ನು ಅನುಭವಿಸುವ ನಿಮ್ಮ ಹಾದಿಯಲ್ಲಿ ಅಡ್ಡ ಬರಬಹುದು.

**ತುಲಾ**: ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ, ಕೆಲಸಗಳನ್ನು ಇನ್ನೊಂದು ದಿನಕ್ಕೆ ವರ್ಗಾಯಿಸಿ. ನಿಮ್ಮ ಹೆಚ್ಚುವರಿ ಹಣವನ್ನು ಒಂದು ಸುರಕ್ಷಿತ ಸ್ಥಳದಲ್ಲಿರಿಸಿ, ಇದು ಮುಂದಿನ ಕಾಲದಲ್ಲಿ ನಿಮಗೆ ಒಳ್ಳೆಯ ಆದಾಯ ತರುತ್ತದೆ.

**ವೃಶ್ಚಿಕ**: ಸಂತೋಷದ ದಿನಕ್ಕಾಗಿ ಮಾನಸಿಕ ಒತ್ತಡವನ್ನು ತಪ್ಪಿಸಿ. ನಿಮ್ಮ ತಾಯಿ ಅಥವಾ ತಂದೆಯ ಆರೋಗ್ಯಕ್ಕಾಗಿ ನೀವು ಇಂದು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗಬಹುದು. ಇದು ನಿಮ್ಮ ಹಣಕಾಸಿನ ಸ್ಥಿತಿಯನ್ನು ಹದಗೆಡಿಸುತ್ತದೆ ಆದರೆ ಸಂಬಂಧವನ್ನು ಬಲಪಡಿಸುತ್ತದೆ.

**ಧನಸ್ಸು**: ಲಕ್ಕವಿಲ್ಲದಷ್ಟು ಗಾಬರಿಗಳು ನಿಮ್ಮ ಪ್ರತಿರೋಧಕತೆ ಮತ್ತು ಆಲೋಚನಾ ಶಕ್ತಿಯನ್ನು ದುರ್ಬಲಗೊಳಿಸಬಹುದು. ಸಕಾರಾತ್ಮಕ ಚಿಂತನೆಯ ಜೊತೆ ಈ ರೋಗದ ವಿರುದ್ಧ ಹೋರಾಡಲು ಪ್ರಯತ್ನಿಸಿ. ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಪ್ರಬಲ ಸಾಧ್ಯತೆ ಇದೆ.

**ಮಕರ**: ಮನರಂಜನೆ, ಮೋಜಿನ ಒಂದು ದಿನ. ಆಪ್ತ ಸ್ನೇಹಿತನ ಸಹಾಯದಿಂದ ಇಂದು ಕೆಲವು ವ್ಯಾಪಾರಿಗಳಿಗೆ ಹಣದ ಲಾಭವಾಗುವ ಸಾಧ್ಯತೆ ಇದೆ. ಈ ಹಣ ನಿಮ್ಮ ಸಮಸೆಗಳನ್ನು ದೂರ ಮಾಡಬಹುದು. ಹತ್ತಿರದ ಗೆಳೆಯರು, ಸ್ನೇಹಿತರು ಆ ಕ್ರಮಣಕಾರಿಯಾಗುತ್ತಾರೆ ಪಡೆಯಲು, ನಿಮಗೆ ಜೀವನವನ್ನು ಕಠಿಣಗೊಳಿಸುತ್ತಾರೆ.

**ಕುಂಭ**: ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ. ಯಾವುದೇ ವ್ಯಕ್ತಿಯ ಸಹಾಯವಿಲ್ಲದೆ ನೀವು ಹಣವನ್ನು ಗಳಿಸಲು ಸಾಧ್ಯವಾಗುತ್ತದೆ.

**ಮೀನ**: ಕುಟುಂಬದಲ್ಲಿ ಸಂತೋಷವನ್ನು ಪುನಃಸ್ಥಾಪಿಸಲು ನೀವು ಸಾಧ್ಯವಾದಷ್ಟೂ ಬೇಗ ಇದರಿಂದ ಹೊರಬರುವ ಅಗತ್ಯವಿದೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಮನೆಯ ವಿಷಯಗಳು, ಬಾಕಿಯಿರುವ ಗೃಹ ಕೃತ್ಯಗಳನ್ನು ಪೂರೈಸಲು ಒಂದು ಅನುಕೂಲಕರ ದಿನ.

### ಅಬಕಾರಿ ಸನ್ನದುಗಳ ಇ-ಹರಾಜು ಪ್ರಕ್ರಿಯೆ ಕುರಿತು ಸಾರ್ವಜನಿಕರಿಗೆ ತರಬೇತಿ, ಹೊಸದಾಗಿ ಮೀಸಲಾತಿಗೆ ಅವಕಾಶ

# ಹರಾಜು ಪ್ರಕ್ರಿಯೆ ಸರಳ, ಸುಲಭ: ಬಿ. ಮಾದೇಶ್

• ಉದಯವಾಹಿನಿ, ಚಿತ್ರದುರ್ಗ


ಉದಯವಾಹಿನಿ ಚಿತ್ರ

**ನೋಂದಣಿಗೆ ಶುಲ್ಕ ನಿಗಧಿ**

ರಾಜ್ಯದ ವಿವಿಧ ಜಿಲ್ಲೆಗಳ ವ್ಯಾಪ್ತಿಯಲ್ಲಿ ಹಂಚಿಕೆಯಾಗದ ಮತ್ತು ಸ್ಥಗಿತಗೊಂಡಿರುವ 569 ಮದ್ಯದಂಗಡಿ ಸನ್ನದುಗಳ ಹರಾಜು ಪ್ರಕ್ರಿಯೆಗೆ ಚಾಲನೆ ದೊರೆತಿದ್ದು, ಈ ಸನ್ನದುಗಳನ್ನು ಪಾರದರ್ಶಕ ಇ-ಹರಾಜು ಮೂಲಕ ಹಂಚಿಕೆ ಮಾಡಲಾಗುತ್ತದೆ. ಇದೇ ಜ.13 ರಿಂದ 20 ರವರೆಗೆ ಹರಾಜು ಪ್ರಕ್ರಿಯೆ ಆನ್‌ಲೈನ್‌ನಲ್ಲಿ ನಡೆಯುವುದರಿಂದ ಕುಳಿತಲ್ಲೇ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶವಿದೆ ಎಂದು ಹೊಸಪೇಟೆ ವಿಭಾಗದ ಅಬಕಾರಿ ಜಂಟಿ ಆಯುಕ್ತ ಬಿ.ಮಾದೇಶ್ ಹೇಳಿದರು. ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಅಬಕಾರಿ ಇಲಾಖೆ ವತಿಯಿಂದ ಅಬಕಾರಿ ಸನ್ನದುಗಳ ಇ-ಹರಾಜು ಪ್ರಕ್ರಿಯೆ ಕುರಿತು ಸಾರ್ವಜನಿಕರಿಗೆ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಸ್ಥಗಿತಗೊಂಡಿರುವ ಅಬಕಾರಿ ಸನ್ನದುಗಳನ್ನು ಕಾರ್ಯಾರಂಭ ಮಾಡಲು ಇ-ಹರಾಜು ಪ್ರಕ್ರಿಯೆಗೆ ಕ್ರಮ ಕೈಗೊಂಡಿದ್ದು, ಹೊಸದಾಗಿ ಮೀಸಲಾತಿಯನ್ನೂ ಕಲ್ಪಿಸಿದೆ. ಇ-ಹರಾಜು ಪ್ರಕ್ರಿಯೆನ್ನು ಭಾರತ ಸರ್ಕಾರದ ಎಂಎಸ್‌ಟಿಸಿ ಲಿಮಿಟೆಡ್‌ನ ಇ-ಪೋರ್ಟಲ್‌ನಲ್ಲಿ ನಡೆಸಲಾಗುತ್ತದೆ. ಹರಾಜಿನಲ್ಲಿ ಭಾಗವಹಿಸಲು ಬಯಸುವವರು ಎಂಎಸ್‌ಟಿಸಿ ಪೋರ್ಟಲ್‌ನಲ್ಲಿ ನೋಂದಾಯಿಸಿ ಕೊಳ್ಳಬೇಕು. ಪ್ರತಿ ನೋಂದಣಿಗೆ ರೂ. 1,000 ಶುಲ್ಕ ನಿಗಧಿಪಡಿಸಲಾಗಿದೆ ಎಂದು ಹೇಳಿದರು.

ಚಿತ್ರದುರ್ಗ ಜಿಲ್ಲೆಯಲ್ಲಿ ಇದೇ ಜ.19ರಂದು ಬೆಳಿಗ್ಗೆ 10 ರಿಂದ 12ರವರೆಗೆ ಅಬಕಾರಿ ಸನ್ನದುಗಳ ಹರಾಜು ಪ್ರಕ್ರಿಯೆ ನಡೆಯಲಿದೆ. ಹರಾಜು ಪ್ರಕ್ರಿಯೆಯು ಆನ್‌ಲೈನ್‌ನಲ್ಲಿ ನಡೆಯುವುದರಿಂದ ಕುಳಿತಲ್ಲಿಯೇ ರಾಜ್ಯದ ಯಾವುದೇ ಜಿಲ್ಲೆಯ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಚಿತ್ರದುರ್ಗ ಜಿಲ್ಲೆಯಲ್ಲಿ 12 ಸಿಎಲ್-2ಎ (ಚಿಲ್ಲರೆ ಮದ್ಯ ಮಾರಾಟ) ಅಬಕಾರಿ ಸನ್ನದಗಳು ಹರಾಜು ಪ್ರಕ್ರಿಯೆ ಲಭ್ಯವಿದ್ದು, ಚಿತ್ರದುರ್ಗ ತಾಲ್ಲೂಕು-2, ಹೊಳಲ್ಕೆರೆ-2, ಹೊಳಲ್ಕೆರೆ-2, ಚಳ್ಳಕೆರೆ-2, ಹಿರಿಯೂರು-2, ಮೊಳಕಾಲ್ಮುರು ತಾಲ್ಲೂಕು-2 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 12 ಅಬಕಾರಿ ಸನ್ನದುಗಳು ಲಭ್ಯವಿದೆ ಎಂದು ಹೇಳಿದರು. ತರಬೇತಿ ಕಾರ್ಯಕ್ರಮದಲ್ಲಿ ತಾಂತ್ರಿಕ ವಿಷಯಗಳ ಎಂಎಸ್‌ಟಿಸಿ ತಂಡದ ಸತೀಶ್ ಕುಮಾರ್ ಹಾಗೂ ರವಿಕುಮಾರ್ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಅಬಕಾರಿ ಉಪಾಧೀಕ್ಷಕರಾದ ಸುರೇಂದ್ರಚಾರ್, ರಾಜೇಂದ್ರ ಹೂಗಾರ್, ಅಬಕಾರಿ ಅಧೀಕ್ಷಕ ಡಿ.ಜಿ.ಕಿರಣ್ ಸೇರಿದಂತೆ ಅಬಕಾರಿ ಇಲಾಖೆ ಅಧಿಕಾರಿಗಳು, ಸಾರ್ವಜನಿಕರು ಇದ್ದರು.

**ಅರ್ಜಿಗೆ ರೂ.50,000 ಶುಲ್ಕ**

ಒಂದು ನೋಂದಣಿ ಅಡಿಯಲ್ಲಿ ಹಲವು ಸನ್ನದುಗಳಿಗೆ ಅರ್ಜಿ ಸಲ್ಲಿಸಬಹುದು. ಆದರೆ ಪ್ರತಿ ಅರ್ಜಿಗೆ ರೂ.50,000 ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿ ಮಾಡಬೇಕು. ಅರ್ಜಿ ಶುಲ್ಕವನ್ನು ವಾಪಸ್ ಮಾಡಲಾಗುವುದಿಲ್ಲ. ಜತೆಗೆ ಪ್ರತಿ ಸನ್ನದಿಗೆ ಸಲ್ಲಿಸುವ ಅರ್ಜಿಯ ಜತೆಗೆ ಸನ್ನದಿನ ಮೂಲ ಬೆಲೆಯ ಶೇ.2ರಷ್ಟು ಇಎಂಡಿ ಮೊತ್ತ ಭರಿಸಬೇಕಾಗುತ್ತದೆ ಎಂದು ತಿಳಿಸಿದರು.

ಹೆಚ್ಚುವರಿ ರಾಜಸ್ವ ಸಂಗ್ರಹಣೆ, ಇ-ಹರಾಜು ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ಸಾರ್ವಜನಿಕರಿಗೆ ಅವಕಾಶ ನೀಡಲು ಇ-ಹರಾಜು ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಜಾರಿಗೆ ಮಾಡಿದೆ. ಎರಡು ತರಹದ ಲೈಸೆನ್ಸ್‌ಗಳನ್ನು ನೀಡುತ್ತಿದ್ದು, ಸಿಎಲ್-2ಎ (ಚಿಲ್ಲರೆ ಮದ್ಯ ಮಾರಾಟ) ಮತ್ತು ಸಿಎಲ್-9ಎ (ರಿಫ್ರೆಶ್‌ಮೆಂಟ್ ರೂಮ್ (ಬಾರ್) ಎಂಬ ಸನ್ನದುಗಳಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಸ್ತುತ ಸಿಎಲ್-2ಎ 12 ಸನ್ನದುಗಳ ಮಾತ್ರ ಹರಾಜಿಗೆ ಅವಕಾಶವಿದೆ.

– ಡಾ.ಆಶಾಲತಾ, ಅಬಕಾರಿ ಉಪ ಆಯುಕ್ತೆ

## ಮುಂದಿನ ದಿನಗಳಲ್ಲಿ ಗುತ್ತಿಗೆದಾರರ ಸಭೆ ನಡೆಸಿ

• ಉದಯವಾಹಿನಿ, ಹುಕ್ಕೇರಿ



ಅವೈಜ್ಞಾನಿಕ ಕಾಮಗಾರಿ ತಡೆಗಟ್ಟಲು ಗುತ್ತಿಗೆದಾರರ ಸಭೆ ಜರುಗಿಸಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೋಳಿ ಹೇಳಿದರು. ಅವರು ತಾಲ್ಲೂಕು ಪಂಚಾಯಿತಿ ಸಭಾ ಭವನದಲ್ಲಿ ಜರುಗಿದ ಕೆಡಿಪಿ ಸಭೆಯಲ್ಲಿ ಜನರು ಕುಂದು ಕೊರತೆ ಆಲಿಸಿದ ಬಳಿಕ ಮಾತನಾಡಿದರು. ತಾಲ್ಲೂಕಿನಲ್ಲಿ ಕೈಗೊಂಡ ಜೆಜೆಎಂ ಕಾಮಗಾರಿ ಮಾಡುವಾಗ ರಸ್ತೆ ಅಗೆದು ಹದಗೆಡಿಸಿದ್ದಾರೆ.

ಮಕ್ಕಳು, ಮಹಿಳೆಯರು ತಿರುಗಾಡಲು ಆಗುತ್ತಿಲ್ಲ. ರಸ್ತೆ ಪಕ್ಕದಲ್ಲೇ ತಗ್ಗು ಗುಂಡಿ ತೆಗೆದು ಹಾಗೆಯೇ ಬಿಟ್ಟಿದ್ದಾರೆ. ಕೆಲ ಗ್ರಾಮಗಳಲ್ಲಿ ರಸ್ತೆಯನ್ನೇ ಅಗೆದು ಹಾಗೆಯೇ ಬಿಟ್ಟಿದ್ದರಿಂದ ಒಂದು ಮಗು ಸಾವನ್ನಪ್ಪಿದೆ. ಗುತ್ತಿಗೆದಾರರ ಅವೈಜ್ಞಾನಿಕ ಕಾಮಗಾರಿಗಳಿಂದಾಗಿ ಗ್ರಾಮಗಳಲ್ಲಿ ರಸ್ತೆ ಹಾಳಾಗುತ್ತಿವೆ. ಜೊತೆಗೆ ಅಪಘಾತಗಳೂ ಸಂಭವಿಸುತ್ತಿವೆ ಎಂದು ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಸಾರ್ವಜನಿಕರು ಒಕ್ಕೊರಲಿನಿಂದ ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಸತೀಶ ಜಾರಕಿಹೋಳಿ, ಮುಂಬರುವ ದಿನಗಳಲ್ಲಿ ಎಲ್ಲಾ ಗುತ್ತಿಗೆದಾರರ ಸಭೆ ಕರೆದು ಈ ಕುರಿತು ಕೂಲಂಕಷವಾಗಿ ಚರ್ಚಿಸಲಾಗುವದು ಎಂದರು. ನಿಯಮ ಮೀರಿ ಈಗಾಗಲೇ ರಸ್ತೆ ಅಗೆದು ಕಾಮಗಾರಿ ಮಾಡುತ್ತಿರುವವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕ್ರಮ ಜರುಗಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ರೈತರು ಎಮ್ಮೆ ಮತ್ತು ಹಸು ಸಾಕಬೇಕು. ಸಾವಯವ ಗೊಬ್ಬರ ಬಳಸಿ ನೈಸರ್ಗಿಕ ಕೃಷಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

## ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ

• ಉದಯವಾಹಿನಿ, ಬಾಗಲಕೋಟೆ

ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಬಾಂಬ್ ಇಡಲಾಗಿದೆ ಎಂದು ಇ ಮೇಲ್ ಬೆದರಿಕೆ ಬಂದ ಹಿನ್ನೆಲೆಯಲ್ಲಿ ನ್ಯಾಯಾಲಯ ಆವರಣದಲ್ಲಿ ಬಾಂಬ್ ನಿಷ್ಕ್ರಿಯ ದಳದ ಅಧಿಕಾರಿ ತಪಾಸಣೆ ನಡೆಸಿದರು. ಬೆಳಿಗ್ಗೆ ಬಾಂಬ್ ಇಟ್ಟಿರುವ ಮೇಲ್ ವಿಷಯ ತಿಳಿಯುತ್ತಿದ್ದಂತೆಯೇ ಕಲಾಪವನ್ನೂ ಮುಂದೂಡಲಾಯಿತು. ಎಲ್ಲರನ್ನೂ ಹೊರಗೆ ಕಳುಹಿಸಲಾಯಿತು. ಪೊಲೀಸ್ ಇಲಾಖೆಗೆ ಮಾಹಿತಿ ನೀಡಲಾಯಿತು. ತಪಾಸಣೆ ನಂತರ ಹುಸಿ ಬೆದರಿಕೆ ಇ ಮೇಲ್ ಎಂಬುದು ಗೊತ್ತಾಯಿತು.

ನಂತರ ಕಲಾಪಗಳು ಎಂದಿನಂತೆ ನಡೆದವು. ನ್ಯಾಯಾಲಯದ ಇ-ಮೇಲ್ ಐಡಿಗೆ ಮೊಹಮ್ಮದ್ ವಿಕ್ರಂ ರಾಜಗುರು ಎನ್ನುವ ಹೆಸರಿನ ಐಡಿಯಿಂದ ಬಾಂಬ್ ಬೆದರಿಕೆ ಬಂದಿದೆ. ಮಧ್ಯಾಹ್ನ 1 ರಿಂದ 2ರೊಳಗೆ ರಿಮೋಟ್ ಮೂಲಕ ಬಾಂಬ್ ಸ್ಫೋಟ ಮಾಡಲಾಗುವುದು ಎಂದು ಬರೆಯಲಾಗಿತ್ತು. ಜಿಲ್ಲಾ ನ್ಯಾಯಾಲಯದ ಅಧಿಕಾರಿಗಳಿಂದ ದೂರು ಪಡೆದುಕೊಂಡು ಕೇಸ್ ದಾಖಲಿಸಿಕೊಳ್ಳಲಾಗಿದೆ. ಇ-ಮೇಲ್ ಎಲ್ಲಿಂದ, ಯಾರಿಂದ ಬಂದಿದೆ ಎಂದು ಮಾಹಿತಿ ಸಂಗ್ರಹಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಯಾರೂ ಭಯಪಡುವ ಅಗತ್ಯ ಇಲ್ಲ ಎಂದು ಜಿಲ್ಲಾ ಪೊಲೀಸ್ ವರಿಷ್ಠ ಸಿದ್ಧಾರ್ಥ ಗೋಯಲ್ ತಿಳಿಸಿದರು.




• ಉದಯವಾಹಿನಿ, ಕೆಂಭಾವಿ

ಕಲ್ಯಾಣಪಥ ಯೋಜನೆಯಡಿಯಲ್ಲಿ ನಡೆಯುತ್ತಿರುವ 2024-25 ಸಾಲಿನಲ್ಲಿ ನಡೆಯುತ್ತಿರುವ ಕೆಂಭಾವಿ ಟು ಹುಣಸಗಿ ರಸ್ತೆಯೂ ವಿಳಂಬವಾಗಿ ಹಾಗೂ ಕಳಪೆಯಿಂದ ಕಾಮಗಾರಿ ಮಾಡುತ್ತಿದ್ದಾರೆ ಇದಕ್ಕೆ ಅಧಿಕಾರಿಗಳು ಸಾಥ ನೀಡುತ್ತಿದ್ದಾರೆ ಇವರ ಕ್ರಮಕ್ಕೆ ಮುಂದಾಗಬೇಕೆಂದು ಅಂಬೇಡ್ಕರ ಸ್ವಾಭಿಮಾನಿ ಸೇನೆ ವತಿಯಿಂದ ಕೆಂಭಾವಿ ಉಪತಹಶೀಲ್ದಾರ ಮೂಲಕ ಅಧೀಕ್ಷಕರ ಅಭಿಯಂತರರು ಕಚೇರಿಗೆ ಮನವಿ ಸಲ್ಲಿಸಿ ಕ್ರಮಕ್ಕೆ ಒತ್ತಾಯಿಸಿ ಮನವಿ ಸಲ್ಲಿಸಿದರು, ಇದೇ ಸಂದರ್ಭದಲ್ಲಿ ಪರಶುರಾಮ ಬೋನ್ಹಾಳ, ಪರುರಾಮ ಕಟ್ಟಿಮನಿ, ರಾಮು ಯಾಳಗಿ, ರವಿ ಮಾಳಳ್ಳಿಕರಸೋಮನಾಥ ಭಜಂತ್ರಿ, ಸಿದ್ದು ಮಾಳಹಳ್ಳಿ, ಸಮೀರ ಇದ್ದರು.

## ಕನ್ನಡ ಭಾಷೆ ನಿತ್ಯ ಬಳಸಿದರೆ ಮಾತ್ರ ಉಳಿವು: ಚಂದ್ರಶೇಖರ ಕಂಬಾರ

• ಉದಯವಾಹಿನಿ, ಬೈಲಹೊಂಗಲ:



ಉದಯವಾಹಿನಿ ಚಿತ್ರ

ಕನ್ನಡ ಭಾಷೆಯನ್ನು ನಿತ್ಯ ಬಳಸಿದರೆ ಮಾತ್ರ ಉಳಿಸಿ. ಬೆಳೆಸಲು ಸಾಧ್ಯ. ನಿತ್ಯ ಮನೆಯಲ್ಲಿ ಕನ್ನಡ ಭಾಷೆ ಮಾತನಾಡಬೇಕು ಎಂದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರ ಹೇಳಿದರು. ತಾಲ್ಲೂಕಿನ ನೇಗಿನಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೈದಾನದಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಡೆದ ತಾಲ್ಲೂಕು ಮಟ್ಟದ 8ನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡದ ಇತಿಹಾಸ ಪುಟಗಳು ಜಗತ್ತಿಗೆ ಮಾದರಿಯಾಗಿವೆ. ಕವಿಗಳು, ರಾಜರು, ಲೇಖಕರು, ಕನ್ನಡಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಕನ್ನಡ ಭಾಷೆ ಜಗತ್ತಿನ ಪ್ರಾಚೀನ ಭಾಷೆಗಳಲ್ಲಿ ಒಂದಾಗಿದೆ. ಸಾಹಿತ್ಯದ ಕುರಿತು ಇಂದು ಹೆಚ್ಚಿನ ಚಿಂತನೆಗಳು ನಡೆಯಬೇಕಿದೆ ಎಂದು ಅಭಿಪ್ರಾಯಪಟ್ಟರು. ಅಧ್ಯಕ್ಷತೆ ವಹಿಸಿದ್ದ ಶಾಸಕ ಬಾಬಾಸಾಹೇಬ ಪಾಟೀಲ ಮಾತನಾಡಿ, ಪಾಲಕರು ಟಿವಿ ಮುಂದೆ ಕುಳಿತು ಧಾರಾವಾಹಿ ನೋಡದೇ ಮಕ್ಕಳಿಗೆ ಕನ್ನಡ ಓದುವ ಹವ್ಯಾಸ, ಸಂಸ್ಕೃತಿ ಬೆಳೆಸಿ, ಕನ್ನಡ ಪುಸ್ತಕೋದ್ಯಮಕ್ಕೆ ಉತ್ತೇಜನ ನೀಡಬೇಕು ಎಂದರು.

**ಅಸಹಾಯಕರಿಗೆ ಸಾಹಿತ್ಯದಿಂದ ಸಾಂತ್ವನ ಲಭಿಸಲಿ:** ಸಮೂಹ ಮಾಧ್ಯಮಗಳು ಭಾಷಾ ಬೆಳವಣಿಗೆಯಲ್ಲಿ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಭಾಷಾ ಶುದ್ಧತೆ ವಸ್ತುನಿಷ್ಠ ಸಮಾಚಾರಕ್ಕೆ ಹೆಚ್ಚು ಗಮನ ಹರಿಸಬೇಕು. ಭಾಷೆ ಸಾಹಿತ್ಯ ತಾಲ್ಲೂಕಿನ ಪ್ರಗತಿಯ ಅವಲೋಕನ ನಡೆಯಬೇಕು. ಬದುಕಿನಲ್ಲಿ ಸೋತ ಅಸಹಾಯಕರಿಗೆ ಸಾಹಿತ್ಯದಿಂದ ಸಾಂತ್ವನ ಸಿಗುವಂತಾಗಬೇಕು ಎಂದು ಸಮ್ಮೇಳನಾಧ್ಯಕ್ಷ ಪ್ರೊ.ಕೆ.ಎಸ್.ಕೌಜಲಗಿ ಹೇಳಿದರು.

## ಅತೀ ವೇಗದಿಂದಾಗಿ ಹೊತ್ತಿ ಉರಿದ ಕಾರು, ಇಬ್ಬರು ಸಜೀವ ದಹನ


• ಉದಯವಾಹಿನಿ, ಕಾರವಾರ

ಅತೀ ವೇಗದಿಂದಾಗಿ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾದ ಪರಿಣಾಮ ಬೆಂಕಿ ಹೊತ್ತಿಕೊಂಡು ಇಬ್ಬರು ಸಜೀವ ದಹನವಾಗಿರುವ ಘಟನೆ ಹೊನ್ನಾವರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಸೂಳೆಮುರ್ಕಿ ಕ್ರಾಸ್‌ನಲ್ಲಿ ಈ ಅಪಘಾತ ಸಂಭವಿಸಿದ್ದು, ಮೇಲ್ನೋಟಕ್ಕೆ ಕಾರು ಮರಕ್ಕೆ ಡಿಕ್ಕಿ ಹೊಡೆದು ಕಂದಕಕ್ಕೆ ಬಿದ್ದಿರುವ ಸಾಧ್ಯತೆ ಕಂಡು ಬಂದಿದೆ.

ಅಪಘಾತದ ತೀವ್ರತೆಯಿಂದ ಕಾರಿನ ನಂಬರ್ ಪ್ಲೇಟ್ ಕೂಡ ಸುಟ್ಟು ಹೋಗಿರುವುದರಿಂದ ಕಾರು ಮತ್ತು ಕಾರಿನಲ್ಲಿದ್ದವರ ಗುರುತು ಸದ್ಯಕ್ಕೆ ಸಿಕ್ಕಿಲ್ಲ. ಪೊಲೀಸರು ಗುರುತು ಪತ್ತೆಗಾಗಿ ಮುಂದಾಗಿದ್ದಾರೆ. ಪ್ರಾಥಮಿಕ ತನಿಖೆ ಪ್ರಕಾರ ಕಾರಿನಲ್ಲಿದ್ದವರು ಸಿದ್ದಾಪುರ ಮೂಲ ದವರೆಂದು ಗೊತ್ತಾಗಿದೆ. ಘಟನೆ ಬಗ್ಗೆ ಸಂಬಂಧಿಕರಿಗೆ ಮಾಹಿತಿ ನೀಡಲಾಗಿದೆ. ಘಟನಾ ಸ್ಥಳದಲ್ಲಿ ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದು, ಸಜೀವ ದಹನವಾಗಿರುವ ಇಬ್ಬರ ಮೃತದೇಹಗಳನ್ನು ಆಸ್ಪತ್ರೆಗೆ ರವಾನಿಸಲಾಗಿದೆ. ಈ ಬಗ್ಗೆ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರೆದಿದೆ.

## ಹಿಮ್ಸ್ ನೀಡಿದ್ದಕ್ಕೆ ಧನ್ಯವಾದ; ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕೊಡಿ: ಬೊಮ್ಮಾಯಿ

• ಉದಯವಾಹಿನಿ, ಹಾವೇರಿ



ಹಾವೇರಿ ವೈದ್ಯಕೀಯ ವಿಜ್ಞಾನಿಗಳ ಸಂಸ್ಥೆ ಉದ್ಘಾಟನೆ ಆಗಿರುವುದರಿಂದ ಜಿಲ್ಲೆಯ ಜನರ ಕನಸು ನನಸಾಗುತ್ತಿದೆ. ಚಿಕಿತ್ಸೆಗಾಗಿ ಹುಬ್ಬಳ್ಳಿ ಹಾಗೂ ದಾವಣಗೆರೆಗೆ ಹೋಗುವುದನ್ನು ತಪ್ಪಿಸಲು ಹಾವೇರಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕೊಡಿ ಎಂದು ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ, ಶಾಸಕ ರುದ್ರಪ್ಪ ಲಮಾಣಿ ಒತ್ತಾಯಿಸಿದರು.

ನಗರದ ದೇವಗಿರಿ ರಸ್ತೆಯಲ್ಲಿರುವ ಹಿಮ್ಸ್ ಆವರಣದಲ್ಲಿ ಬುಧವಾರ ಹಮ್ಮಿಕೊಂಡ ಹಿಮ್ಸ್ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎದುರು ಅವರು ಹಕ್ಕೊತ್ತಾಯ ಮಾಡಿದರು. ಹಾವೇರಿ ಜಿಲ್ಲೆ ವೈದ್ಯಕೀಯ ಸೌಲಭ್ಯದಿಂದ ವಂಚಿತವಾಗಿದೆ. ಹಿಮ್ಸ್ ವೈದ್ಯರ ಬೋಧನೆಗಾಗಿ ಜಿಲ್ಲಾಸ್ಪತ್ರೆ ನೀಡಿದ್ದೇವೆ. ಆದರೆ, ಜಿಲ್ಲಾಸ್ಪತ್ರೆಯಲ್ಲಿ ಸೌಲಭ್ಯ ಚೆನ್ನಾಗಿಲ್ಲ, ಎಲ್ಲವೂ ಹಾಳಾಗಿದೆ. ಜಾಗವೂ ಚಿಕ್ಕದಾಗಿದೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಸಣ್ಣಪುಟ್ಟ ಆರೋಗ್ಯ ಸೌಲಭ್ಯವಿದ್ದರೂ ಜಿಲ್ಲೆಯ ಜನರು ಹುಬ್ಬಳ್ಳಿ ಹಾಗೂ ದಾವಣಗೆರೆಗೆ ಹೋಗುತ್ತಿದ್ದಾರೆ. ಸ್ಥಳೀಯವಾಗಿಯೇ ಜನರಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸೌಲಭ್ಯ ಬೇಕು. ಅದನ್ನು ಸಿಎಂ ಸಿದ್ದರಾಮಯ್ಯ ಅವರು ಘೋಷಿಸಬೇಕು ಎಂದು ಒತ್ತಾಯಿಸಿದರು. ಶಾಸಕ ರುದ್ರಪ್ಪ ಲಮಾಣಿ, ಜನರಿಗೂ ಗುಣಮಟ್ಟದ ಸುಸಜ್ಜಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬೇಕು. ಸಿಎಂ ಅವರು ದಯವಿಟ್ಟು ಮಂಜೂರು ಮಾಡಿ ಇದೇ ಕಾರ್ಯಕ್ರಮದಲ್ಲಿ ಘೋಷಿಸಬೇಕು ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ಜಿಲ್ಲೆಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಅಗತ್ಯವಿದೆ. ಮುಖ್ಯಮಂತ್ರಿ ಅವರು ಘೋಷಿಸಬೇಕು ಎಂದು ಕೋರಿದರು. ಸಚಿವ ಎಚ್.ಕೆ.ಪಾಟೀಲ ಸಹ ಹಾವೇರಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಂಜೂರು ಮಾಡಿ ಎಂದು ಮನವಿ ಮಾಡಿದರು.

## ಬಾಂಬ್ ಬೆದರಿಕೆ ಸಂದೇಶ: ಕಲಾಪ ಸ್ಥಗಿತ

• ಉದಯವಾಹಿನಿ, ಧಾರವಾಡ

ಹೈಕೋರ್ಟ್ ಪೀಠದ ಎಆರ್‌ಜಿ ಕಚೇರಿ ಇಮೇಲ್‌ಗೆ ಬಾಂಬ್ ಬೆದರಿಕೆ ಸಂದೇಶ ಬಂದ ಹಿನ್ನೆಲೆಯಲ್ಲಿ ಪೊಲೀಸರು ಪರಿಶೀಲನೆ ನಡೆಸಿದರು. ಕೋರ್ಟ್ ಕಲಾಪ ನಿಲ್ಲಿಸಿ ಎಲ್ಲರನ್ನೂ ಹೊರಗೆ ಕಳಿಸಿ ಪರಿಶೀಲನೆ ನಡೆಸಿದರು. ಕೋರ್ಟ್ ಕಟ್ಟಡದ ಮೂರು ಹಂತಸ್ತು, ಮುಂದಿನ ಉದ್ಯಾನ ಮತ್ತು ಅಕ್ಕಪಕ್ಕದ ಜಾಗದಲ್ಲಿ ತಪಾಸಣೆ ನಡೆಸಿದರು. ಮಧ್ಯಾಹ್ನ 1.55ರೊಳಗೆ ಕೋರ್ಟ್ ಖಾಲಿ ಮಾಡಿ, ಬಾಂಬ್ ಇಡಲಾಗಿದೆ. ಯಾವ ಕ್ಷಣದಲ್ಲಾದರೂ ಸಿಡಿಯಬಹುದು ಆತ್ಮಹತ್ಯಾ ದಾಳಿ ಆಗಬಹುದು ಎಂದು ಇಮೇಲ್‌ನಲ್ಲಿ ಸಂದೇಶ ಬಂದಿತ್ತು. ಅದು ಹುಸಿ ಎಂದು ನೋಡಿದಾಗಲೇ ಅನಿಸಿತ್ತು. ಇ-ಮೇಲ್ ಕಳಿಸಿದವರು ಯಾರು ಎಂದು ಗೊತ್ತಿಲ್ಲ. ಸೈಬರ್ ಪೊಲೀಸರು ಪತ್ತೆ ಹಚ್ಚಬೇಕು. ಪೊಲೀಸರು ಎಲ್ಲಾ ಕಡೆ ಪರಿಶೀಲನೆ ಮಾಡಿದ್ದಾರೆ ಎಂದು ಎಆರ್‌ಜಿ ಶಾಂತವೀರ ಶಿವಪ್ಪ ಸುದ್ದಿಗಾರರಿಗೆ ತಿಳಿಸಿದರು.

## ಕಡಲೆ ಬೆಳೆಗೆ ರೋಗ ಬಾಧೆ: ಕಳ್ಳರ ಕಾಟ

• ಉದಯವಾಹಿನಿ, ಗಜೇಂದ್ರಗಡ

ತಾಲ್ಲೂಕಿನಲ್ಲಿ ರೈತರು ಬೆಳೆದ ಕಡಲೆ ಬೆಳೆ ಸದ್ಯ ಕಾಯಿ ಕಟ್ಟಿದ್ದು, ಕೆಲವು ರೈತರ ಜಮೀನುಗಳಲ್ಲಿ ತೇವಾಂಶ ಹೆಚ್ಚಾದ ಕಾರಣ ಬೆಲೆ ಸಿಡಿ ರೋಗಕ್ಕೆ ತುತ್ತಾಗುತ್ತಿದೆ. ಮುಂಗಾರು ಹಂಗಾಮಿನಲ್ಲಿ ಅಧಿಕ ಮಳೆಯಿಂದಾಗಿ ಹೆಸರು, ಗೋವಿನಜೋಳ ಬೆಳೆಗಳಿಗೆ ಹಾನಿಯಾಗಿದೆ. ಅದೇರೀತಿ ಕಡಲೆ ಬೆಳೆಗಳಿಗೂ ಸಿಡಿ ರೋಗ ಕಾಡುತ್ತಿದೆ. ಸಮೃದ್ಧವಾಗಿ ಬೆಳೆದು ಕಾಯಿ ಕಟ್ಟುತ್ತಿದ್ದ ಕಡಲೆ ಗಿಡಗಳು ಒಣಗುತ್ತಿವೆ. ಜೊತೆಗೆ ರಸ್ತೆ ಬದಿಯಲ್ಲಿರುವ ಕಡಲೆ ಜಮೀನುಗಳಿಗೆ ಕಳ್ಳರ ಕಾಟವು ಅಧಿಕವಾಗಿದ್ದು, ರಾತ್ರಿ ವೇಳೆ ಬೆಳೆ ರಕ್ಷಿಸಿಕೊಳ್ಳುವುದು ರೈತರಿಗೆ ಸವಾಲಾಗಿದೆ.

ಮುಂಗಾರು ಬೆಳೆ ಹಾನಿಯಿಂದ ರೈತರು ಆರ್ಥಿಕ ನಷ್ಟ ಅನುಭವಿಸಿದ್ದಾರೆ. ಸದ್ಯ ಜಮೀನುಗಳಲ್ಲಿ ಬೆಳೆದಿರುವ ಕಡಲೆ ಕಾಯಿ ಕಟ್ಟಿದ್ದು, ರಸ್ತೆ ಪಕ್ಕದ ಜಮೀನುಗಳಿಗೆ ರಾತ್ರಿ ವೇಳೆ ಬೈಕ್‌ಗಳಲ್ಲಿ ಬರುವ ಕಳ್ಳರು ಹಸಿ ಕಡಲೆ ಕಿತ್ತುಕೊಂಡು ಮಾರಾಟ ಮಾಡುತ್ತಿದ್ದಾರೆ. ಪೊಲೀಸ್ ಇಲಾಖೆ ರಾತ್ರಿ ಸಮಯದಲ್ಲಿ ಗಸ್ತು ಹಾಕುವ ಮೂಲಕ ಕಳ್ಳರ ಕಾಟ ತಪ್ಪಿಸಬೇಕು ಎಂದು ರೈತ ಮಹಮ್ಮದ್‌ರಫಿ ಮುಜಾವರ, ಶರಣಪ್ಪ ಪಾಟೀಲ ಅಳವುತೋಡಿಕೊಂಡರು.

## ಹಿರೇಕೆರೂರು ಆಧಾರ್ ಕೇಂದ್ರ: ನೋಂದಣಿ-ತಿದ್ದುಪಡಿಗೆ ಜನರ ಪರದಾಟ

• ಉದಯವಾಹಿನಿ, ಹಿರೇಕೆರೂರು


ಉದಯವಾಹಿನಿ ಚಿತ್ರ

ತಾಲ್ಲೂಕಿನ ಮೂರು ಕಡೆಗಳಲ್ಲಿ ಮಾತ್ರ ಆಧಾರ್ ಸೇವಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಜನರು ನೋಂದಣಿ ಹಾಗೂ ತಿದ್ದುಪಡಿ ಮಾಡಲು ಗಂಟೆಗಟ್ಟಲೇ ಸರದಿಯಲ್ಲಿ ಕಾಯಬೇಕಾದ ಸ್ಥಿತಿ ಬಂದೊದಗಿದೆ. ದಿನದ ಕೂಲಿ ಹಾಗೂ ಸಣ್ಣ-ಪುಟ್ಟ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿರುವ ಜನರು, ಇಡೀ ದಿನ ಕೇಂದ್ರದಲ್ಲೇ ನಿಲ್ಲುವಂತಾಗಿದೆ. ಇದರಿಂದಾಗಿ, ಅವರ ದಿನದ ಕೂಲಿ ಕೈತಪ್ಪುತ್ತಿದೆ. ಪಟ್ಟಣದ ತಹಶೀಲ್ದಾರ್ ಕಚೇರಿ ಮತ್ತು ಹಂಸಬಾವಿ ಗ್ರಾಮದ ನಾಡಕಚೇರಿಯಲ್ಲಿ ತೆರೆಯಲಾಗಿದ್ದ ಆಧಾರ್ ಸೇವಾ ಕೇಂದ್ರಗಳನ್ನು ಬಂದ್ ಮಾಡಿ ಹಲವು ವರ್ಷಗಳಾಗಿವೆ.

ಈಗ ಪಟ್ಟಣದ ಅಂಚೆ ಕಚೇರಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬಿಎಸ್‌ಎನ್‌ಎಲ್ ಕಚೇರಿಗಳಲ್ಲಿ ಮಾತ್ರ ಆಧಾರ್ ಸೇವಾ ಕೇಂದ್ರಗಳಿವೆ. ಇದೇ ಕೇಂದ್ರಗಳಲ್ಲಿ ನೋಂದಣಿ, ನವೀಕರಣ, ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆ. ತಾಲ್ಲೂಕಿನ ಎಲ್ಲಾ ಜನರು, ಆಧಾರ್ ಸಂಬಂಧಿತ ಕೆಲಸಗಳಿಗಾಗಿ ಈ ಮೂರು ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದಾರೆ. ಮೂರು ಕೇಂದ್ರಗಳಲ್ಲಿ ನಿತ್ಯವೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುತ್ತಿದ್ದು, ನೋಂದಣಿ ಹಾಗೂ ತಿದ್ದುಪಡಿಗೆ ಗಂಟೆಗಟ್ಟಲೇ ಕಾಯಬೇಕಾದ ಪರಿಸ್ಥಿತಿ ಎದುರಾಗುತ್ತಿದೆ. ಕೆಲವರಂತೂ ಮರುದಿನ ಬಂದು ಆಧಾರ್ ಕೆಲಸ ಮಾಡಿಕೊಂಡು ಹೋಗುತ್ತಿರುವುದು ಕಂಡುಬರುತ್ತಿದೆ. ಬ್ಯಾಂಕ್ ಖಾತೆ, ನೇರ ನಗದು ವರ್ಗಾವಣೆ ಸೇರಿದಂತೆ ಸರ್ಕಾರದ ಪ್ರತಿಯೊಂದು ಯೋಜನೆಯ ಲಾಭ ಪಡೆಯಲು ಆಧಾರ್ ಕಡ್ಡಾಯ ಮಾಡಲಾಗಿದೆ. ಗ್ರಾಮೀಣ ಜನರು ಹೆಚ್ಚಿರುವ ತಾಲ್ಲೂಕಿನಲ್ಲಿ ಹಲವರ ಆಧಾರ್ ಕಾರ್ಡ್‌ಗಳಲ್ಲಿ ಸಣ್ಣ-ಪುಟ್ಟ ಲೋಪಗಳಿವೆ. ಒಂದು ಕೇಂದ್ರದಲ್ಲಿ ದಿನಕ್ಕೆ ಕೇವಲ 20ರಿಂದ 30 ಮಂದಿ ಕೆಲಸ ಮಾತ್ರ ಆಗುತ್ತಿದೆ. ಉಳಿದವರು ಸರದಿಯಲ್ಲಿ ನಿಂತು ವಾಪಸು ಹೋಗುವಂತಾಗಿದೆ. ಕೇಂದ್ರದಿಂದ ಕೇಂದ್ರಕ್ಕೆ ಅಲೆಯುವಂತಾಗಿದೆ. ಹಿರೇಕೆರೂರಿನಲ್ಲಿ ಮತ್ತಷ್ಟು ಸೇವಾ ಕೇಂದ್ರಗಳನ್ನು ತೆರೆಯಬೇಕು. ಪಟ್ಟಣ ಮಾತ್ರವಲ್ಲದೇ ಹೋಬಳಿ ಮಟ್ಟದಲ್ಲೂ ಕೇಂದ್ರ ಆರಂಭಿಸಬೇಕು' ಎಂದು ಒತ್ತಾಯಿಸಿದರು.

## ಬೀದಿನಾಯಿ ಎಣಿಕೆಗೆ ಶಿಕ್ಷಕರು

• ಉದಯವಾಹಿನಿ, ಹಾವೇರಿ

ಜಿಲ್ಲೆಯಲ್ಲಿ ಹೆಚ್ಚಾಗಿರುವ ಬೀದಿನಾಯಿಗಳನ್ನು ಹಿಡಿದು ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದ್ದು, ಶಾಲೆ ಆವರಣದಲ್ಲಿ ಇರುವ ಬೀದಿನಾಯಿಗಳನ್ನು ಎಣಿಕೆ ಮಾಡಿ ವರದಿ ನೀಡುವ ಜವಾಬ್ದಾರಿಯನ್ನು ಶಿಕ್ಷಕರಿಗೆ ವಹಿಸಲಾಗಿದೆ. ಶಾಲಾ ಆವರಣದಲ್ಲಿ ಬರುವ ಬೀದಿ ನಾಯಿಗಳ ಎಣಿಕೆ ಮಾಡಿ, ವರದಿ ನೀಡುವಂತೆ ಜಿಲ್ಲೆಯ ಎಲ್ಲಾ ಸರ್ಕಾರಿ, ಖಾಸಗಿ ಶಾಲೆಗಳಿಗೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಆದೇಶ ಹೊರಡಿಸಿದ್ದಾರೆ. ಅದರಂತೆ ವರದಿಗಳು ಸಲ್ಲಿಕೆಯಾಗಿವೆ. ಸರ್ಕಾರಿ ಶಾಲೆಗಳಲ್ಲಿ 1,766, ಅನುದಾನಿತ ಶಾಲೆಗಳಲ್ಲಿ 224 ಹಾಗೂ ಖಾಸಗಿ ಶಾಲೆಗಳಲ್ಲಿ 291 ಸೇರಿದಂತೆ ಜಿಲ್ಲೆಯಾದ್ಯಂತ ಶಾಲೆಗಳ ಆವರಣದಲ್ಲಿ 2,211 ಬೀದಿನಾಯಿಗಳು ಇರುವ ಬಗ್ಗೆ ಸರ್ಕಾರಕ್ಕೂ ವರದಿ ಸಲ್ಲಿಕೆಯಾಗಿದೆ. ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಶಾಲಾ ಆವರಣದಲ್ಲಿ ಇರುವ ಬೀದಿನಾಯಿಗಳ ಬಗ್ಗೆ ವರದಿ ನೀಡುವಂತೆ ಇಲಾಖೆಯ ಹಿರಿಯ ಅಧಿಕಾರಿಗಳಿಂದ ಸೂಚನೆ ಬಂದಿತ್ತು.

ಅದನ್ನು ಆಧರಿಸಿ ಜಿಲ್ಲೆಯ ಎಲ್ಲಾ ಶಾಲೆಗಳಿಂದ ವರದಿ ತರಿಸಿಕೊಂಡು ಕೇಂದ್ರ ಕಚೇರಿಗೆ ಕಳುಹಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಮೋಹನ್ ದಂಡಿನ ತಿಳಿಸಿದರು.

# ಪ್ರತಿದಿನ ಉಚಿತ ಯೋಗ-ಧ್ಯಾನ, ಜೀವನಶೈಲಿ ಸಲಹೆ

### ಚಳಿಯಿಂದಾಗುವ ಆರೋಗ್ಯ ಸಮಸ್ಯೆಗಳ ರಕ್ಷಣೆಗೆ ಬೆಚ್ಚಗಿನ ಬಟ್ಟೆ ಧರಿಸಿ, ರಕ್ತ ಸಕ್ಕರೆ ಮಟ್ಟವನ್ನು ನಿಯಮಿತ ಪರೀಕ್ಷಿಸಿ

• ಉದಯವಾಹಿನಿ, ಚಿತ್ರದುರ್ಗ



ಉದಯವಾಹಿನಿ ಚಿತ್ರ

**78ಕ್ಕೂ ಹೆಚ್ಚು ರೋಗಿಗಳ ಆರೋಗ್ಯ ತಪಾಸಣೆ**

ಚಳಿಗಾಲದಲ್ಲಿ ಮಧುಮೇಹ ರೋಗಿಗಳಲ್ಲಿ ರಕ್ತದ ಸಕ್ಕರೆ ಮಟ್ಟ ಏರಿಳಿತಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚು ಇರುತ್ತದೆ, ಇದರಿಂದ ದೇಹದ ಆರೋಗ್ಯದಲ್ಲಿ ಹಲವಾರು ತೊಂದರೆಗಳು ಉಂಟಾಗಬಹುದು ಆದ್ದರಿಂದ ಮಧುಮೇಹ ರೋಗಿಗಳು ಆಹಾರ, ವ್ಯಾಯಾಮ, ಜೀವನಶೈಲಿಯಲ್ಲಿ ಎಚ್ಚರಿಕೆ ವಹಿಸುವುದು ಅಗತ್ಯವಿದೆ ಎಂದು ಆಯುಷ್ ಇಲಾಖೆಯ ಹಿರಿಯ ವೈದ್ಯಾಧಿಕಾರಿ ಡಾ. ವಿಜಯಲಕ್ಷ್ಮಿ ಸಲಹೆ ನೀಡಿದರು. ಜಿಲ್ಲಾ ಆಯುಷ್ ಇಲಾಖೆ ಚಿತ್ರದುರ್ಗ, ಸಹಯೋಗದೊಂದಿಗೆ ಆಯುಷ್ಮಾನ್ ಆರೋಗ್ಯ ಭಾರತ ಯೋಜನೆಯಡಿಯಲ್ಲಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಜೆ ಎನ್ ಕೋಟೆ ವತಿಯಿಂದ ಬುಧವಾರ ಚಿತ್ರದುರ್ಗ ತಾಲ್ಲೂಕಿನ ಗೊಲ್ಲನಕಟ್ಟೆ ಹಾಗೂ ಸುತ್ತಲಿನ ಗ್ರಾಮಸ್ಥರಿಗಾಗಿ ಹಮ್ಮಿಕೊಳ್ಳಲಾಗಿದ್ದ ಉಚಿತ ಆರೋಗ್ಯ ತಪಾಸಣೆ ಹಾಗೂ ಔಷಧ ವಿತರಣೆ ಕಾರ್ಯಕ್ರಮದಲ್ಲಿ ಸಾಮಾನ್ಯ ಖಾಯಿಲೆಗಳಾದ ಮಧುಮೇಹ ಮಂಡಿನೋವು ಸೇರಿದಂತೆ ವಿವಿಧ ರೋಗಿಗಳಿಗೆ ತಪಾಸಣೆ ನಡೆಸಿ ಆಯುಷ್ ಇಲಾಖೆಯ ಆಯುರ್ವೇದ ಔಷಧಗಳನ್ನು ವಿತರಿಸಿ ಅವರು ಮಾತನಾಡುತ್ತಾ ನಾರು, ಹೆಚ್ಚಿನ ಪ್ರೋಟೀನ್ ಯುಕ್ತ ಆರೋಗ್ಯಕರ ಆಹಾರಗಳಾದ ತರಕಾರಿ, ಹಣ್ಣುಗಳ, ಸೊಪ್ಪುಗಳು ಆಯ್ಕೆಮಾಡಿ, ಸಕ್ಕರೆಯುಕ್ತ ಪಾನೀಯಗಳು, ಕಾರ್ಬೋಹೈಡ್ರೇಟ್ ಆಹಾರಗಳನ್ನು ತಪ್ಪಿಸಿ. ಗ್ರೀನ್ ಟೀ, ಶುಂಠಿ ಚಹಾ ಕುಡಿಯುವುದು ಉತ್ತಮ, ಹೆಚ್ಚು ನೀರು ಕುಡಿಯಿರಿ. ಸೋರೆಕಾಯಿ ಸೇವನೆಯು ಸಕ್ಕರೆ ನಿಯಂತ್ರಣಕ್ಕೆ ಸಹಾಯ ಮಾಡುತ್ತದೆ ಧ್ಯಾನ ಅಥವಾ ಯೋಗದ ಮೂಲಕ ಒತ್ತಡ ಕಡಿಮೆ ಮಾಡಿ, ಏಕೆಂದರೆ ಒತ್ತಡವು ಕಾರ್ಟಿಸಾಲ್ ಹೆಚ್ಚಿಸಿ ಸಕ್ಕರೆ ಮಟ್ಟ ಏರಿಸುತ್ತದೆ. ರೋಗನಿರೋಧಕ ಶಕ್ತಿ ಹೆಚ್ಚಿಸಲು ವಿಟಮಿನ್ ಸಮೃದ್ಧ ಆಹಾರ ತೆಗೆದುಕೊಳ್ಳಿ. ಇದೇ ಸಂಧರ್ಭದಲ್ಲಿ ಮನೆಯಲ್ಲಿ ಕಷಾಯವನ್ನು ಹೇಗೆ ತಯಾರುಮಾಡಬಹುದು ಎಂಬುದಾಗಿ ಸ್ಥಳದಲ್ಲಿಯೇ ಪ್ರತ್ಯಕ್ಷವಾಗಿ ತಯಾರುಮಾಡಿ ಎಲ್ಲರಿಗೂ ಹಂಚಲಾಯಿತು. ಈ ಆರೋಗ್ಯ ಶಿಬಿರದಲ್ಲಿ ಸುಮಾರು 78ಕ್ಕೂ ಹೆಚ್ಚು ರೋಗಿಗಳ ಆರೋಗ್ಯ ತಪಾಸಣೆ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಯೋಗ ಚಿಕಿತ್ಸಕ ರವಿ ಕೆ.ಅಂಬೇಕರ್, ಶಿಕ್ಷಕಿ ತಬಸುಂಬಾನು ಸೇರಿದಂತೆ ಅಂಗನವಾಡಿ ಶಿಕ್ಷಕಿ ಕಾರ್ಯಕರ್ತರು ಗ್ರಾಮದ ಮುಖಂಡರು ಭಾಗವಹಿಸಿದ್ದರು.


**ಚಳಿಯಿಂದ ಆರೋಗ್ಯ ರಕ್ಷಿಸಿಕೊಳ್ಳಿ**

ಚಳಿಯಿಂದಾಗುವ ಆರೋಗ್ಯ ಸಮಸ್ಯೆಗಳ ರಕ್ಷಣೆಗೆ ಬೆಚ್ಚಗಿನ ಬಟ್ಟೆ ಧರಿಸಿ, ರಕ್ತ ಸಕ್ಕರೆ ಮಟ್ಟವನ್ನು ನಿಯಮಿತ ಪರೀಕ್ಷಿಸಿ ಮತ್ತು ವೈದ್ಯ ಸಲಹೆ ಪಡೆಯಿರಿ. ಶ್ವಾಸನಾಳವನ್ನು ತೇವವಾಗಿರಿಸುಲು ಹೆಚ್ಚು ನೀರುಕುಡಿಯಿರಿ ಮತ್ತು ಬೆಚ್ಚಗಿನ ಆಹಾರ ಸೇವಿಸಿರಿ.

**ಆಯುಷ್ ಇಲಾಖೆಯ ಸೌಲಭ್ಯಗಳನ್ನು ಪದವಿ ಪಡೆಯಲು ಸಾರ್ವಜನಿಕರಿಗೆ ಸೂಚನೆ**


ಆಯುಷ್ ಇಲಾಖೆಯ ಸೌಲಭ್ಯಗಳು ಆಯುರ್ವೇದ, ಯೋಗ, ನ್ಯಾಚರಾಪತಿ, ಯುನಾನಿ, ಸಿದ್ದ ಮತ್ತು ಹೋಮಿಯೋಪತಿ ಚಿಕಿತ್ಸೆಗಳನ್ನು ಒಳಗೊಂಡಿವೆ, ಇವುಗಳು ಕರ್ನಾಟಕದಲ್ಲಿ ಉಚಿತ ಅಥವಾ ಕಡಿಮೆ ವೆಚ್ಚದಲ್ಲಿ ಲಭ್ಯವಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಹತ್ತಿರದ ಜೆ ಎನ್ ಕೋಟೆ ,ಸೊಂಡೆಕೆರೆ ಸೇರಿದಂತೆ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಆಯುಷ್ ಆರೋಗ್ಯ ಮಂದಿರಗಳು ಲಭ್ಯವಿದ್ದು,ಇಲ್ಲಿ ಪ್ರತಿದಿನ ಉಚಿತ ಯೋಗ-ಧ್ಯಾನ ಮತ್ತು ಜೀವನಶೈಲಿ ಸಲಹೆ ನೀಡಲಾಗುತ್ತದೆ ಈ ಸೌಲಭ್ಯಗಳನ್ನು ಪ್ರತಿಯೊಬ್ಬರೂ ಪಡೆಯಬೇಕು ಎಂದು ತಿಳಿಸಿದರು.

# ವ್ಯತ್ಯಾಸ ತಿಳಿಯಿರಿ ಸರ್..; ಮೋದಿ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ



**ಹೊಸದಿಲ್ಲಿ:** ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಾಷಿಂಗ್ಟನ್‌ನಲ್ಲಿ ನಡೆದ GOP ಸಭೆಯಲ್ಲಿ ಭಾರತ, ಪ್ರಧಾನಿ ಮೋದಿಯವರ ಬಗ್ಗೆ ಆಡಿದ ಮಾತುಗಳು ಈಗ ವಿಪಕ್ಷಗಳಿಗೆ ಆಹಾರವಾಗಿದ್ದು, ಟ್ರಂಪ್ ಮೋದಿ ನನ್ನ ಭೇಟಿಗಾಗಿ ಸರ್ ನಾನು ನಿಮ್ಮನ್ನು ಭೇಟಿಯಾಗಬಹುದೇ ಎಂದು ಕೇಳಿದ್ದರು ಎಂಬ ಹೇಳಿಗೆ ರಾಹುಲ್ ಗಾಂಧಿ ಟ್ರಂಪ್ ಅವರ ಒತ್ತಡಕ್ಕೆ ಮಣಿದು ಮೋದಿ ಅವರು ಶರಣಾಗಿದ್ದಾರೆ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಇದೇ ವೇಲೆ ಪ್ರಧಾನಿ ಮೋದಿ ನಾಯಕತ್ವವನ್ನು ಇಂದಿರಾಗಾಂಧಿಯವರ ನಾಯಕತ್ವಕ್ಕೆ ಹೋಲಿಸಿ ಮಾತನಾಡಿ ಇಂದಿರಾಗಾಂಧಿ ಅಮೆರಿಕದ ಒತ್ತಡಕ್ಕೆ ಮಣಿಯದೆ ಗಟ್ಟಿಯಾಗಿ ನಿಂತಿದ್ದರು ಎಂದು ಹೇಳಿದ್ದಾರೆ.

**ಟ್ರಂಪ್ ಮೋದಿಯವರ ಬಗ್ಗೆ ಹೇಳಿದೇನು?:** ಟ್ರಂಪ್ ಅವರು ಟ್ರಂಪ್ ಕೆನಡಿ ಸೆಂಟರ್‌ನಲ್ಲಿ ನಡೆಸಿದ ಭಾಷಣದಲ್ಲಿ ಜಾಗತಿಕ ನಾಯಕರ ಬಗ್ಗೆ ಹೇಳಿಕೆಗಳನ್ನು ನೀಡುತ್ತಾ ಮೋದಿಯವರ ಬಗ್ಗೆ ಮಾತನಾಡಿ ಮೋದಿ ನನ್ನನ್ನು ಭೇಟಿಯಾಗಲು ಸರ್, ನಾನು ನಿಮ್ಮನ್ನು ಭೇಟಿಯಾಗಬಹುದೇ ಎಂದು ಸಂಪರ್ಕಿಸಿದ್ದರು. ಅಲ್ಲದೆ, ಮೋದಿಯೊಂದಿಗೆ ನಾನು ಉತ್ತಮ ಸಂಬಂಧ ಹೊಂದಿದ್ದೇನೆ ಆದರೆ ಅವರಿಗೆ ಅಷ್ಟೊಂದು ಖುಷಿಯಿಲ್ಲ. ಇದಕ್ಕೆ ಕಾರಣ ರಷ್ಯಾದ ಕಾರಣದಿಂದಾಗಿ ಅವರು ಈಗ ಹೆಚ್ಚಿನ ಸುಂಕವನ್ನು ಪಾವತಿಸುತ್ತಿದ್ದಾರೆ, ಹಾಗಾಗಿ ಅವರು ಅದನ್ನು ಈಗ ಗಣನೀಯವಾಗಿ ಕಡಿಮೆ ಮಾಡಿದ್ದಾರೆ ಎಂದು ಹೇಳಿದ್ದಾರೆ.




ಈಗ ಈ ಹೇಳಿಕೆಗಳನ್ನೇ ಅಸ್ತ್ರವನ್ನಾಗಿ ಮಾಡಿಕೊಂಡಿರುವ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ತಮ್ಮ ಅಧಿಕೃತ X ಖಾತೆಯಲ್ಲಿ ವಿಡಿಯೋವೊಂದನ್ನು ಹಂಚಿಕೊಂಡಿದ್ದು, ಅದಕ್ಕೆ ಫರ್ಕ್ ಸಮಜೋ ಸರ್ ಜೀ ಅಂದರೆ ವ್ಯತ್ಯಾಸ ತಿಳಿಯಿರಿ ಸರ್… ಎಂದು ಬರೆದುಕೊಂಡಿದ್ದಾರೆ.

ಈ ವಿಡಿಯೋದಲ್ಲಿ ಬಿಜೆಪಿ-ಆರ್‌ಎಸ್‌ಎಸ್ ಬಗ್ಗೆ ನನಗೆ ಈಗ ತುಂಬಾ ಚೆನ್ನಾಗಿ ಗೊತ್ತಾಗಿದೆ. ಇವರ ಮೇಲೆ ಸ್ವಲ್ಪ ಒತ್ತಡ ಹಾಕಿದರೆ ಸಾಕು, ಅವರು ಹೆದರಿ ಓಡಿಹೋಗುತ್ತಾರೆ ಎಂದು ಟೀಕೆ ಮಾಡಿದ್ದಾರೆ. ಅಷ್ಟೇ ಅಲ್ಲದೆ, ಟ್ರಂಪ್ ಅವರಿಂದ ಸಿಗ್ನಲ್ ಬಂದ ತಕ್ಷಣ, ಅವರು ಫೋನ್ ಎತ್ತಿ, ಏನ್ ಮಾಡ್ತಿದ್ದೀರಾ ಮೋದಿಜಿ? ಎಂದು ಪ್ರಶ್ನಿಸಿದ್ದು, ನರೇಂದ್ರ ಮೋದಿ ಅವರು ಶರಣಾಗಿ, 'ಯೆಸ್ ಸರ್' ಎಂದು ಟ್ರಂಪ್ ಅವರ ಸೂಚನೆ ಪಾಲಿಸಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

**ಮೋದಿ ಹಾಗೂ ಇಂದಿರಾ ಗಾಂಧಿಗೂ ವ್ಯತ್ಯಾಸವೇನು?:** ಇದೇ ವೇಳೆ, 1971ರ ಯುದ್ಧದ ಸಂದರ್ಭವನ್ನು ರಾಹುಲ್ ಗಾಂಧಿ ನೆನಪಿಸಿಕೊಂಡು ಇಂದಿರಾಗಾಂಧಿ ಹೇಗೆ ಮೋದಿಯವರಿಗಿಂತ ವ್ಯತಿರಿಕ್ತ ನಾಯಕತ್ವ ಹೊಂದಿದ್ದರು ಎಂಬುದನ್ನು ತಿಳಿಸಿದ್ದಾರೆ. 1971ರ ಯುದ್ಧದ ಸಂದರ್ಭದಲ್ಲಿ ಅಮೆರಿಕದ ಒತ್ತಡವಿದ್ದರೂ ಭಾರತ ಗಟ್ಟಿಯಾಗಿ ನಿಂತಿತ್ತು ಎಂದಿರುವ ರಾಹುಲ್ ಗಾಂಧಿ, ಆಗ ಫೋನ್ ಕರೆ ಬರಲಿಲ್ಲ, ಬದಲಿಗೆ ಏಳನೇ ನೌಕಾಪಡೆ ಬಂತು. 1971ರ ಯುದ್ಧದಲ್ಲಿ, ಏಳನೇ ನೌಕಾಪಡೆ, ಶಸ್ತ್ರಾಸ್ತ್ರಗಳು, ವಿಮಾನ ವಾಹಕ ನೌಕೆ ಬಂತು. ಆಗ ಇಂದಿರಾ ಗಾಂಧಿ ಅವರು, ನಾನು ಮಾಡಬೇಕಾದುದನ್ನು ಮಾಡುತ್ತೇನೆ ಎಂದರು. ಇದೇ ವ್ಯತ್ಯಾಸ ಎಂದು ಮೋದಿಯವರನ್ನು ಕುಟುಕಿದ್ದಾರೆ.

## ಪಾಕಿಸ್ತಾನ ಭಯೋತ್ಪಾದನೆಯನ್ನು ತನ್ನ ಹಕ್ಕೆಂದು ಭಾವಿಸಿದೆ: ಜೈಶಂಕರ್

**ನವದೆಹಲಿ:** ಇಸ್ಲಾಮಾಬಾದ್ ದಶಕಗಳಿಂದ ಭಯೋತ್ಪಾದನೆಯನ್ನು ಬಹಿರಂಗವಾಗಿ ಬೆಂಬಲಿಸುತ್ತಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಆರೋಪಿಸಿದ್ದಾರೆ. ಲಕ್ಸೆಂಬರ್ಗ್‌ನಲ್ಲಿ ಭಾರತದ ನೆರೆಹೊರೆಯ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ, ಪಾಕಿಸ್ತಾನವು ನೆರೆಯ ರಾಜ್ಯದ ವಿರುದ್ಧ ಹೊಂದಿರುವ ನೀತಿಗಳನ್ನು ಇಂದು ಬೇರೆ ಯಾವುದೇ ದೇಶ ಅನುಸರಿಸಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ಪಾಕಿಸ್ತಾನ ದಶಕಗಳಿಂದಲೂ ತರಬೇತಿ ಶಿಬಿರಗಳನ್ನು ಹೊಂದಿದ್ದು, ಅವುಗಳಲ್ಲಿ ಹೆಚ್ಚಿನವು ದೊಡ್ಡ ನಗರಗಳಲ್ಲೇವೆ. ಇಲ್ಲಿ ರಾಜ್ಯ ಮಿಲಿಟರಿ ಭಯೋತ್ಪಾದನೆಯನ್ನು ಬೆಂಬಲಿಸಲಾಗುತ್ತಿದೆ. ಇದು ಅವರ ಹಕ್ಕು ಎಂಬಂತೆ ಅವರು ಅದನ್ನು ಸಾಮಾನ್ಯಗೊಳಿಸಲು ಪ್ರಯತ್ನಿಸುತ್ತಾರೆ. ಅಂತಹ ಹಕ್ಕುಗಳು ಇನ್ನು ಮುಂದೆ ವಿಶ್ವಾಸಾರ್ಹತೆಯನ್ನು ಹೊಂದಿರುವುದಿಲ್ಲ.



ಭಾರತವು ತನ್ನ ವಿದೇಶಾಂಗ ನೀತಿಯನ್ನು ರೂಪಿಸುವಾಗ ಅದನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದು ಹೇಳಿದರು. ನವದೆಹಲಿ ಪ್ರತಿ ನೆರೆಹೊರೆಯವರೊಂದಿಗೆ ಅವರ ನಡವಳಿಕೆಯ ಆಧಾರದ ಮೇಲೆ ವ್ಯವಹರಿಸಬೇಕು ಎಂದು ಜೈಶಂಕರ್ ಒತ್ತಿ ಹೇಳಿದ್ದಾರೆ. ನಮೊಂದಿಗೆ ಕೆಲಸ ಮಾಡಲು, ಸಹಾಯಕವಾಗಿ, ಸಕಾರಾತಕವಾಗಿ ವರ್ತಿಸಲು ಇಚ್ಛಿಸುವವರನ್ನು ನಾವು ಅದೇ ರೀತಿಯಲ್ಲಿಯೇ ನಿಭಾಯಿಸಬೇಕಾಗುತ್ತದೆ. ಪಾಕಿಸ್ತಾನದೊಂದಿಗೆ ಕೆಲಸ ಮಾಡುವವರನ್ನು ನಾವು ಬೇರೆ ರೀತಿಯಲ್ಲೇ ನಿಭಾಯಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

## ಹೀಗೂ ಸಾಧ್ಯನಾ? ಅಧಿಕಾರಕ್ಕಾಗಿ ಬಿಜೆಪಿ-ಕಾಂಗ್ರೇಸ್ ಮೈತ್ರಿ

**ಮುಂಬೈ:** ಮಹಾರಾಷ್ಟ್ರದ ಅಂಬರ್ನಾಥ್ ಪುರಸಭೆಯಲ್ಲಿ ಅಚ್ಚರಿಯ ರಾಜಕೀಯ ಬೆಳವಣಿಗೆ ನಡೆದಿದ್ದು ಕಾಂಗ್ರೇಸ್, ಬಿಜೆಪಿ ಮೈತ್ರಿ ಮಾಡಿಕೊಂಡು ಅಧಿಕಾರದ ಗದ್ದುಗೆ ಹಿಡಿದಿವೆ. ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಯನ್ನು ಅಧಿಕಾರದಿಂದ ಹೊರಗಿಡಲಾಗಿದೆ. ಬಿಜೆಪಿ, ಕಾಂಗ್ರೇಸ್ ಮೈತ್ರಿಕೂಟದಲ್ಲಿ ಎನ್‌ಸಿಪಿ ಬಣ ಕೂಡ ಅಧಿಕಾರದ ಭಾಗವಾಗಿದೆ. ರಾಷ್ಟ್ರಮಟ್ಟದಲ್ಲಿ ಕಾಂಗ್ರೇಸ್ ಮುಕ್ತ ಭಾರತ ಮಾಡುವುದಾಗಿ ವಾದಿಸುತ್ತಿದ್ದ ಬಿಜೆಪಿಯೇ ತನ್ನ ಸಾಂಪ್ರದಾಯಿಕ ಪ್ರತಿಸ್ಪರ್ಧಿ ಕಾಂಗ್ರೇಸ್ ಜೊತೆ ಮೈತ್ರಿ ಮಾಡಿಕೊಂಡಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಈ ಮೈತ್ರಿಯ ಫಲವಾಗಿ ಬಿಜೆಪಿಯ ತೇಜಶ್ರೀ ಕರಂಜುಲೆ ಮೇಯರ್ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ಈ ಪುರಸಭೆಯಲ್ಲಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ- 27, ಬಿಜೆಪಿ-16, ಕಾಂಗ್ರೇಸ್-12 ಮತ್ತು ಎನ್‌ಸಿಪಿ (ಅಜಿತ್ ಪವಾರ್)-4 ಸ್ಥಾನಗಳನ್ನು ಪಡೆದಿವೆ. ಅಂಬರ್ನಾಥ್ ಪುರಸಭೆಯು 60 ಸದಸ್ಯರ ಸಂಖ್ಯಾಬಲವನ್ನು ಹೊಂದಿದೆ. ಇಲ್ಲಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ವಿರೋಧ ಪಕ್ಷವಾಗಿದೆ. ಈ ಬೆಳವಣಿಗೆ ಮಹಾರಾಷ್ಟ್ರದಲ್ಲಿ ಬಿಜೆಪಿಯೊಂದಿಗೆ ಸರ್ಕಾರ ಹಂಚಿಕೊಂಡಿರುವ ಶಿವಸೇನೆಯಲ್ಲಿ (ಶಿಂಧೆ) ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. ಕಾಂಗ್ರೇಸ್ ಮುಕ್ತ ಭಾರತದ ಬಗ್ಗೆ ಮಾತನಾಡಿದ ಪಕ್ಷವೇ ಕಾಂಗ್ರೇಸ್ ಜೊತೆಗೆ ಅಧಿಕಾರ ನಡೆಸುತ್ತಿದೆ. ಇದು ಶಿವಸೇನೆಗೆ ಮಾಡಿದ ಮೋಸ ಎಂದು ಶಿವಸೇನೆ ನಾಯಕರು ಆರೋಪಿಸಿದ್ದಾರೆ.

ಒಂದು ವೇಳೆ ನಾವು ಶಿವಸೇನೆಯೊಂದಿಗೆ ಮೈತ್ರಿ ಮಾಡಿಕೊಂಡಿದ್ದರೇ ಅದು ಅಪವಿತ್ರ ಮೈತ್ರಿಯಾಗುತ್ತಿತ್ತು. ಕಳೆದ 25 ವರ್ಷಗಳಿಂದ ಇಲ್ಲಿ ಶಿವಸೇನೆ ಭ್ರಷ್ಟಾಚಾರ ನಡೆಸುತ್ತ ಬಂದಿದೆ ಎಂದು ಸ್ಥಳೀಯ ಬಿಜೆಪಿ ನಾಯಕ ಜಿ. ಪಾಟೀಲ್ ಪ್ರತಿಕ್ರಿಯೆ ನೀಡಿದ್ದಾರೆ. ನಾವು ಮೈತ್ರಿಗೆ ಹಲವು ಬಾರಿ ಪ್ರಯತ್ನಿಸಿದರೂ ಅವರಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಸಿಗಲಿಲ್ಲ ಎಂದು ಅವರು ಹೇಳಿದ್ದಾರೆ.

# ಹಮಾಸ್ ಲಷ್ಕರ್ ಉಗ್ರ ನಾಯಕರ ಭೇಟಿ

## ಅಮೆರಿಕಾಗೆ ಸೆಡ್ಡು ಹೊಡೆಯಲು ನಡೀತಿದ್ಯಾ ಭಯೋತ್ಪಾದಕ ಪ್ಲ್ಯಾನ್

**ಇಸ್ಲಾಮಾಬಾದ್:** ಭಾರತ ಹಾಗೂ ಇಸ್ರೇಲ್ ಇವರೆಡಕ್ಕೂ ಇರುವ ಪ್ರಮುಖ ಭದ್ರತಾ ಸಮಸ್ಯೆಗಳೆಂದರೆ ನೆರೆ ರಾಷ್ಟ್ರಗಳಿಂದಿರುವ ಭಯೋತ್ಪಾದನಾ ಸಂಘಟನೆಗಳ ಕಾರ್ಯ ಚಟುವಟಿಕೆ. ಭಾರತ ದಶಕಗಳಿಂದಲೂ ಪಾಕಿಸ್ತಾನದ ಹಲವು ಭಯೋತ್ಪಾದಕ ಸಂಘಟನೆಗಳ ವಿರುದ್ಧ ಅದರಲ್ಲೂ ಪ್ರಮುಖವಾಗಿ ಲಷ್ಕರ್ ಉಗ್ರ ಸಂಘಟನೆ ವಿರುದ್ಧ ನಿರಂತರ ಹೋರಾಡುತ್ತಿದೆ. ಹಾಗೆಯೇ ಇಸ್ರೇಲ್ ಸಹ ಹಮಾಸ್ ಎಂಬ ಬಂಡುಕೋರರು ವಿರುದ್ಧ ಹೋರಾಟ ನಡೆಸುತ್ತಿದ್ದೆ. ಈ ಕುರಿತು ಸ್ವತಃ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸಹ ಹೇಳಿಕೊಂಡಿದ್ದರು.ಈಗ ಉಭಯ ದೇಶಗಳು ಎದುರಿಸುತ್ತಿರುವ ಉಗ್ರ ಸಂಘಟನೆಗಳ ನಾಯಕರು ಪಾಕಿಸ್ತಾನದಲ್ಲಿ ಈಗ ಒಂದೆಡೆ ಸೇರಿದ್ದಾರೆ.ಇದು ಅಮೆರಿಕಾಗೂ ಸವಾಲಾಗುವ ಪರಿಸ್ಥಿತಿ ಎದುರಾಗಬಹುದು.

ಪಾಕಿಸ್ತಾನದ ಗುಜ್ರಾನ್‌ವಾಲಾದಲ್ಲಿ ಪಾಕಿಸ್ತಾನದ ರಾಜಕೀಯ ಪಕ್ಷವಾದ ಪಾಕಿಸ್ತಾನ್ ಮರ್ಕಾಜಿ ಮುಸ್ಲಿಂ ಲೀಗ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಮಾಸ್, ಲಷ್ಕರ್-ಎ-ತೈಬಾ ಭಯೋತ್ಪಾದಕ ಸಂಘಟನೆಗಳ ನಾಯಕರ ಭೇಟಿ ನಡೆದಿದೆ. ಈ ಸಭೆಯಲ್ಲಿ ಹಮಾಸ್‌ನ ಹಿರಿಯ ಕಮಾಂಡರ್ ನಾಜಿ ಝುಹೀರ್, LeT ಕಮಾಂಡರ್ ರಶೀದ್ ಅಲಿ ಸಂದು ಭೇಟಿಯಾಗಿದ್ದಾರೆ. ಇದು ಭಯೋತ್ಪಾದಕ ಸಂಘಟನೆಗಳಾದ ಎರಡೂ ಗುಂಪುಗಳ ನಡುವಿನ ಸಂಬಂಧ ಗಟ್ಟಿಗೊಳ್ಳುತ್ತಿರುವುದನ್ನು ಸೂಚಿಸುವಂತಿದೆ.

- **ಪಾಕಿಸ್ತಾನದಲ್ಲಿ ಭೇಟಿಯಾದ ಹಮಾಸ್ ಹಾಗೂ ಲಷ್ಕರ್ ಭಯೋತ್ಪಾದಕ ಸಂಘಟನೆ ನಾಯಕರು**
- **ನಿರಂತರವಾಗಿ ಸಂಪರ್ಕದಲ್ಲಿರುವ ಲಷ್ಕರ್ ಸಂಪರ್ಕದಲ್ಲಿರುವ ಹಮಾಸ್ ಕಮಾಂಡರ್ ಝುಹೀರ್ ಪಾಕಿಸ್ತಾನಕ್ಕೆ ಭೇಟಿ ನೀಡುವ ಹಿಂದಿದ್ಯಾ ಭಾರಿ ಹುನ್ನಾರಾ?**
- **ಅಮೆರಿಕಾದ ಗಾಜ ಸ್ಥಿರೀಕರಣಕ್ಕೆ ಪಾಕ್ ಸೈನಿಕರ ಪಡೆ ನಿಯೋಜನೆ ವರದಿ ಬೆನ್ನಲ್ಲೇ ಪಾಕಿಸ್ತಾನಕ್ಕೆ ಭೇಟಿ ಹಿಂದಿದ್ಯಾ ಉಗ್ರ ರಹಸ್ಯ?**

PMML ಕಾರ್ಯಕ್ರಮದಲ್ಲಿ ಹಮಾಸ್ ಕಮಾಂಡರ್ ಝುಹೀರ್ ಮುಖ್ಯ ಅತಿಥಿಯಾಗಿ ಆಗಮಿಸಿದ್ದು,ಅಮೆರಿಕಾದ ಅಂಗಲಾಚಿ ನಿಂತಿರುವ ಪಾಕಿಸ್ತಾನದಲ್ಲಿ ಅಮೆರಿಕಾದಿಂದ ನಿಷೇಧಿಸಲ್ಪಟ್ಟಿರುವ ಈ ಎರಡು ಭಯೋತ್ಪಾದಕ ಸಂಘಟನೆಗಳ ನಡುವಿನ ಸಂಬಂಧದ ಪ್ರದರ್ಶನ ಮಾಡುತ್ತಿದ್ದು, ಪಾಕಿಸ್ತಾನದ ದ್ವಂದ್ವ ನಿಲ್ಲುವನ್ನು ಎತ್ತಿ ತೋರಿಸುವಂತಿದೆ.

ಪಾಕಿಸ್ತಾನದಲ್ಲಿ ಹಮಾಸ್ ನಾಯಕರು, LeT ಭಯೋತ್ಪಾದನ ಸಂಗಟನೆಗಳ ಭೇಟಿ ನಿರಂತರವಾಗಿ ನಡೆಯುತ್ತಲೇ ಇದೆ. ಅದರ ವಿವರ ಮುಂದೆ ಓದೋಣ ಆದರೆ, ಅದಕ್ಕೂ ಮೊದಲು ಈ ಬಾರಿ ಭೇಟಿ ಸಮಯ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದ್ದು, ಇದಕ್ಕೆ ಕಾರಣ ನೋಡೋಣ.



**ಯುಎಸ್‌ಗೆ ಸೆಡ್ಡು ಹೊಡೆಯುವ ತಂತ್ರ ರೂಪಿಸುತ್ತಿದ್ಯಾ ಹಮಾಸ್ LeT?:** ಈ ಬಾರಿ ಭೇಟಿ ಸಾಕಷ್ಟು ಕುತೂಹಲ ಮೂಡಿಸಿದೆ ಇದಕ್ಕೆ ಕಾರಣ ಇಸ್ರೇಲ್-ಹಮಾಸ್ ನಡುವಿನ ಸುಧೀರ್ಘ ಯುದ್ಧ ಅಮೆರಿಕಾ ಮಧ್ಯಸ್ಥಿಕೆಯಲ್ಲಿ ಕದನ ವಿರಾಮ ಒಪ್ಪಂದದ ಮೂಲಕ ತೆರೆಬಿದ್ದಿತ್ತು. ಈ ಒಪ್ಪಂದದ ಪ್ರಕಾರ ಪ್ಯಾಲೆಸ್ತಿನ್ ಸ್ವತಂತ್ರ ರಾಷ್ಟ್ರವಾಗಿ ಘೋಷಿಸುವುದು ಸೇರಿದಂತೆ ಅಲ್ಲಿನ ಶಸಸ್ತ್ರ ಪಡೆಗಳಾದ ಹಮಾಸ್ ಹಾಗೂ ಹೆಜ್ಬುಲ್ಲಾ ಬಂಡುಕೋರರನ್ನು ನಿರ್ನಾಮಗೊಳಿಸಲು ಇತ್ತೀಚೆಗಷ್ಟೇ ಟ್ರಂಪ್ ಗಾಜದಲ್ಲಿ ಭವಿಷ್ಯದಲ್ಲಿ ಸ್ಥಾಪನೆಯಾಗಲಿರುವ ಸ್ಥಿರೀಕರಣ ಪಡೆಗೆ ಪಾಕಿಸ್ತಾನ ಸೇನೆಯನ್ನು ಕಳುಹಿಸುವ ಮಾತುಗಳನ್ನಾಡಿದ್ದರು.

**ಅಮೆರಿಕಾಗೂ ಸವಾಲಾಗುವ ಪರಿಸ್ಥಿತಿ**

**ಭಾರತ ಹಾಗೂ ಇಸ್ರೇಲ್ ಉಭಯದೇಶಗಳಿಗೂ ಭದ್ರತಾ ಸವಾಲಾಗಿರುವುದು ಭಯೋತ್ಪಾದಕ ಸಂಘಟನೆಗಳು. ಈಗ ಆ ಎರಡು ಭಯೋತ್ಪಾದಕ ಸಂಘಟನೆಗಳ ನಾಯಕರು ಒಂದೆಡೆ ಸೇರಿರುವುದು ಅಮೆರಿಕಾಗೂ ಸವಾಲಾಗುವ ಪರಿಸ್ಥಿತಿ ಎದುರಾಗಬಹುದು. ಪಾಕಿಸ್ತಾನದ ಗುಜ್ರಾನ್ ವಾಲಾದಲ್ಲಿ ಹಮಾಸ್ ಮತ್ತು ಲಷ್ಕರ್-ಎ-ತೈಬಾ ಭಯೋತ್ಪಾದಕ ಸಂಘಟನೆಗಳ ನಾಯಕರು ಭೇಟಿಯಾಗಿದ್ದಾರೆ.**

ಇದಾದ ಕೆಲ ದಿನಗಳಲ್ಲೇ ಹಮಾಸ್ ನಾಯಕರು ಪಾಕಿಸ್ತಾನದ ಭಯೋತ್ಪಾದಕ ಸಂಘಟನೆಗಳೊಂದಿಗೆ ಭೇಟಿಯಾಗಿ ಮಾತುಕತೆ ನಡೆಸಿರುವುದು ಯುಎಸ್ ಆಲೋಚನೆಗಳಿಗೆ ಸೆಡ್ಡು ಹೊಡೆದು ಅದನ್ನು ತಡೆಯುವ ಪ್ರಯತ್ನ ಮಾಡುತ್ತಿದೆಯೇ ಎಂಬ ಅನುಮಾನಗಳಿಗೆ ಕಾರಣವಾಗಿದೆ. ಇದಕ್ಕೂ ಮೊದಲು 2024 ರಲ್ಲಿ 2 ಸಾರಿ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದ ಝುಹೀರ್,ಜನವರಿಯಲ್ಲಿ ಕರಾಚಿ ಭೇಟಿ ಪ್ರೆಸ್ ಕ್ಲಬ್‌ನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ್ದರು. ನಂತರ ಏಪ್ರಿಲ್ ನಲ್ಲಿ ಇಸ್ಲಾಮಾಬಾದ್‌ಗೆ ತೆರಳಿ, ಅಲ್ಲಿನ ಇಸ್ಲಾಮಾಬಾದ್ ಹೈಕೋರ್ಟ್ ಬಾರ್ ಅಸೋಸಿಯೇಷನ್‌ನಿಂದ ಸನ್ಮಾನ ಸ್ವೀಕರಿಸಿದ್ದರು. ಈ ಹಿಂದೆ 2023ರ ಅಕ್ಟೋಬರ್ ತಿಂಗಳಿನಲ್ಲಿ ಇಸ್ರೇಲ್ ಮೇಲೆ ಹಮಾಸ್ ನಡೆಸಿದ ಭಯೋತ್ಪಾದಕ ದಾಳಿಯ ಒಂದು ವಾರದ ನಂತರ ಝುಹೀರ್ ಪಾಕಿಸ್ತಾನಕ್ಕೆ ಭೇಟಿ ನೀಡಿ, ದೇಶದ ಅತಿದೊಡ್ಡ ಇಸ್ಲಾಮಿಸ್ಟ್ ರಾಜಕೀಯ ಪಕ್ಷವಾದ ಜಮಿಯತ್ ಉಲೇಮಾ-ಎ-ಇಸ್ಲಾಂ ಮುಖ್ಯಸ್ಥ ಮೌಲಾನಾ ಫಝುಲ್-ಉರ್-ರೆಹಮಾನ್ ಅವರನ್ನು ಭೇಟಿಯಾಗಿದ್ದರು.

ಅದೇ ದಿನ, ಅವರು ಪೇಶಾವರ್‌ನಲ್ಲಿ ನಡೆದ ಮುಫ್ತಿ ಮಹಮೂದ್ ಸಮ್ಮೇಳನದಲ್ಲಿ ಮಾತನಾಡಿದ್ದರು. ನಂತರ ಅದೇ ತಿಂಗಳಿನ 29ರಂದು ಕ್ವೆಟ್ಟಾದಲ್ಲಿ ನಡೆದ ಅಲ್-ಅಕ್ಸಾ ಸ್ಟಾರ್ಮ್ ಸಮ್ಮೇಳನದಲ್ಲಿ ಭಾಗಿಯಾಗಿದ್ದರು. ಹೀಗೆ ಹಮಾಸ್ ನಾಯಕರು ನಿರಂತರವಾಗಿ ಪಾಕಿಸ್ತಾನದ ಉಗ್ರ ಸಂಘಟನೆಗಳ ನಾಯಕರೊಂದಿಗೆ ಸಂಪರ್ಕದಲ್ಲಿರುವುದು, ಪಾಕಿಸ್ತಾನಕ್ಕೆ ಭೇಟಿ ನೀಡುವುದು ಸೇರಿದಂತೆ ಭಾರತ ವಿರೋಧಿ ಹೇಳಿಕೆಗಳು ಕಾರ್ಯಕ್ರಮಗಳಲ್ಲಿ ಭಾಗಹಿಸುವುದನ್ನು ನಡೆಸುತ್ತಿದ್ದಾರೆ. ಇದರ ಜೊತೆಗೆ ಟ್ರಂಪ್ ಗಾಜದಲ್ಲಿ ಹಮಾಸ್ ನಿಶ್ಯಸ್ತ್ರೀಕರಣದ ಬಗ್ಗೆ ಹೇಳಿದ ಕೆಲ ದಿನಗಳಲ್ಲೇ ಈ ಬೆಳವಣಿಗೆಯಾಗಿರುವುದು ಯಾವ ರೀತಿ ಉಗ್ರ ತಂತ್ರಗಾರಿಕೆ ನಡೆಸಿದ್ದಾರೆ.

### ನಿರಂತರ ಸಂಪರ್ಕದಲ್ಲಿರುವ ಹಮಾಸ್ LeT ಭಯೋತ್ಪಾದಕ ಸಂಘಟನೆ ನಾಯಕರು

**ಹಮಾಸ್ ಹಿರಿಯ ಕಮಾಂಡರ್ ನಾಜಿ ಝುಹೀರ್ ಪಾಕಿಸ್ತಾನಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲೇನಲ್ಲ. ಈ ಹಿಂದೆಯೂ ಹಲವು ಬಾರಿ ಪಾಕಿಸ್ತಾನಕ್ಕೆ ಝುಹೀರ್ ಪ್ರಯಾಣ ಬೆಳಸಿದ್ದಾರೆ. 1 ವರ್ಷದ ಹಿಂದೆ ಫೆಬ್ರವರಿ 2025ರಲ್ಲೂ ಸಹ ಪಾಕಿಸ್ತಾನ ಆಕ್ರಮಿತ ಕಾಶ್ಮೀರಕ್ಕೆ ಹಮಾಸ್ ಅಧಿಕಾರಿಗಳೊಂದಿಗೆ ಝುಹೀರ್ ಭೇಟಿ ನೀಡಿದ್ದರು. ಈ ಭೇಟಿ ವೇಳೆ ಝುಹೀರ್ LeT ಮತ್ತು ಜೈಶ್-ಎ-ಮೊಹಮ್ಮದ್ ಕಮಾಂಡರ್‌ಗಳೊಂದಿಗೆ ಸೇರಿ ಭಾರತ ವಿರೋಧಿ ರ್‍ಯಾಲಿಯಲ್ಲಿ ಮಾತನಾಡಿದ್ದರು. ಇದಾದ ಕೆಲವೇ ವಾರಗಳಲ್ಲಿ ಪೆಹಲ್ಗಾಮ್‌ನಲ್ಲಿ ಭಯೋತ್ಪಾದಕ ದಾಳಿ ನಡೆದದ್ದನ್ನು ನಾವು ಇಲ್ಲಿ ಸ್ಮರಿಸಿಕೊಳ್ಳಬಹುದು.**

## ಮಿನಿ ನ್ಯೂಸ್

### ದೂರವಾಗಿದ್ದ ಪತ್ನಿಯನ್ನು ಮನೆಗೆ ಕರೆತಂದು ಚಾಕು ಇರಿದ ಪತಿ

**ಚಂಡೀಗಢ:** ಪರಿತ್ಯಕ್ತ ಪತ್ನಿಯನ್ನು ಮತ್ತೆ ಮನೆಗೆ ಕರೆದುಕೊಂಡು ಬಂದ ಪತಿ, ಸೊಸೆಗೆ ಬೆಳ್ಳಿ ಕಾಲುಂಗರ ನೀಡಿದ ಆಕೆಯನ್ನು ಚಾಕುವಿನಿಂದ ಇರಿದು ಹಲ್ಲೆ ಮಾಡಿರುವ ಘಟನೆ ಧನಾಸ್‌ನಲ್ಲಿ ನಡೆದಿದೆ. ಪಾರ್ವತಿ(40) ಚಾಕು ಇರಿತಕ್ಕೊಳಗಾದ ಪತ್ನಿ. ಮಹಾರಾಜ್ ದಿನ್ ಹಲ್ಲೆ ಮಾಡಿದ ಪತಿ.
**ಘಟನೆ ವಿವರ:** ದಂಪತಿ ಕೆಲವು ವರ್ಷಗಳಿಂದ ಬೇರೆಯಾಗಿ ವಾಸಿಸುತ್ತಿದ್ದರು. ಆದರೆ ಪತಿ ದೀನ್ ಅವರು ಪಾರ್ವತಿ ಅವರನ್ನು ಬಲವಂತವಾಗಿ ಮತ್ತೆ ಮನೆಗೆ ಕರೆತಂದಿದ್ದರು. ಮನೆಗೆ ಬಂದ ಪಾರ್ವತಿ ಅವರು ತನ್ನ ಸೊಸೆಗೆ ಕಾಲುಂಗುರಗಳನ್ನು ಉಡುಗೊರೆಯಾಗಿ ನೀಡಿದ್ದು, ಇದಕ್ಕೆ ಕೋಪಗೊಂಡ ದೀನ್ ಅವಳೊಂದಿಗೆ ವಾಗ್ವಾದ ನಡೆಸಿ, ಅಡುಗೆ ಮನೆಯಲ್ಲಿದ್ದ ಚಾಕುವನ್ನು ತೆಗೆದುಕೊಂಡು ಅವಳ ಹೊಟ್ಟೆಗೆ ಚುಚ್ಚಿ ಹಿಂಸಾಚಾರ ಮೆರೆದು ಸ್ಥಳದಿಂದ ಪರಾರಿಯಾಗಿದ್ದಾನೆ. ಕೂಡಲೇ ಕುಟುಂಬ ಸದಸ್ಯರು ಪಾರ್ವತಿ ಅವರನ್ನು ಜಿಎಂಎಸ್ ಎಚ್-16 ಆಸ್ಪತ್ರೆಗೆ ದಾಖಲಿಸಿದ್ದಾರೆ. ಪಾರ್ವತಿ ಅವರ ಪರಿಸ್ಥಿತಿ ಚಿಂತಾಜನಕವಾಗಿದ್ದು, ಚಿಕಿತ್ಸೆ ಮುಂದುವರೆದಿದೆ ಎಂದು ವೈದ್ಯರು ತಿಳಿಸಿದ್ದಾರೆ. ಘಟನೆ ಸಂಬಂಧ ಆಕೆಯ ಮಗ ರಾಕೇಶ್ ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕಾಗಮಿಸಿದ ಸಾರಂಗಪುರ ಪೊಲೀಸರು ರಕ್ತಸಿಕ್ತ ಚಾಕು ಮತ್ತು ಇತರ ಪುರಾವೆಗಳನ್ನು ಸಂಗ್ರಹಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಮತ್ತು ದಿನ್ ಅವರನ್ನು ಮಂಗಳವಾರ ಬಂಧಿಸಲಾಯಿತು. ಆರೋಪಿ ಪಾರ್ವತಿಯ ಮೇಲೆ ಹಲ್ಲೆ ಮಾಡಿದ ಇತಿಹಾಸವಿದೆ ಎಂದು ಪೊಲೀಸರು ದೃಢಪಡಿಸಿದರು.

### ಬಿಜೆಪಿ ಜೊತೆ ಮೈತ್ರಿಗೆ ಹೋದ ಕಾಂಗ್ರೇಸ್‌ನ 12 ಕೌನ್ಸಿಲರ್ ವಜಾ

**ಮುಂಬೈ:** ಚುನಾವಣೆಯ ನಂತರ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದ ಹಿನ್ನೆಲೆ ಮಹಾರಾಷ್ಟ್ರ ಅಂಬರನಾಥ್ ಪುರಸಭೆಗೆ ಕಾಂಗ್ರೇಸ್‌ನಿಂದ ಆಯ್ಕೆಯಾಗಿದ್ದ 12 ಕೌನ್ಸಿಲರ್‌ಗಳನ್ನು ವಜಾ ಮಾಡಲಾಗಿದೆ. ಠಾಣೆಯ ಅಂಬರನಾಥ್ ಪುರಸಭೆಯಲ್ಲಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ 27 ಸ್ಥಾನಗಳೊಂದಿಗೆ ಏಕೈಕ ದೊಡ್ಡಪಕ್ಷವಾಗಿ ಹೊರಹೊಮ್ಮಿದ್ದರೂ, ಬಹುಮತಕ್ಕೆ ಬೇಕಾದ 31 ಸ್ಥಾನಗಳಿಗಾಗಿ ಕಾಂಗ್ರೇಸ್, ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಜೊತೆ ಬಿಜೆಪಿ ಹೊಂದಾಣಿಕೆ ಮಾಡಿಕೊಂಡಿತ್ತು. ಅಂಬರನಾಥ್ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಪ್ರದೀಪ್ ಪಾಟೀಲ್ ಅವರನ್ನು ಸಹ ವಜಾ ಮಾಡಲಾಗಿದೆ. ಅಂಬರನಾಥ್ ಬ್ಲಾಕ್ ಅನ್ನೂ ವಿಸರ್ಜಿಸಿರುವುದಾಗಿ ಮಹಾರಾಷ್ಟ್ರದ ಕಾಂಗ್ರೇಸ್ ಘಟಕ ಪತ್ರದಲ್ಲಿ ತಿಳಿಸಿದೆ. ಬಿಜೆಪಿ ಜೊತೆ ಹೊಂದಾಣಿಕೆ ಕುರಿತಂತೆ ನಮಗೆ ಮಾಹಿತಿ ನೀಡಿರಲಿಲ್ಲ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಪಕ್ಷೇತರ ಕೌನ್ಸಿಲರ್‌ಗಳು ಸೇರಿದಂತೆ ಹಲವು ಕೌನ್ಸಿಲರ್‌ಗಳು ಸೇರಿ ಅಂಬರನಾಥ್ ವಿಕಾಸ್ ಅಘಾಡಿ ರಚಿಸಿದ್ದರು. ಕಾಂಗ್ರೇಸ್, ಬಿಜೆಪಿ ನಡುವೆ ಯಾವುದೇ ಅಧಿಕೃತ ಮೈತ್ರಿ ಇಲ್ಲ.ಆದಾಗ್ಯೂ, ಹೊಂದಾಣಿಕೆ ಮಾಡಿಕೊಳ್ಳಲಾಗಿತ್ತು. ಹಾಗಾಗಿ, ಶೋಕಾಸ್‌ನೋಟಿಸ್ ನೀಡಲಾಗಿತ್ತು ಎಂದು ಕಾಂಗ್ರೇಸ್ ವಕ್ತಾರ ಸಚಿನ್‌ಸಾವಂತ್ ಹೇಳಿದ್ದಾರೆ. ಡಿಸೆಂಬರ್ 31ರಂದು ಬಿಜೆಪಿ ಕಚೇರಿಯಲ್ಲಿ ನಡೆದ ಸಭೆ ಅನ್ವಯ ಕಾಂಗ್ರೇಸ್‌ನ 12 ಸದಸ್ಯರು, ಬಿಜೆಪಿಯ 14 ಸದಸ್ಯರು, ಎನ್‌ಸಿಪಿಯ 4, ಪಕ್ಷೇತರ ಒಬ್ಬ ಸದಸ್ಯ ಸೇರಿ ಪುರಸಭೆಯಲ್ಲಿ ಹೊಂದಾಣಿಕೆ ಮೂಲಕ ಅಧಿಕಾರಕ್ಕೇರಲು ಮುಂದಾಗಿದ್ದರು. 60 ಸದಸ್ಯ ಬಲದ ಅಂಬರನಾಥ್ ಪುರಸಭೆಗೆ ಡಿಸೆಂಬರ್ 20ರಂದು ನಡೆದ ಚುನಾವಣೆಯಲ್ಲಿ ಶಿವಸೇನಾ 27 ಸ್ಥಾನ ಗೆದ್ದಿತ್ತು. ಅಧಿಕಾರಕ್ಕೇರಲು 4 ಸ್ಥಾನಗಳ ಕೊರತೆ ಇತ್ತು. ಬಿಜೆಪಿ 14, ಕಾಂಗ್ರೇಸ್ 12, ಎನ್‌ಸಿಪಿ 4, ಪಕ್ಷೇತರ ಅಭ್ಯರ್ಥಿ ಒಂದು ಸ್ಥಾನದಲ್ಲಿ ಆಯ್ಕೆಯಾಗಿದ್ದರು.

## ಡಿಎಂಕೆ 'ಹಿಂದೂ ವಿರೋಧಿ' ಸರ್ಕಾರ: ಅಣ್ಣಾಮಲೈ ಟೀಕೆ

**ಚೆನ್ನೈ:** ತಿರುಪರನ್‌ಕುಂದ್ರಂ ವಿಚಾರದಲ್ಲಿ ತಮಿಳುನಾಡು ಸಚಿವ ರಘುಪತಿ ಅವರು ನೀಡಿರುವ ಹೇಳಿಕೆ ಗಮನಿಸಿದರೆ, ಡಿಎಂಕೆ ಸರ್ಕಾರ 'ಹಿಂದೂ ವಿರೋಧಿ' ಎಂಬುದಕ್ಕೆ ಸಿಕ್ಕ ಸ್ಪಷ್ಟ ಪುರಾವೆಯಾಗಿದೆ ಎಂದು ಬಿಜೆಪಿ ನಾಯಕ ಕೆ. ಅಣ್ಣಾಮಲೈ ವಾಗ್ದಾಳಿ ನಡೆಸಿದ್ದಾರೆ. ತಿರುಪರನ್ ಕುಂದ್ರಂ ಬೆಟ್ಟದ ಮೇಲೆ ದೀಪ ಬೆಳಗಲು ಅವಕಾಶ ಅವಕಾಶ ನೀಡಿರುವ ಏಕಸದಸ್ಯ ಪೀಠದ ತೀರ್ಪನ್ನು ಮದ್ರಾಸ್ ಹೈಕೋರ್ಟ್ ಎತ್ತಿ ಹಿಡಿದಿರುವುದಕ್ಕೆ ಸಚಿವ ರಘುಪತಿ ಅವರು 'ಶವಗಳನ್ನು ಸ್ಮಶಾನದಲ್ಲಿ ಮಾತ್ರ ಸುಡಬೇಕು. ಪದ್ಧತಿಯನ್ನು ಬದಲಾಯಿಸಬಾರದು' ಎಂದು ಪ್ರತಿಕ್ರಿಯೆ ನೀಡಿದ್ದರು. ಈ ಹೇಳಿಕೆಗೆ ಅಣ್ಣಾಮಲೈ ಪ್ರತಿಕ್ರಿಯೆ ನೀಡಿದ್ದಾರೆ. ಅಣ್ಣಾಮಲೈ ಅವರು ಜನವರಿ 6ರಂದು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಒಂದನ್ನು ಹಂಚಿಕೊಂಡು, 'ಮುಖ್ಯಮಂತ್ರಿ ಸೇರಿ ಡಿಎಂಕೆ ಸದಸ್ಯರು ತಮಿಳುನಾಡು ಜನರ ಶತಮಾನಗಳಷ್ಟು ಹಳೆಯದಾದ ಆಧ್ಯಾತ್ಮಿಕ ಸಂಪ್ರದಾಯಗಳನ್ನು ಅವಮಾನಿಸುತ್ತಿದ್ದಾರೆ.




ಹಿಂದೂಗಳ ಪೂಜಾ ಹಕ್ಕುಗಳು, ಸಂಸ್ಕೃತಿಯನ್ನು ಅಪಹಾಸ್ಯ ಮಾಡಲು ನಿರತವಾಗಿದ್ದಾರೆ. ಈಗಲೂ ಅದನ್ನೇ ಮುಂದುವರೆಸಿದ್ದಾರೆ. ಇದು ಡಿಎಂಕೆ ಸರ್ಕಾರದ ಹಿಂದೂ ವಿರೋಧಿ ಮನಸ್ಥಿತಿಯನ್ನು ಸಾಬೀತುಪಡಿಸುತ್ತದೆ ಎಂದಿದ್ದಾರೆ. ಜನರ ನಡುವೆ ಒಡೆದು ಆಳುವ ನೀತಿಯನ್ನು ಡಿಎಂಕೆ ಸದಸ್ಯರು ಅನುಸರಿಸಿಕೊಂಡು ಬಂದಿದ್ದಾರೆ. ಅವರ ಕೃತ್ಯಗಳನ್ನು ಗೌರವಾನ್ವಿತ ನ್ಯಾಯಾಲಯ ಎತ್ತಿ ತೋರಿಸಿದಾಗ, ನ್ಯಾಯಾಲಯದ ತೀರ್ಪನ್ನೇ ಅವಮಾನಿಸುವ ಹಂತಕ್ಕೆ ಹೋಗುತ್ತಾರೆ ಎಂದು ಅವರು ಕಿಡಿಕಾರಿದ್ದಾರೆ. ತಮಿಳುನಾಡಿನ ಜನರು ಡಿಎಂಕೆ ನಾಯಕರಿಗೆ ಶೀಘ್ರದಲ್ಲೆ ತಕ್ಕ ಪಾಠ ಕಲಿಸುತ್ತಾರೆ ಎಂದು ಅವರು ಹೇಳಿದರು. ತಿರುಪರನ್‌ಕುಂದ್ರಂ ಬೆಟ್ಟದ ಮೇಲೆ ದೀಪ ಬೆಳಗಲು ಅವಕಾಶ ನೀಡಿರುವ ಏಕಸದಸ್ಯ ಪೀಠದ ಆದೇಶವನ್ನು ಮದ್ರಾಸ್ ಹೈಕೋರ್ಟ್ ಎತ್ತಿ ಹಿಡಿದಿರುವುದಕ್ಕೆ ತಮಿಳುನಾಡು ಸಚಿವ ರಘುಪತಿ, ತಮಿಳರ ಸಂಸ್ಕೃತಿ, ಪರಂಪರೆಯನ್ನು ರಕ್ಷಿಸಬೇಕು. ಯಾರೊಬ್ಬರ ಕೋರಿಕೆಯ ಮೇರೆಗೆ ಇಲ್ಲಿಯವರೆಗೆ ಅಸ್ತಿತ್ವದಲ್ಲಿಲ್ಲದ ಪದ್ಧತಿ ಅಥವಾ ಸಂಪ್ರದಾಯವನ್ನು ಜಾರಿಗೆ ತರಲು ಸಾಧ್ಯವಿಲ್ಲ ಎಂದು ಹೇಳಿದ್ದರು.

## ಸಿಂಗಪುರದಲ್ಲಿ ಸೇನಾ ತರಬೇತಿಗೆ ಸೇರಿದ ಲಾಲೂ ಪ್ರಸಾದ್ ಮೊಮ್ಮಗ

**ನವದೆಹಲಿ:** ಆರ್‌ಜೆಡಿ ಮುಖ್ಯಸ್ಥ ಲಾಲೂ ಪ್ರಸಾದ್ ಯಾದವ್ ಮಗಳು ರೋಹಿಣಿ ಆಚಾರ್ಯ ಅವರ ಹಿರಿಯ ಮಗ ಆದಿತ್ಯ ಅವರು ಸಿಂಗಪುರದಲ್ಲಿ ಮೂಲಭೂತ ಸೇನಾ ತರಬೇತಿಯನ್ನು ಪ್ರಾರಂಭಿಸಿದ್ದಾರೆ. ಈ ಬಗ್ಗೆ ರೋಹಿಣಿ ಆಚಾರ್ಯ ಅವರು ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಇಂದು ನನ್ನ ಹೃದಯ ಹೆಮ್ಮೆಯಿಂದ ತುಂಬಿದೆ. ಪದವಿ ಪೂರ್ವ ಶಿಕ್ಷಣ ಮುಗಿಸಿದ ನಂತರ ನನ್ನ ಹಿರಿಯ ಮಗ ಆದಿತ್ಯ ಕೇವಲ 18 ವರ್ಷ ವಯಸ್ಸಿನಲ್ಲಿ ಎರಡು ವರ್ಷಗಳ ಸೇನಾ ತರಬೇತಿ ಆರಂಭಿಸಿದ್ದಾನೆ ಎಂದು ಅವರು ಬರೆದುಕೊಂಡಿದ್ದಾರೆ. ಆದಿತ್ಯ…. ನೀವು ಧೈರ್ಯಶಾಲಿ ಮತ್ತು ಶಿಸ್ತುಬದ್ಧ ವ್ಯಕ್ತಿ. ಅಲ್ಲಿ ಹೋಗಿ ಒಳ್ಳೆಯ ಕೆಲಸಗಳನ್ನು ಮಾಡು. ಯೋಧರು ಜೀವನದ ಕಠಿಣ ಯುದ್ಧಗಳಿಂದ ರೂಪಿಸಲ್ಪಟ್ಟಿದ್ದಾರೆ ಎಂಬುದನ್ನು ಮರೆಯದಿರು. ನಮ್ಮೆಲ್ಲರ ಪ್ರೀತಿ, ಪ್ರೋತ್ಸಾಹ ಯಾವಾಗಲೂ ನಿನ್ನೊಂದಿಗೆ ಇರುತ್ತದೆ ಎಂದು ಹೇಳಿದ್ದಾರೆ.

## ದೆಹಲಿಯಲ್ಲಿ ಮಸೀದಿ ಬಳಿಯ ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಕಲ್ಲು ತೂರಾಟ, ಪೊಲೀಸರಿಗೆ ಗಾಯ



**ನವದೆಹಲಿ:** ಇಲ್ಲಿನ ರಾಮಲೀಲಾ ಮೈದಾನ ಪ್ರದೇಶದಲ್ಲಿನ ಸೈಯ್ಯದ್ ಫೈಜ್ ಇಲಾಹಿ ಮಸೀದಿಯ ಸಮೀಪ ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಹಿಂಸಾಚಾರ ಭುಗಿಲೆದ್ದಿದ್ದು ಕನಿಷ್ಠ ಪಕ್ಷ ಐವರು ಪೊಲೀಸರು ಗಾಯಗೊಂಡಿದ್ದಾರೆ. ದೆಹಲಿ ಹೈಕೋರ್ಟ್‌ನ ನಿರ್ದೇಶನದ ಮೇರೆಗೆ ದೆಹಲಿ ಮುನಿಸಿಪಲ್ ಕಾರ್ಪೊರೇಷನ್ ವತಿಯಿಂದ ತುರ್ಕಮನ್ ಗೇಟ್ ಬಳಿ ಮಸೀದಿ ಮತ್ತು ಹತ್ತಿರದ ಸಶಾನವೊಂದಕ್ಕೆ ಹೊಂದಿಕೊಂಡಿದ್ದ ಅಕ್ರಮ ಕಟ್ಟಡ ನೆಲಸಮ ಮಾಡುತ್ತಿದ್ದಾಗ ಘರ್ಷಣೆ ಉಂಟಾಯಿತು. ಕಾರ್ಯಾಚರಣೆ ವೇಳೆ ಮಸೀದಿಗೆ ಹಾನಿಯಾಗಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಉದ್ರಿಕ್ತ ಜನರ ಗುಂಪನ್ನು ಚದುರಿಸಲು ಪೊಲೀಸರು ಅಶ್ರುವಾಯು ಸೆಲ್ ಸಿಡಿಸಬೇಕಾಯಿತು. ಬಳಿಕ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿತು ಎಂದು ದೆಹಲಿ ಪೊಲೀಸರು ಹೇಳಿಕೆ ನೀಡಿದ್ದಾರೆ. ದೆಹಲಿ ಮಹಾನಗರ ಪಾಲಿಕೆ ಜನವರಿ 6 ಮತ್ತು 7ರ ನಡುರಾತ್ರಿ, ಅಕ್ರಮ ಕಟ್ಟಡ ನೆಲಸಮ ಮಾಡುವ ಕಾರ್ಯಕ್ರಮ ನಿಗದಿಯಾಗಿತ್ತು. ಇದಕ್ಕಾಗಿ ಪೊಲೀಸ್ ಸಿಬ್ಬಂದಿಯನ್ನು ಸ್ಥಳಕ್ಕೆ ನಿಯೋಜಿಸಲಾಗಿತ್ತು. ಹೀಗಿದ್ದರೂ ಪಾಲಿಕೆಯ ಯಂತ್ರಗಳು, ಜೆಸಿಬಿ ಬರುವ ಮುನ್ನ 100-150 ಜನರು ಗುಂಪುಗೂಡಿ ಕಾರ್ಯಾಚರಣೆ ಆರಂಭಿಸಿದಾಗ ಕಲ್ಲು ತೂರಾಟ ನಡೆಸಿದರು. ಇದರಿಂದ ಸ್ಥಳದಲ್ಲಿ ಗೊಂದಲದ ಸನ್ನಿವೇಶ ಸೃಷ್ಟಿಯಾಯಿತು ಎಂದು ಪೊಲೀಸ್ ಉಪ ಆಯುಕ್ತ (ಕೇಂದ್ರ) ನಿಧಿನ್ ವಲ್ಸನ್ ಅವರು ತಿಳಿಸಿದರು. ಉದ್ರಿಕ್ತ ಗುಂಪಿನ ಮನವೊಲಿಕೆ ಮಾಡಿ ಚದುರಿಸಲಾಯಿತಾದರೂ ಕೆಲವರು ಕಲ್ಲು ತೂರಾಟದಲ್ಲಿ ತೊಡಗಿದರು. ಆಗ ಐವರು ಪೊಲೀಸ್ ಸಿಬ್ಬಂದಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ವೈದ್ಯಕೀಯ ಚಿಕಿತ್ಸೆ ನೀಡಲಾಗಿದೆ. ನಾವು ಗುಂಪನ್ನು ಚದುರಿಸಲು ಅಶ್ರುವಾಯು ಸೆಲ್ ಪ್ರಯೋಗಿಸಬೇಕಾಯಿತು ಎಂದು ಡಿಸಿಪಿ ವಿವರಿಸಿದರು.

ವೈದ್ಯಕೀಯ ವರದಿಗಳು ಬಂದ ಬಳಿಕ ಮತ್ತು ಹೇಳಿಕೆಗಳನ್ನು ದಾಖಲಿಸಿಕೊಂಡ ಬಳಿಕ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.ಮಸೀದಿಯ ಸಮೀಪದ ಒಂದು ಸಭಾಂಗಣ ಮತ್ತು ಔಷಧಾಲಯ ಒತ್ತುವರಿ ಮಾಡಿ ನಿರ್ಮಾಣಗೊಂಡಿವೆ ಎಂದು ನ್ಯಾಯಾಲಯ ಘೋಷಿಸಿತ್ತು ಎಂದು ಅವರು ನುಡಿದರು.

## ಹಿಂದೂಗಳ ಸ್ಥಿತಿ ಕುರಿತಾದ ಶಾ ಆರೋಪ ಸಂಪೂರ್ಣ ಸುಳ್ಳು: ಸ್ಟಾಲಿನ್

**ದಿಂಡಿಗಲ್:** ತಮಿಳುನಾಡಿನಲ್ಲಿ ಹಿಂದೂಗಳ ಹಕ್ಕುಗಳನ್ನು ಕಸಿಯಲಾಗಿದೆ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಆರೋಪ ಸಂಪೂರ್ಣ ಸುಳ್ಳಾಗಿದ್ದು, ಇದು ಅವರ ಘನತೆಗೆ ತಕ್ಕುದಲ್ಲ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಹೇಳಿದ್ದಾರೆ. ದಿಂಡಿಗಲ್‌ನಲ್ಲಿ ಸರ್ಕಾರಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಡಿಎಂಕೆಯು ಎಲ್ಲ ಧರ್ಮಗಳಿಗೆ ಸೇರಿದ ಜನರ ನಂಬಿಕೆಗಳನ್ನು ಗೌರವಿಸುತ್ತದೆ. ಅವರ ಧಾರ್ಮಿಕ ಹಕ್ಕುಗಳನ್ನು ರಕ್ಷಿಸುತ್ತದೆ ಎಂದು ಹೇಳಿದರು. ನಮ್ಮಂತಹ ರಾಜ್ಯದಲ್ಲಿ, ಹಿಂದೂಗಳ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ ಎಂಬ ಕೇಂದ್ರದ ಗೃಹ ಸಚಿವರ ಆರೋಪವು ಸಂಪೂರ್ಣವಾಗಿ ಸುಳ್ಳು ಮತ್ತು ಅವರ ಸ್ಥಾನಕ್ಕೆ ತಕ್ಕುದಲ್ಲ. ಸತ್ಯವನ್ನು ಹೇಳಬೇಕೆಂದರೆ, ಗಲಭೆ ಸೃಷ್ಟಿಸುವ ಮತ್ತು ವಿಭಜನೆ ಬಯಸುವವರ ಮನಸ್ಥಿತಿಯೇ ತಮಿಳುನಾಡಿನಲ್ಲಿ ಯಶಸ್ವಿಯಾಗಲಿಲ್ಲ ಎಂದು ಅವರು ಹೇಳಿದ್ದಾರೆ.


ಆ ರೀತಿಯ ಘಟನೆಗಳು ಭವಿಷ್ಯದಲ್ಲಿ ಎಂದೂ ನಡೆಯುವುದಿಲ್ಲ. ನಾವು ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದಿದ್ದಾರೆ. ಸ್ಟಾಲಿನ್ ಇಲ್ಲಿ ಇರುವವರೆಗೆ ಗಲಭೆ ಸೃಷ್ಟಿಸುವ ಮತ್ತು ವಿಭಜಕ ಶಕ್ತಿಗಳಿಗೆ ಅವಕಾಶ ನೀಡುವುದಿಲ್ಲ ಎಂದಿದ್ದಾರೆ. ಡಿಎಂಕೆಯ ಹಿರಿಯ ನಾಯಕರು ಸನಾತನ ಧರ್ಮವನ್ನು ಡೆಂಗಿ ,ಮಲೇರಿಯಾ ಎಂದು ಕರೆದಿದ್ದರು. ಹಿಂದೂಗಳ ಮೆರವಣಿಗೆ ಮತ್ತು ಮೂರ್ತಿ ವಿಸರ್ಜನೆಗಳಿಗೆ ತಡೆ ವಿಧಿಸಲಾಗಿದೆ. ಹಿಂದೂಗಳ ಮೇಲೆ ದೌರ್ಜನ್ಯ ಎಸಗುವ ಮೂಲಕ ನೀವು ಸಾಂವಿಧಾನಿಕ ನೀತಿಗಳನ್ನು ಉಲ್ಲಂಘಿಸಿದ್ದೀರಿ ಎಂದೂ ಶಾ ಹೇಳಿದ್ದರು.



### ಚೀನಾ,ಇರಾನ್ ಹಾಗೂ ರಷ್ಯಾವನ್ನು ದೇಶದಿಂದ ಹೊರಡಿಸಿ, ತೈಲ ಮಾರುಕಟ್ಟೆ ಸರದಾರನಾಗಲು ಸಿದ್ದವಾಗ್ತಿದ್ಯಾ ಯುಎಸ್?

# ವೆನುಜುವೆಲಾದಲ್ಲಿ ಅಮೆರಿಕಾಗೆ ಮಾತ್ರವೇ ಆದ್ಯತೆ: ಶ್ವೇತಭವನ

**ವಾಷಿಂಗ್ಟನ್:** ವೆನುಜುವೆಲಾದ ಮೇಲೆ ರೋಚಕ ಫಿಲ್ಮಿ ಸ್ಟೈಲ್‌ನಲ್ಲಿ ಮಿಲಿಟರಿ ದಾಳಿ ನಡೆಸಿ ನಿಕೋಲಸ್ ಮಡುರೊ, ಅವರ ಪತ್ನಿಯನ್ನ ಸೆರೆ ಹಿಡಿದು ನ್ಯೂಯಾರ್ಕ್ ಜೈಲಿನಲ್ಲಿಟ್ಟಿರುವ ಅಮರಿಕಾ ವೆಜುವೆಲಾದ ಮೇಲೆ ಇನ್ನು ಮುಂದೆ ನಮ್ಮದೇ ರಾಜ್ಯಭಾರ ಎಂದು ಹೇಳಿದೆ. ಇನ್ನು ವೆನುಜುವೆಲಾದ ನೂತನ ಹಂಗಾಮಿ ಅಧ್ಯಕ್ಷರಾಗಿ ಡೆಲ್ಸಿ ರೋಡ್ರಿಗಸ್ ನೇಮಕವಾಗಿದ್ದರೂ ಸಹ ಸಂಪೂರ್ಣವಾಗಿ ಅಧಿಕಾರವಿರುವುದು ಟ್ರಂಪ್ ಕೈಯಲ್ಲಿ. ಹೀಗಿರುವಾಗಲೇ ಟ್ರಂಪ್ ವೆನುಜುವೆಲಾದ ತೈಲ ನಿಕ್ಷೇಪ ಪ್ರದೇಶಗಳ ಮೇಲೆ ಅಮೆರಿಕಾ ಆಡಳಿತ ನಡೆಸಲಿದೆ ಎಂದು ಹೇಳಿದ್ದರು, ಈಗ ಮತ್ತೆ ಇನ್ನೊಂದು ಆದೇಶ ಹೊರಡಿಸಿದ್ದಾರೆ.




**ಚೀನಾ, ರಷ್ಯಾ, ಇರಾನ್ ಜೊತೆ ಸಂಬಂಧ ನಿಲ್ಲಿಸಿ ಎಂದು ಟ್ರಂಪ್ ಆದೇಶ:** ಅಮೆರಿಕಾ ಈಗಾಗಲೇ ವೆನುಜುವೆಲಾದ ಮೇಲೆ ಹಿಡಿತ ಸಾಧಿಸಿದ್ದು, ಆ ದೇಶದ ಜೊತೆಗೆ ನಿಕಟ ಸಂಬಂಧವನ್ನು ಹೊಂದಿ ಈಗಾಗಲೇ ಅಲ್ಲಿನ ತೈಲ ನಿಕ್ಷೇಪಗಳು ಸೇರಿದಂತೆ ಖನಿಜ ಸಂಪನ್ಮೂಲಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಚೀನಾ, ರಷ್ಯಾ, ಇರಾನ್ ಮತ್ತು ಕ್ಯೂಬಾ ದೇಶಗಳನ್ನು ಅಲ್ಲಿಂದ ಹೊರಗೆ ಹಾಕುವಂತೆ ಷರತ್ತು ವಿಧಿಸಿದ್ದಾರೆ. ಈ ಮೂಲಕ ಆ ತೈಲ ನಿಕ್ಷೇಪ, ಖನಿಜ ಸಂಪನ್ಮೂಲಗಳಲ್ಲಿ ಶ್ರೀಮಂತ ರಾಷ್ಟ್ರವಾಗಿರುವ ವೆನುಜುವೆಲಾದ ಸಂಪತ್ತಿನ ಮೇಲೆ ಹತೋಟಿ ಸಾಧಿಸಲು ಮುಂದಾಗಿದ್ದಾರೆ ಎಂದು ABC ನ್ಯೂಸ್ ವರದಿ ಮಾಡಿದೆ. ವೆನೆಜುವೆಲಾದ ಮಧ್ಯಂತರ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅವರಿಗೆ ಈ ಬಗ್ಗೆ ಆದೇಶ ಹೊರಡಿಸಿರುವ ಶ್ವೇತಭವನ ವೆನೆಜುವೆಲಾ ತೈಲ ಉತ್ಪಾದನೆಯಲ್ಲಿ ಕೇವಲ ಅಮೆರಿಕದೊಂದಿಗೆ ಮಾತ್ರ ಪಾಲುದಾರಿಕೆ ಮಾಡಿಕೊಳ್ಳಬೇಕು, ತನ್ನ ಭಾರೀ ಕಚ್ಚಾ ತೈಲವನ್ನು ಅಮೆರಿಕದ ಖರೀದಿದಾರರಿಗೆ ಆದ್ಯತೆ ನೀಡಬೇಕು. ಹಾಗಾಗಿ ವೆನೆಜುವೆಲಾ ತನ್ನ ತೈಲ ಉತ್ಪಾದನೆಯನ್ನು ಹೆಚ್ಚಿಸಲು ಅವಕಾಶ ಪಡೆಯಬೇಕಾದರೆ, ಮೊದಲು ಚೀನಾ, ರಷ್ಯಾ, ಇರಾನ್, ಕ್ಯೂಬಾ ದೇಶಗಳನ್ನು ಹೊರಹಾಕಬೇಕು ಮತ್ತು ಆ ದೇಶಗಳೊಂದಿಗೆ ಎಲ್ಲಾ ಆರ್ಥಿಕ ಸಂಬಂಧಗಳನ್ನು ಕಡಿದುಕೊಳ್ಳಬೇಕು ಎಂದು ಸೂಚಿಸಿದೆ.

> **ಅಷ್ಟೇ ಅಲ್ಲದೆ, ಈ ತೈಲವನ್ನು ಸಂಗ್ರಹಣೆ ಹಡಗುಗಳ ಮೂಲಕ ಸಾಗಿಸಲಾಗುತ್ತದೆ ಮತ್ತು ನೇರವಾಗಿ ಅಮೆರಿಕಾದ ಆನ್ ಲೋಡಿಂಗ್ ಡಾಕ್‌ಗಳಿಗೆ ತರಲಾಗುತ್ತದೆ. ಈ ಯೋಜನೆ ಸಂಪೂರ್ಣ ಜವಾಬ್ದಾರಿಯನ್ನು ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ನೋಡಿಕೊಳ್ಳಲಿದ್ದಾರೆ.**
> **-ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ**

**ಮಾರ್ಕೊ ರುಬಿಯೊ ಹೇಳಿದ್ದೇನು?**

**ಮಡುರೊ ಬಂಧನದ ಬೆನ್ನಲ್ಲೆ, ವೆನುಜುವೆಲಾದ ತೈಲ ನಿಕ್ಷೇಪದ ಮೇಲೆ ಅಮೆರಿಕಾ ಕಣ್ಣಿಟ್ಟಿದ್ದು,ಯುಎಸ್ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರುಬಿಯೊ ಸಹ ಶಾಸಕರೊಂದಿಗೆ ಖಾಸಗಿ ಸಭೆಯಲ್ಲಿ ವೆನುಜುವೆಲಾದ ತೈಲ ಟ್ಯಾಂಕರ್‌ಗಳು ಈಗಾಗಲೇ ತುಂಬಿವೆ ಮತ್ತು ದೇಶದ ಸರ್ಕಾರವು ತೈಲ ಮಾರಾಟವಿಲ್ಲದೆ ತಕ್ಷಣವೇ ಆರ್ಥಿಕ ದಿವಾಳಿತನವನ್ನು ಎದುರಿಸುತ್ತಿವೆ ಅಮೆರಿಕಾ ಇದನ್ನು ನಿಯಂತ್ರಿಸಲಿದೆ ಎಂದು ಹೇಳಿದ್ದಾರೆ ಎಂದು ವರದಿಯಾಗಿದೆ.**

**ವೆನುಜುವೆಲಾದಿಂದ ಅಮೆರಿಕಾಗೆ 50 ಮಿಲಿಯನ್ ಬ್ಯಾರೆಲ್ ತೈಲ ಪೂರೈಕೆ:** ಇದಕ್ಕೂ ಮೊದಲು ಟ್ರಂಪ್ ತಮ್ಮ ಟ್ರೂತ್ ಸೋಶಿಯಲ್ ನಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ಅಮೆರಿಕಾಗೆ ವೆನುಜುವೆಲಾದಿಂದ 50 ಮಿಲಿಯನ್ ಬ್ಯಾರೆಲ್ ತೈಲ ರವಾನೆಯಾಗಲಿದೆ ಎಂದು ತಿಳಿಸಿದ್ದರು. ಈ ಕುರಿತು ಟ್ರಂಪ್ ವೆನೆಜುವೆಲಾದ ಮಧ್ಯಂತರ ಅಧಿಕಾರಿಗಳು 30 ರಿಂದ 50 ಮಿಲಿಯನ್ ಬ್ಯಾರೆಲ್‌ಗಳ ಉತ್ತಮ ಗುಣಮಟ್ಟದ ನಿರ್ಬಂಧಿತ ತೈಲವನ್ನು ಮಾರುಕಟ್ಟೆ ಬೆಲೆಗೆ ಅಮೆರಿಕಕ್ಕೆ ಹಸ್ತಾಂತರಿಸುತ್ತಾರೆ. ಆ ತೈಲ ಮಾರಾಟದಿಂದ ಬರುವ ಆದಾಯವನ್ನು ತಾನು ಅಧ್ಯಕ್ಷನಾಗಿ ನಿಯಂತ್ರಿಸುವುದಾಗಿ ಮತ್ತು ವೆನೆಜುವೆಲಾ ಮತ್ತು ಅಮೆರಿಕದ ಜನರಿಗೆ ಪ್ರಯೋಜನವಾಗಲು ಬಳಸುವುದಾಗಿ ಘೋಷಿಸಿದ್ದರು.



# ಪುಷ್ಪ 2 ದಾಖಲೆ ಅಳಿಸಿ ಹಾಕಿದ ಧುರಂಧರ್

ಸೂಪರ್ ಹಿಟ್ 'ಧುರಂಧರ್' ಸಿನಿಮಾ ಈಗಲೂ ಅನೇಕ ಕಡೆಗಳಲ್ಲಿ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿದೆ. ಈ ಸಿನಿಮಾದಿಂದ ರಣವೀರ್ ಸಿಂಗ್ ಅವರು ಬಾಕ್ಸ್ ಆಫೀಸ್ ಸುಲ್ತಾನ ಎನಿಸಿಕೊಂಡಿದ್ದಾರೆ. ಭಾರತದ ಮಾರುಕಟ್ಟೆಯಲ್ಲಿ ಅತಿ ಹೆಚ್ಚು ಕಲೆಕ್ಷನ್ ಮಾಡಿದ ಹಿಂದಿ ಸಿನಿಮಾ ಎಂಬ ಖ್ಯಾತಿಗೆ ಈ ಚಿತ್ರ ಪಾತ್ರವಾಗಿದೆ. ಇಷ್ಟು ದಿನಗಳ ಕಾಲ 'ಪುಷ್ಪ 2' ಸಿನಿಮಾ ಹೊಂದಿದ್ದ ದಾಖಲೆಯನ್ನು ಈಗ 'ಧುರಂಧರ್' ಸಿನಿಮಾ ಅಳಿಸಿ ಹಾಕಿದೆ. ಭಾರತದಲ್ಲಿ ಈ ಚಿತ್ರದ ಕಲೆಕ್ಷನ್ 831 ಕೋಟಿ ರೂಪಾಯಿ ಆಗಿದೆ ಎಂದು 'ಬಾಲಿವುಡ್ ಹಂಗಾಮಾ' ವರದಿ ಮಾಡಿದೆ. ಟ್ರೇಡ್ ವಿಶ್ಲೇಷಕ ತರಣ್ ಆದರ್ಶ್ ಅವರು ಈ ಬಗ್ಗೆ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. 'ಧುರಂದರ್- ಹೊಸ ಚಕ್ರವರ್ತಿ ಬಂದಿದ್ದಾನೆ. ಹಿಂದಿ ಸಿನಿಮಾದ ಬಿಸ್ನೆಸ್‌ನಲ್ಲಿ ಇದು ಐತಿಹಾಸಿಕ ಕ್ಷಣ. ಪುಷ್ಪ 2 ಚಿತ್ರವನ್ನು ಧುರಂಧರ್ ಹಿಂದಿಕ್ಕಿದೆ. ಇಷ್ಟು ದಿನಗಳ ತನಕ ಪುಷ್ಪ 2 ಚಿತ್ರದ ಹಿಂದಿ ವರ್ಷನ್ ಗಳಿಕೆಯನ್ನು ಮೀರಿಸುವುದನ್ನು ಊಹಿಸುವುದು ಕೂಡ ಕಷ್ಟ ಎಂಬಂತಿತ್ತು' ಎಂದು ತರಣ್ ಆದರ್ಶ್ ಅವರು ಹೇಳಿದ್ದಾರೆ. 'ಆದರೆ ದಾಖಲೆಗಳು ಇರುವುದೇ ಮುರಿಯಲು. ಧುರಂಧರ್ ಸಿನಿಮಾ ಅದನ್ನೇ ಮಾಡಿದೆ. ಕೊನೆಗೂ ಪುಷ್ಪ 2 ಚಿತ್ರದ ಹಿಂದಿ ಕಲೆಕ್ಷನ್ ಅನ್ನು ಧುರಂಧರ್ ಸಿನಿಮಾ ಮೀರಿಸಿದೆ. ಅತಿ ಹೆಚ್ಚು ಕಲೆಕ್ಷನ್ ಮಾಡಿದ ಹಿಂದಿ ಸಿನಿಮಾ ಇದಾಗಿದೆ. 33ನೇ ದಿನಕ್ಕೆ ಈ ಸಾಧನೆ ಮಾಡಿದೆ. ಸಿಂಹಾಸನದಲ್ಲಿ ಇರುವ ಹೊಸ ಚಕ್ರವರ್ತಿ ಧುರಂಧರ್' ಎಂದು ತರಣ್ ಆದರ್ಶ್ ಅವರು ಪೋಸ್ಟ್ ಮಾಡಿದ್ದಾರೆ. ಅಲ್ಲು ಅರ್ಜುನ್ ನಟನೆಯ 'ಪುಷ್ಪ 2' ಸಿನಿಮಾ ಹಿಂದಿಗೂ ಡಬ್ ಆಗಿ 830.10 ಕೋಟಿ ರೂಪಾಯಿ ಕಲೆಕ್ಷನ್ ಮಾಡಿತ್ತು. ಈಗ 'ಧುರಂಧರ್' ಸಿನಿಮಾ 33 ದಿನಗಳಲ್ಲಿ 831.40 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ಈಗಲೂ ಅನೇಕ ಕಡೆಗಳಲ್ಲಿ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿದೆ. ಬರುವ ವೀಕೆಂಡ್‌ನಲ್ಲಿ ಮತ್ತೆ ಕಲೆಕ್ಷನ್ ಜಾಸ್ತಿ ಆಗುವ ನಿರೀಕ್ಷೆ ಇದೆ. ಆದಿತ್ಯ ಧಾರ್ ನಿರ್ದೇಶನ ಮಾಡಿರುವ 'ಧುರಂಧರ್' ಸಿನಿಮಾದಲ್ಲಿ ನೈಜ ಘಟನೆ ಆಧಾರಿತ ಕಥೆ ಇದೆ. ರಣವೀರ್ ಸಿಂಗ್, ಅಕ್ಷಯ್ ಖನ್ನಾ, ಸಾರಾ ಅರ್ಜುನ್, ಸಂಜಯ್ ದತ್, ಅರ್ಜುನ್ ರಾಮ್‌ಪಾಲ್ ಮುಂತಾದವರು ಅಭಿನಯಿಸಿದ್ದಾರೆ.






# ಮದುವೆ ಬಳಿಕ ಸಮಂತಾ ಮೊದಲ ಸಿನಿಮಾ; ಫಸ್ಟ್ ಲುಕ್ ಬಿಡುಗಡೆ

ನಟಿ ಸಮಂತಾ ರುತ್ ಪ್ರಭು ಅವರು ನಿರ್ದೇಶಕ ರಾಜ್ ನಿಡಿಮೋರು ಜೊತೆ ಇತ್ತೀಚೆಗೆ ಮದುವೆ ಆದರು. ಈಗ ಮತ್ತೆ ಅವರು ಸಿನಿಮಾ ಕೆಲಸಗಳಲ್ಲಿ ಬ್ಯುಸಿ ಆಗಿದ್ದಾರೆ. ಸಮಂತಾ ನಟನೆಯ ಹೊಸ ಸಿನಿಮಾ 'ಮಾ ಇಂಟಿ ಬಂಗಾರಂ' ಬಿಡುಗಡೆಗೆ ಸಜ್ಜಾಗುತ್ತಿದೆ. 2 ವರ್ಷಗಳ ಕಾಲ ಬ್ರೇಕ್ ತೆಗೆದುಕೊಂಡಿದ್ದ ಸಮಂತಾ ಅವರು ಈ ಸಿನಿಮಾ ಮೂಲಕ ಮತ್ತೆ ಅಭಿಮಾನಿಗಳನ್ನು ರಂಜಿಸಲು ಬರುತ್ತಿದ್ದಾರೆ. ಈ ಸಿನಿಮಾದ ಫಸ್ಟ್ ಲುಕ್ ಪೋಸ್ಟರ್ ಬಿಡುಗಡೆ ಆಗಿದೆ. ಅದನ್ನು ನೋಡಿದ ಬಳಿಕ ಅಭಿಮಾನಿಗಳಿಗೆ ಈ ಸಿನಿಮಾ ಮೇಲಿನ ನಿರೀಕ್ಷೆ ಹೆಚ್ಚಾಗಿದೆ. ಸೋಶಿಯಲ್ ಮೀಡಿಯಾದಲ್ಲಿ ಸಮಂತಾ ರುತ್ ಪ್ರಭು ಅವರು 'ಮಾ ಇಂಟಿ ಬಂಗಾರಂ' ಸಿನಿಮಾದ ಫಸ್ಟ್ ಲುಕ್ ಪೋಸ್ಟರ್ ಹಂಚಿಕೊಂಡಿದ್ದಾರೆ. ಮುಖ್ಯ ಪಾತ್ರದಲ್ಲಿ ನಟಿಸುವುದರ ಜೊತೆಗೆ ಸಮಂತಾ ಅವರೇ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ತಮ್ಮದೇ ಪ್ರೊಡಕ್ಷನ್ ಹೌಸ್ ಮೂಲಕ ಬಂಡವಾಳ ಹೂಡಿದ್ದಾರೆ. ಆ ಕಾರಣದಿಂದಲೂ ಅವರಿಗೆ ಈ ಸಿನಿಮಾ ತುಂಬಾ ಸ್ಪೆಷಲ್ ಆಗಿದೆ.

'ಮಾ ಇಂಟಿ ಬಂಗಾರಂ' ಸಿನಿಮಾದ ಫಸ್ಟ್ ಲುಕ್‌ನಲ್ಲಿ ಸಮಂತಾ ಅವರು ಸೀರೆ ಧರಿಸಿ ಕಾಣಿಸಿಕೊಂಡಿದ್ದಾರೆ. ಗ್ಲಾಮರ್ ಪಾತ್ರವನ್ನು ಬಿಟ್ಟು ಅವರು ರಫ್ ಆ್ಯಂಡ್ ಟಫ್ ಪಾತ್ರ ಮಾಡಿದ್ದಾರೆ. ವಿಲನ್‌ಗಳ ಮೂಳೆ ಮುರಿಯಲು ಸಜ್ಜಾಗಿರುವ ದುರ್ಗೆಯ ರೀತಿ ಅವರು ಪೋಸ್ ನೀಡಿದ್ದಾರೆ. ಸಮಂತಾ ರುತ್ ಪ್ರಭು ಅಭಿಮಾನಿಗಳು ಈ ಸಿನಿಮಾ ಮೇಲೆ ಭರವಸೆ ಇಟ್ಟುಕೊಂಡಿದ್ದಾರೆ.

# ಮತ್ತೆ ಕನ್ನಡ ಚಿತ್ರರಂಗದಲ್ಲಿ ಅನಿಲ್ ಕಪೂರ್



ನಟ ಅನಿಲ್ ಕಪೂರ್ ಅವರು ಬಾಲಿವುಡ್‌ನಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಹೀರೋ ಆಗಿ ಮಾತ್ರವಲ್ಲದೇ ಪೋಷಕ ಪಾತ್ರಗಳ ಮೂಲಕವೂ ಅವರು ಜನಮನ ಗೆದ್ದಿದ್ದಾರೆ. ಚಿತ್ರರಂಗದಲ್ಲಿ ಅವರಿಗೆ ನಾಲ್ಕೂವರೆ ದಶಕಗಳ ಅನುಭವ ಇದೆ. ಹಿಂದಿ ಚಿತ್ರರಂಗದಲ್ಲಿ ಹೀರೋ ಆಗಿ ಮಿಂಚುವುದಕ್ಕೂ ಮುನ್ನ ಅವರು ತೆಲುಗು ಮತ್ತು ಕನ್ನಡ ಸಿನಿಮಾದಲ್ಲಿ ನಟಿಸಿದ್ದರು. ಅನಿಲ್ ಕಪೂರ್ ಅವರು ಅಭಿನಯಿಸಿದ ಏಕೈಕ ಕನ್ನಡ ಸಿನಿಮಾ 'ಪಲ್ಲವಿ ಅನುಪಲ್ಲವಿ ತೆರೆಕಂಡು ಈಗ 43 ವರ್ಷಗಳು ಕಳೆದಿವೆ. ಅದನ್ನು ಈಗ ಅನಿಲ್ ಕಪೂರ್ ನೆನಪು ಮಾಡಿಕೊಂಡಿದ್ದಾರೆ. ಮಣಿರತ್ನಂ ನಿರ್ದೇಶನ ಮಾಡಿದ್ದ 'ಪಲ್ಲವಿ ಅನುಪಲ್ಲವಿ' ಸಿನಿಮಾ 1983ರ ಜನವರಿ 7ರಂದು ಬಿಡುಗಡೆ ಆಗಿತ್ತು. ಅನಿಲ್ ಕಪೂರ್ ಅವರು ಹೀರೋ ಆಗಿ ನಟಿಸಿದ್ದರು. ಇಳೆಯರಾಜ ಸಂಗೀತ ನೀಡಿದ ಹಾಡುಗಳು ಸೂಪರ್ ಹಿಟ್ ಆದವು. ಇಂದಿಗೂ ಸಿನಿಪ್ರಿಯರಿಗೆ 'ಪಲ್ಲವಿ ಅನುಪಲ್ಲವಿ' ಸಿನಿಮಾದ ಹಾಡುಗಳು ಫೇವರಿಟ್ ಆಗಿವೆ. 'ಓ ಪ್ರೇಮಿ ಓ ಪ್ರೇಮಿ' ಹಾಡಿನ ತುಣುಕನ್ನು ಅನಿಲ್ ಕಪೂರ್ ಅವರು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

43 ವರ್ಷಗಳ ಹಿಂದೆ ನಾನು ಕನ್ನಡ ಚಿತ್ರರಂಗದಲ್ಲಿ ಮೊದಲ ಹೆಜ್ಜೆ ಇಟ್ಟೆ. ಅಂದಿನಿಂದ ಇಂದಿನ ತನಕ, ಕನ್ನಡ ಸಿನಿಮಾ ಬೆಳೆದ ಭಾರತೀಯ ಚಿತ್ರರಂಗವನ್ನು ಜಾಗತಿಕ ಮಟ್ಟದಲ್ಲಿ ಮರು ವ್ಯಾಖ್ಯಾನಿಸುತ್ತಿರುವುದನ್ನು ನೋಡಿದರೆ ಅಚ್ಚರಿ ಆಗುತ್ತದೆ' ಎಂದು ಅನಿಲ್ ಕಪೂರ್ ಅವರು 'ಎಕ್ಸ್' (ಟ್ವಿಟರ್) ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. ಕನ್ನಡ ಚಿತ್ರರಂಗದ ಈಗಿನ ಸಾಧಕರಿಗೂ ಅನಿಲ್ ಕಪೂರ್ ಸಲಾಂ ಎಂದಿದ್ದಾರೆ. 'ಕನ್ನಡ ಚಿತ್ರರಂಗವನ್ನು ಮೇಲಕ್ಕೆ ತೆಗೆದುಕೊಂಡು ಹೋಗಿದ್ದಕ್ಕಾಗಿ ಯಶ್, ಪ್ರಶಾಂತ್ ನೀಲ್, ರಿಷಬ್ ಶೆಟ್ಟಿ ಹಾಗೂ ಕಾಂತಾರ, ಕೆಜಿಎಫ್ ತಂಡಗಳಿಗೆ ನಾನು ಸೆಲ್ಯೂಟ್ ಎನ್ನುತ್ತೇನೆ. ಈ ಅದ್ಭುತ ಚಿತ್ರರಂಗದ ಜೊತೆ ನನ್ನ ಕೊನೆಯ ಒಡನಾಟ ಇದಲ್ಲ ಎಂದು ಭಾವಿಸುತ್ತೇನೆ' ಎಂದು ಅನಿಲ್ ಕಪೂರ್ ಹೇಳಿದ್ದಾರೆ.

# ಟಾಕ್ಸಿಕ್ ಟೀಮ್‌ನಿಂದ ಫ್ಯಾನ್ಸ್‌ಗೆ ಗುಡ್‌ನ್ಯೂಸ್

ಜ.8ಕ್ಕೆ ಯಶ್ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದಾರೆ. 40ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಯಶ್ ಹುಟ್ಟುಹಬ್ಬವನ್ನು ಗ್ರ್ಯಾಂಡ್ ಆಗಿ ಸೆಲಬ್ರೇಟ್ ಮಾಡಲು ರಾಕಿಂಗ್ ಅಭಿಮಾನಿಗಳಂತೂ ಭರ್ಜರಿ ಸಿದ್ಧತೆ ನಡೆಸಿದ್ದಾರೆ. ಬರ್ತ್‌ಡೇ ವಿಶೇಷವಾಗಿ ಟಾಕ್ಸಿಕ್ ಟೀಸರ್ ನಿರೀಕ್ಷೆಯಲ್ಲಿದ್ದ ಫ್ಯಾನ್ಸ್‌ಗೆ ಟಾಕ್ಸಿಕ್ ಟೀಮ್ ಗುಡ್‌ನ್ಯೂಸ್ ಕೊಟ್ಟಿದೆ. ಅಲ್ಲಿಗೆ ದೊಡ್ಡದೇನೋ ಸಿಗ್ನಲ್ ಕೊಡುವ ಪೋಸ್ಟರ್ ರಿಲೀಸ್ ಮಾಡಿದ್ದಾರೆ ಯಶ್. ಯಶ್ ಹುಟ್ಟುಹಬ್ಬದ ದಿನ ಬೆಳಗ್ಗೆ 10 ಗಂಟೆ 10 ನಿಮಿಷಕ್ಕೆ ಟೀಸರ್ ರಿಲೀಸ್ ಮಾಡುವ ಬಗ್ಗೆ ಚಿತ್ರತಂಡದಿಂದ ಅಧಿಕೃತ ಘೋಷಣೆ ಆಗಿದೆ. ಸ್ಯಾಂಡಲ್‌ವುಡ್‌ನ ಮಿಸ್ಟರ್ ಪರ್ಫೆಕ್ಷನಿಸ್ಟ್ ಯಶ್ ಅಂದುಕೊಂಡಂತೆ ಔಟ್‌ಪುಟ್ ಬರೋವರೆಗೂ ಮಾತನಾಡೋದಿಲ್ಲ. ಅದರಂತೆ ಟಾಕ್ಸಿಕ್ ಟೀಸರ್‌ಗಾಗಿ ಕಾದಿದ್ದ ಫ್ಯಾನ್ ಗೆ ಬರ್ತ್‌ಡೇ ಮುನ್ನಾದಿನ ಕೊನೆಗೂ ಘೋಷಣೆ ಮಾಡಿದ್ದಾರೆ. ಯಶ್ ಬರ್ತ್‌ಡೇ ಖುಷಿ ಫ್ಯಾನ್ಸ್ ಪಾಲಿಗೆ ಇನ್ನಷ್ಟು ಅಧಿಕವಾಗಲಿದೆ. ಕಳೆದ ಬಾರಿ ಯಶ್ ಹುಟ್ಟುಹಬ್ಬಕ್ಕೆ ಒಂದು ಆಕರ್ಷಕ ಗ್ಲಿಂಪ್ಸ್ ರಿಲೀಸ್ ಮಾಡಲಾಗಿತ್ತು. ಇದೀಗ ಟೀಸರ್ ರಿಲೀಸ್ ಅನೌನ್ಸ್ ಪೋಸ್ಟರ್ ಸಿಕ್ಕಾಪಟ್ಟೆ ಮಾಸ್ ಆಗಿದೆ. ಸುತ್ತಲೂ ಬೆಂಕಿ ಮಧ್ಯದಲ್ಲಿ ರಾಕಿಂಗ್ ಸ್ಟಾರ್ ಯಶ್ ನಿಂತಿರುವ ಭಂಗಿ ಥ್ರಿಲ್ಲಿಂಗ್ ಆಗಿದೆ. ಹೀಗಾಗಿ ಜನವರಿ 8ಕ್ಕೆ ರಿಲೀಸ್ ಆಗಲಿರುವ ಟಾಕ್ಸಿಕ್ ಟೀಸರ್ ಮೇಲೆ ನಿರೀಕ್ಷೆ ಹೆಚ್ಚಾಗಿದೆ.



# ಪುರುಷರನ್ನು ನಾಯಿಗೆ ಹೋಲಿಸಿದರೇ ರಮ್ಯಾ

ಕಳೆದ ವರ್ಷ ಜುಲೈನಲ್ಲಿ ಸುಪ್ರೀಂ ಕೋರ್ಟ್ ಬೀದಿ ನಾಯಿಗಳ ಕುರಿತಾಗಿ ಆದೇಶವೊಂದನ್ನು ಹೊರಡಿಸಿತ್ತು, ಬೀದಿ ನಾಯಿಗಳನ್ನು ಆಶ್ರಯ ತಾಣಗಳಲ್ಲಿ ಇಡುವಂತೆ ಸೂಚಿಸಿತ್ತು. ಇದರ ವಿರುದ್ಧ ರಮ್ಯಾ ಸೇರಿದಂತೆ ದೇಶದಾದ್ಯಂತ ಶ್ವಾನಪ್ರಿಯರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ಸಹ ಮಾಡಿದ್ದರು. ಬಳಿಕ ಇತ್ತೀಚೆಗೆ ಮತ್ತೆ ಇದೇ ವಿಷಯವಾಗಿ ನಡೆದ ವಿಚಾರಣೆ ವೇಳೆ, ಬೀದಿ ನಾಯಿಗಳನ್ನು ಅವುಗಳ ವರ್ತನೆಯ ಆಧಾರದ ಮೇಲೆ ವಿಂಗಡಿಸಲು ಸಾಧ್ಯವಿಲ್ಲ. 'ಬೀದಿ ನಾಯಿಗಳ ಮನಸ್ಸನ್ನು ಯಾರೂ ಓದಲು ಸಾಧ್ಯವಿಲ್ಲ, ಈ ನಾಯಿ ಕಚ್ಚಬಹುದು, ಈ ನಾಯಿ ಕಚ್ಚುವುದಿಲ್ಲ ಎಂದು ಕಂಡು ಹಿಡಿಯುವುದು ಅಸಾಧ್ಯ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಆ ಮೂಲಕ ಎಲ್ಲ ನಾಯಿಗಳನ್ನು ಆಶ್ರಯ ತಾಣಗಳಲ್ಲಿ ಇಡುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಸುಪ್ರೀಂಕೋರ್ಟ್‌ನ ಈ ಅಭಿಪ್ರಾಯಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ನಟಿ ರಮ್ಯಾ, ಸುಪ್ರೀಂನ ಹೇಳಿಕೆಗೆ ವಿರುದ್ಧವಾಗಿ, 'ಪುರುಷರ ಮನಸ್ಸನ್ನು ಓದುವುದು ಕಷ್ಟ, ಅವರು ಯಾವಾಗ ರೇಪ್ ಮಾಡುತ್ತಾರೊ, ಯಾವಾಗ ಕೊಲೆ ಮಾಡುತ್ತಾರೊ ಗೊತ್ತಾಗುವುದಿಲ್ಲ, ಹಾಗಾಗಿ ಎಲ್ಲಾ ಪುರುಷರನ್ನು ಜೈಲಿನಲ್ಲಿ ಇರಿಸಿಬಿಡಿ ಎಂದಿದ್ದಾರೆ.

# ಬೇಕಿದ್ರೆ ಆಡಿ, ಇಲ್ಲಾಂದ್ರೆ ಹೊರ ನಡೀರಿ ಬಾಂಗ್ಲಾಗೆ ಖಡಕ್ ಸೂಚನೆ

ಟಿ20 ವಿಶ್ವಕಪ್‌ನ ತಮ್ಮ ಪಂದ್ಯಗಳನ್ನು ಭಾರತದಿಂದ ಶ್ರೀಲಂಕಾಕ್ಕೆ ಸ್ಥಳಾಂತರಿಸಬೇಕೆಂಬ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯ ಮನವಿಯನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ ತಿರಸ್ಕರಿಸಿದೆ. ಟಿ20 ವಿಶ್ವಕಪ್ ಟೂರ್ನಿ ಆಡುವುದಾದರೆ ಭಾರತದಲ್ಲೇ ಆಡಿ, ಇಲ್ಲದಿದ್ದರೆ ವಾಕ್ ಓವರ್ ನೀಡಿ ಎಂದು ಐಸಿಸಿ ಬಿಸಿಬಿಗೆ ಸೂಚಿಸಿದೆ ಎಂದು ವರದಿಯಾಗಿದೆ.

ಇಂಡಿಯನ್ ಪ್ರೀಮಿಯರ್ ಲೀಗ್‌ನಿಂದ ಬಾಂಗ್ಲಾ ಆಟಗಾರ ಮುಸ್ತಫಿಝುರ್ ರೆಹಮಾನ್ ಅವರನ್ನು ಹೊರಗಿಟ್ಟ ಬೆನ್ನಲ್ಲೇ ಬಾಂಗ್ಲಾದೇಶ್ ತಂಡದ ಟಿ20 ವಿಶ್ವಕಪ್ ಪಂದ್ಯಗಳನ್ನು ಶ್ರೀಲಂಕಾಗೆ ಸ್ಥಳಾಂತರಿಸುವಂತೆ ಬಾಂಗ್ಲಾ ಕ್ರಿಕೆಟ್ ಬೋರ್ಡ್ ಐಸಿಸಿಗೆ ಮನವಿ ಮಾಡಿತ್ತು. ಬಾಂಗ್ಲಾದೇಶ್, ಬಾಂಗ್ಲಾದೇಶ್ ಕ್ರಿಕೆಟ್ ಅಥವಾ ಬಾಂಗ್ಲಾದೇಶ ಕ್ರಿಕೆಟಿಗರ ಅವಮಾನವನ್ನು ನಾವು ಸಹಿಸುವುದಿಲ್ಲ. ಗುಲಾಮಗಿರಿಯ ದಿನಗಳು ಮುಗಿದಿವೆ.



ಬಾಂಗ್ಲಾದೇಶದ ಕ್ರಿಕೆಟಿಗನೊಬ್ಬನಿಗೆ ಭಾರತದಲ್ಲಿ ಆಡಲು ಸಾಧ್ಯವಾಗದಿದ್ದರೆ, ಬಾಂಗ್ಲಾದೇಶ್ ತನ್ನ ಇಡೀ ಕ್ರಿಕೆಟ್ ತಂಡವು ವಿಶ್ವಕಪ್ ಆಡಲು ಭಾರತಕ್ಕೆ ಪ್ರಯಾಣಿಸುವುದು ಸುರಕ್ಷಿತವೆಂದು ಪರಿಗಣಿಸಲು ಸಾಧ್ಯವಿಲ್ಲ. ಹೀಗಾಗಿ ಟಿ20 ವಿಶ್ವಕಪ್‌ನ ಪಂದ್ಯಗಳನ್ನು ಸ್ಥಳಾಂತರಿಸುವಂತೆ ಬಿಸಿಬಿ ಐಸಿಸಿಗೆ ಪತ್ರ ಬರೆದಿದೆ ಬಾಂಗ್ಲಾದೇಶ್‌ನ ಕ್ರೀಡಾ ಸಚಿವಾಲಯದ ಉಸ್ತುವಾರಿ ಸಚಿವ ಆಸಿಫ್ ನಜ್ರುಲ್ ತಿಳಿಸಿದ್ದರು. ಇದೀಗ ಈ ಮನವಿಯನ್ನು ಐಸಿಸಿಗೆ ತಿರಸ್ಕರಿಸಿದೆ. ಟಿ20 ವಿಶ್ವಕಪ್‌ಗಾಗಿ ಬಾಂಗ್ಲಾದೇಶ್ ತಂಡವು ಭಾರತಕ್ಕೆ ಪ್ರಯಾಣಿಸಬೇಕಾಗುತ್ತದೆ. ಇಲ್ಲದಿದ್ದರೆ ಅಂಕಗಳನ್ನು ಕಳೆದುಕೊಳ್ಳಬೇಕು. ಅಂದರೆ ಪಂದ್ಯದಿಂದ ಹಿಂದೆ ಸರಿಯೊಂದೇ ಆಯ್ಕೆ. ಇದರ ಹೊರತಾಗಿ ಬೇರೆ ಯಾವುದೇ ಆಯ್ಕೆಗಳಿಲ್ಲ ಎಂದು ಬಾಂಗ್ಲಾದೇಶ್ ಕ್ರಿಕೆಟ್ ಬೋರ್ಡ್‌ಗೆ ಐಸಿಸಿ ತಿಳಿಸಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಇತ್ತ ಐಸಿಸಿಯ ಈ ಸೂಚನೆಯಿಂದಾಗಿ ಬಾಂಗ್ಲಾದೇಶ್ ಕ್ರಿಕೆಟ್ ಬೋರ್ಡ್ ಇಕ್ಕಟ್ಟಿಗೆ ಸಿಲುಕಿದೆ. ಏಕೆಂದರೆ ಈಗಾಗಲೇ ಭಾರತದಲ್ಲಿ ಟಿ20 ವಿಶ್ವಕಪ್ ಆಡಲ್ಲ ಎಂದು ಸೂಚಿಸಿರುವ ಬಿಸಿಬಿಗೆ ಐಸಿಸಿ ಕಡೆಯಿಂದ ಖಡಕ್ ಸೂಚನೆ ದೊರೆತಿದೆ. ಹೀಗಾಗಿ ಭಾರತದಲ್ಲಿ ಟಿ20 ವಿಶ್ವಕಪ್ ಆಡಬೇಕು ಇಲ್ಲ ಟೂರ್ನಿಯಿಂದ ಹೊರ ನಡೆಯಬೇಕು. ಒಂದು ವೇಳೆ ಟೂರ್ನಿಯಿಂದ ಹಿಂದೆ ಸರಿದರೆ ಬಾಂಗ್ಲಾದೇಶ್ ಕ್ರಿಕೆಟ್ ಬೋರ್ಡ್ ವಿರುದ್ಧ ಐಸಿಸಿ ಕ್ರಮ ಕೈ ಗೊಳ್ಳುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

# ವಿಜಯ್ ಹಜಾರೆ ಟ್ರೋಫಿಯಲ್ಲಿ ಯಾರೂ ಮಾಡಿರದ ಸಾಧನೆ ಮಾಡಿದ ಪಡಿಕ್ಕಲ್

ಕರ್ನಾಟಕದ ಭರವಸೆಯ ಯುವ ಬ್ಯಾಟರ್ ದೇವದತ್ ಪಡಿಕ್ಕಲ್ ಅವರು ವಿಜಯ್ ಹಜಾರೆ ಟ್ರೋಫಿಯಲ್ಲಿ ಐದನೇ ಶತಕ ಮಿಸ್ ಮಾಡಿಕೊಂಡಿರಬಹುದು. ಆದರೆ ಟೂರ್ನ ಮೂರು ವಿಭಿನ್ನ ಋತುಗಳಲ್ಲಿ 600ಕ್ಕೂ ಹೆಚ್ಚು ರನ್ ಗಳಿಸಿದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಒಟ್ಟಾರೆ ಈ ಋತುವಿನಲ್ಲಿ ಈವರೆಗೆ ಆಡಿರುವ 6 ಇನ್ನಿಂಗ್ಸ್ ಗಳಲ್ಲಿ 100.83 ಸರಾಸರಿಯಲ್ಲಿ 605 ರನ್ ಕಲೆ ಹಾಕಿದ್ದಾರೆ. ಈ ಹಿಂದೆ 2019-20ರ ಋತುವಿನಲ್ಲಿ 11 ಪಂದ್ಯಗಳಲ್ಲಿ 609 ರನ್ ಗಳಿಸಿ, ಆ ಋತುವಿನ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾದರು. ನಂತರ 2020-21ರಲ್ಲಿ, ಕೇವಲ 7 ಇನ್ನಿಂಗ್ಸ್‌ಗಳಲ್ಲಿ 147.40ರ ಸರಾಸರಿಯಲ್ಲಿ 737 ರನ್ ಗಳಿಸಿ ಕರ್ನಾಟಕವನ್ನು ಸೆಮಿಫೈನಲ್‌ಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಆ ಋತುವಿನಲ್ಲಿ ಅವರು 4 ಶತಕಗಳನ್ನು ಸಿಡಿಸಿದ್ದರು. ಈ ಪ್ರದರ್ಶನದಿಂದ ಅವರು 50-ಓವರ್ ಗಳ ಕ್ರಿಕೆಟ್‌ನಲ್ಲಿ ಪರಿಣತರಾಗಿ ಗುರುತಿಸಿಕೊಂಡರು.



ಐದನೇ ಶತಕ ಮಿಸ್

ಉತ್ಕೃಷ್ಟ ಬ್ಯಾಟಿಂಗ್ ಪ್ರದರ್ಶನ 2025-26ರ ವಿಜಯ್ ಹಜಾರೆ ಟ್ರೋಫಿಯಲ್ಲೂ ದೇವದತ್ ಪಡಿಕ್ಕಲ್ ತಮ್ಮ 600 ರನ್‌ಗಳಿಕೆಯ ಗಡಿ ದಾಟಿದ್ದಾರೆ. ಜಾರ್ಖಂಡ್ ವಿರುದ್ಧ 147, ಕೇರಳ ವಿರುದ್ಧ 124, ಪುದುಚೇರಿ ವಿರುದ್ಧ 113 ರನ್ ಮತ್ತು ತ್ರಿಪುರ ವಿರುದ್ಧ 108 ರನ್ ರನ್ ಗಳಿಸಿದ್ದರು. ಇದೀಗ ರಾಜಸ್ಥಾನ ವಿರುದ್ಧ 91 ರನ್‌ಗಳಿಸಿ ಔಟಾದರು. ಈ ಮೂಲಕ ಟೂರ್ನಿಯಲ್ಲಿ 5ನೇ ಶತಕವನ್ನು ಸ್ವಲ್ಪದರಲ್ಲೇ ತಪ್ಪಿಸಿಕೊಂಡರು. ತಮಿಳುನಾಡು ವಿರುದ್ಧ 22 ರನ್‌ಗಳಿಗೆ ಔಟಾಗಿದ್ದು ಬಿಟ್ಟರೆ ಮತ್ತೆಲ್ಲ ಇನ್ನಿಂಗ್ಸ್‌ನಲ್ಲೂ ಅವರಿಂದ ಉತ್ಕೃಷ್ಟ ಬ್ಯಾಟಿಂಗ್ ಪ್ರದರ್ಶನ ಬಂದಿದೆ. ಅಹ್ಮದಾಬಾದ್‌ನಲ್ಲಿ ಮಂಗಳವಾರ ರಾಜಸ್ಥಾನ ವಿರುದ್ಧ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡ 150 ರನ್ ಗಳ ಭರ್ಜರಿ ಜಯ ಗಳಿಸಿದೆ. ದೇವದತ್ ಪಡಿಕ್ಕಲ್ ಅವರು 82 ಎಸೆತಗಳಲ್ಲಿ 12 ಬೌಂಡರಿ ಮತ್ತು 2 ಸಿಕ್ಸರ್ ಗಳನ್ನು ಒಳಗೊಂಡ 91 ರನ್ ಗಳಿಸಿದರು. ನಾಯಕ ಮಾಯಾಂಕ್ ಅಗರ್ವಾಲ್ ಅವರೊಂದಿಗೆ 184 ರನ್ ಜೊತೆಯಾಟ ಆಡಿ ಕರ್ನಾಟಕದ ಇನ್ನಿಂಗ್ಸ್‌ಗೆ ಭದ್ರ ಬುನಾದಿ ಹಾಕಿದರು. ಮಾಯಾಂಕ್ ಅಗರ್ವಾಲ್ ಅವರು 107 ಎಸೆತಗಳಲ್ಲಿ 100 ರನ್ ಗಳಿಸಿದರು. ಅದರಲ್ಲಿ 9 ಬೌಂಡರಿ ಮತ್ತು 3 ಸಿಕ್ಸರ್ ಗಳಿದ್ದರು. ಇವರಿಬ್ಬರ ಉತ್ತಮ ಆಟದ ನೆರವಿನಿಂದ ಕರ್ನಾಟಕ ತಂಡ ನಿಗದಿತ 50 ಓವರ್‌ಗಳಲ್ಲಿ 324 ರನ್ ಗಳಿಸಿತು. ಇದಕ್ಕುತ್ತರವಾಗಿ ರಾಜಸ್ಥಾನ ತಂಡ ಪ್ರಸಿದ್ಧ ಕೃಷ್ಣ ಮಾರಕ ಬೌಲಿಂಗ್‌ಗೆ ತತ್ತರಿಸಿ 38 ಓವರ್‌ಗಳಲ್ಲಿ 174 ರನ್ ಗಳಿಗೆ ಆಲೌಟ್ ಆಯಿತು.



# ಕುತೂಹಲ ಘಟ್ಟದತ್ತ ಆ್ಯಶಸ್ ಟೆಸ್ಟ್: ಗೆಲ್ಲೋದು ಯಾರು?

ಸಿಡ್ನಿ ಕ್ರಿಕೆಟ್ ಗ್ರೌಂಡ್‌ನಲ್ಲಿ ನಡೆಯುತ್ತಿರುವ ಆ್ಯಶಸ್ ಸರಣಿಯ 5ನೇ ಪಂದ್ಯವು ಕುತೂಹಲ ಘಟ್ಟದತ್ತ ಸಾಗಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಬ್ಯಾಟಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ಪರ ಜೋ ರೂಟ್ 160 ರನ್‌ಗಳ ಭರ್ಜರಿ ಇನಿಂಗ್ಸ್ ಆಡಿದರು. ಈ ಶತಕದ ನೆರವಿನೊಂದಿಗೆ ಇಂಗ್ಲೆಂಡ್ ತಂಡವು ಪ್ರಥಮ ಇನಿಂಗ್ಸ್‌ನಲ್ಲಿ 384 ರನ್ ಪೇರಿಸಿತು. ಇದಕ್ಕುತ್ತರವಾಗಿ ಮೊದಲ ಇನಿಂಗ್ಸ್ ಆಡಿದ ಆಸ್ಟ್ರೇಲಿಯಾ ಪರ ಆರಂಭಿಕ ದಾಂಡಿಗ ಟ್ರಾವಿಸ್ ಹೆಡ್ 163 ರನ್‌ಗಳ ಇನಿಂಗ್ಸ್ ಆಡಿದರು. ಇನ್ನು ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಸ್ಟೀವ್ ಸ್ಮಿತ್ 138 ರನ್ ಕಲೆಹಾಕಿದರು. ಇಬ್ಬರು ದಾಂಡಿಗರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 567 ರನ್ ಕಲೆಹಾಕಿದೆ. ಆಸ್ಟ್ರೇಲಿಯಾ ತಂಡವು ಮೊದಲ ಇನಿಂಗ್ಸ್‌ನಲ್ಲಿ ಬರೋಬ್ಬರಿ 183 ರನ್‌ಗಳ ಮುನ್ನಡೆ ಸಾಧಿಸಿದೆ. ಅದರಂತೆ ಇದೀಗ ನಾಲ್ಕನೇ ದಿನದಾಟದಲ್ಲಿ ಬ್ಯಾಟಿಂಗ್ ಮಾಡುತ್ತಿರುವ ಇಂಗ್ಲೆಂಡ್ ತಂಡವು 183 ರನ್‌ಗಳನ್ನು ಕಲೆಹಾಕಿದ ಬಳಿಕವಷ್ಟೇ ಎರಡನೇ ಇನಿಂಗ್ಸ್‌ನ ರನ್ ಪರಿಗಣನೆಗೆ ಬರಲಿದೆ. ಹೀಗಾಗಿ ಈ ಪಂದ್ಯದಲ್ಲಿ ಗೆಲ್ಲಬೇಕಿದ್ದರೆ ಇಂಗ್ಲೆಂಡ್ ತಂಡವು ನಾಲ್ಕನೇ ದಿನದಾಟದಲ್ಲೇ ಬೃಹತ್ ಮೊತ್ತ ಪೇರಿಸಬೇಕು. ಅತ್ತ ಸಾಧಾರಣ ಮೊತ್ತ ಕಲೆಹಾಕಿದರೆ ಆಸ್ಟ್ರೇಲಿಯಾ ತಂಡ ಚೇಸ್ ಮಾಡುವುದು ಖಚಿತ. ಅಂದರೆ ಇಂಗ್ಲೆಂಡ್ ತಂಡವು ಕೊನೆಯ ದಿನದಾಟದಲ್ಲಿ ಆಸ್ಟ್ರೇಲಿಯಾಗೆ ಕನಿಷ್ಠ 350 ರನ್‌ಗಳ ಗುರಿಯನ್ನಾದರೂ ನೀಡಲೇಬೇಕು. ಅದಕ್ಕಿಂತ ಕಡಿಮೆ ಮೊತ್ತವನ್ನು ಅಂತಿಮ ದಿನದಾಟದಲ್ಲಿ ಆಸ್ಟ್ರೇಲಿಯಾ ಚೇಸ್ ಮಾಡುವುದು ಖಚಿತ. ಏಕೆಂದರೆ ಆಸ್ಟ್ರೇಲಿಯಾ ತಂಡವು ಈಗಾಗಲೇ 3-1 ಅಂತರದಿಂದ ಸರಣಿ ವಶಪಡಿಸಿಕೊಂಡಿದೆ.



# ವೈಭವ್ ಸಿಡಿಲಬ್ಬರದ ಶತಕಕ್ಕೆ ಹರಿಣಗಳು ಕಂಗಾಲು

ದಕ್ಷಿಣ ಆಫ್ರಿಕಾ ಹಾಗೂ ಭಾರತ ಅಂಡರ್-19 ತಂಡಗಳ ನಡುವೆ ನಡೆಯುತ್ತಿರುವ ಮೂರು ಪಂದ್ಯಗಳ ಯೂತ್ ಏಕದಿನ ಸರಣಿಯ ಕೊನೆಯ ಪಂದ್ಯ ನಡೆಯುತ್ತಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡುತ್ತಿರುವ ಭಾರತ ತಂಡಕ್ಕೆ ಉತ್ತಮ ಆರಂಭ ಸಿಕ್ಕಿದೆ. ಆರಂಭಿಕರಾದ ಆರನ್ ಜಾರ್ಜ್ ಹಾಗೂ ವೈಭವ್ ಸೂರ್ಯವಂಶಿ ಮೊದಲ ವಿಕೆಟ್‌ಗೆ ದ್ವಿಶತಕದ ಜೊತೆಯಾಟ ಕಟ್ಟಿದ್ದಾರೆ. ಇದೇ ವೇಳೆ ನಾಯಕ ವೈಭವ್ ಸೂರ್ಯವಂಶಿ ನಾಯಕನಾಗಿ ಚೊಚ್ಚಲ ಶತಕ ಬಾರಿಸಿ ಮಿಂಚಿದ್ದಾರೆ. ಈ ಮೂಲಕ ಯೂತ್ ಏಕದಿನ ಪಂದ್ಯದಲ್ಲಿ ಶತಕ ಬಾರಿಸಿದ ಅತಿ ಕಿರಿಯ ಬ್ಯಾಟ್ಸ್‌ಮನ್ ಎಂಬ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧ ವೈಭವ್ ಸೂರ್ಯವಂಶಿ 63 ಎಸೆತಗಳಲ್ಲಿ ಎಂಟು ಸಿಕ್ಸರ್ ಮತ್ತು ಆರು ಬೌಂಡರಿಗಳ ಸಹಿತ ಶತಕ ಬಾರಿಸಿದರು. ಶತಕದ ಬಳಿಕ ಗೇರ್ ಬದಲಿಸಿದ ವೈಭವ್ 10 ಸಿಕ್ಸರ್ ಮತ್ತು ಒಂಬತ್ತು ಬೌಂಡರಿಗಳನ್ನು ಒಳಗೊಂಡಂತೆ ಒಟ್ಟು 127 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇದು ವೈಭವ್ ಅವರ ಅಂಡರ್-19 ಏಕದಿನ ವೃತ್ತಿಜೀವನದಲ್ಲಿ ಮೂರನೇ ಶತಕವಾಗಿದೆ. ಈ ಹಿಂದೆ ಅವರು ಇಂಗ್ಲೆಂಡ್ ಮತ್ತು ಯುಎಇ ಅಂಡರ್-19 ತಂಡದ ವಿರುದ್ಧ ಎರಡು ಶತಕಗಳನ್ನು ಬಾರಿಸಿದ್ದರು. ಆದರೆ ನಾಯಕನಾಗಿ ವೈಭವ್‌ಗೆ ಇದು ಮೊದಲ ಶತಕವಾಗಿದೆ. ದಕ್ಷಿಣ ಆಫ್ರಿಕಾ ಪ್ರವಾಸವು ವೈಭವ್ ಸೂರ್ಯವಂಶಿಗೆ ನಾಯಕತ್ವದಿಂದಾಗಿ ಮಾತ್ರ ವಿಶೇಷವಾಗಿರಲಿಲ್ಲ. ಬದಲಿಗೆ ಇದು ವೈಭವ್ ಅವರ ಮೊದಲ ದಕ್ಷಿಣ ಆಫ್ರಿಕಾ ಪ್ರವಾಸವೂ ಆಗಿತ್ತು. ಏಕದಿನ ವಿಶ್ವಕಪ್‌ಗೆ ಸ್ವಲ್ಪ ಮೊದಲು ವೈಭವ್ ಸೂರ್ಯವಂಶಿ ತಮ್ಮ ದಕ್ಷಿಣ ಆಫ್ರಿಕಾ ಪ್ರವಾಸವನ್ನು ದಿಟ್ಟ ರೀತಿಯಲ್ಲಿ ಮುಗಿಸಿದ್ದು ಶ್ಲಾಘನೀಯ. ಈ ಪ್ರವಾಸದಲ್ಲಿ ಅವರು ಆಡಿದ ಮೂರು ಪಂದ್ಯಗಳಲ್ಲಿ ಒಂದು ಶತಕ ಮತ್ತು ಅರ್ಧಶತಕ ಸೇರಿದಂತೆ 206 ರನ್ ಕಲೆಹಾಕಿದರು. ಈ ಅವಧಿಯಲ್ಲಿ ಅವರ ಬ್ಯಾಟಿಂಗ್ ಸರಾಸರಿ 103 ಆಗಿತ್ತು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966